# ಕರ್ನಾಟಕ ವಿಕಾಸ

## Karnataka Vikas

November 2015
ನವೆಂಬರ್ 2015

## ಕನ್ನಡ ರಾಜ್ಯೋತ್ಸವದ ಶುಭಾಶಯಗಳು



## ದಿನಾಂಕ: 2.10.2015 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಗಾಂಧಿ ಗ್ರಾಮ ಪುರಸ್ಕಾರ ವಿತರಣಾ ಸಮಾರಂಭದ ಛಾಯಾಚಿತ್ರಗಳು.














# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ನವೆಂಬರ್ 2015 ಸಂಪುಟ : 56
Volume : 56

November 2015 ಸಂಚಿಕೆ : 12
Issue : 12

## ಈ ಸಂಚಿಕೆಯೊಳಗೆ


5. ಲೇಖನ – ಎನ್.ಆರ್. ಪಾಟೀಲ
– ನಾಗರತ್ನ ಆಚನೂರು
– ಎಲ್.ಎಸ್. ದಿನೇಶ
– ಸ. ರಾ. ಸುಳಕೂಡೆ
– ನಾಗರತ್ನ ಭಟ್
– ಉಮೇಶ್ ಹೆಚ್. ಸಿ.

32. ಅಭಿವೃದ್ಧಿ ಅಧಿಕಾರಿಯ ಅಂಗಳದಿಂದ – ಬಂಡೆಪ್ಪ ಜಿ. ತೇಲಿ

34. ಯಶೋಗಾಥೆ – ಗಿರೀಶ್ ಎಸ್. ಬೆನ್ನೂರ


36. ಕವಿಯ(ಕ್ಷ) ಪ್ರಶ್ನೆ? – ಸೋಮಶೇಖರ

37. ಕಾವ್ಯ ವಿಕಾಸ – ಶ್ರೀಕಾಂತ. ಹಾ. ಬಾಲೇಹೊಸೂರ

38. ಪಂಚತಂತ್ರ ವರದಿ

39. ಸಕಾಲ ವರದಿ

40. ಸುತ್ತೋಲೆಗಳು



ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**
ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ



ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 2235857
www.rdpr.kar.nic.in
Email : kvrdpr@gmail.com


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಅಕ್ಟೋಬರ್ 2015ರ ಕರ್ನಾಟಕ ವಿಕಾಸ ಪತ್ರಿಕೆಯು ವಾಚಕರಿಗೆ ಸ್ಪೂರ್ತಿದಾಯಕ ಲೇಖನ ಹಾಗೂ ಕೃಷಿರಂಗಕ್ಕೆ ಉಪಯೋಗಕರ ಮಾಹಿತಿ ಹೊತ್ತು ತಂದಿದೆ. ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆ ಮತ್ತು ಅದರ ಪ್ರಯೋಜನ ಅಪಾರವಾದುದು. ಮಾನವನ ಬದುಕಿಗೆ ನೀರಿನ ಉಪಯೋಗ ಅತಿ ಮಹತ್ವದ್ದಾಗಿದೆ. ಈ ಕುರಿಯು ಸಚಿವಾಲಯದಿಂದ ಸಂದೇಶ ಸ್ವಾಗತಾರ್ಹ. ಗ್ರಾಮೀಣ ಪ್ರದೇಶದಲ್ಲಿ ಗರಡಿಮನೆಗಳು, ಸಾಂಸ್ಕೃತಿಯ ಕೇಂದ್ರವಾಗಿದ್ದು, ಪೈಲವಾನರನ್ನು ಸಿದ್ದಗೊಳಿಸುವ ಆ ಗರಡಿಮನೆಗಳು ಇಂದು ನಾಪತ್ತೆಯಾಗಿ ಕಾಂಕ್ರಿಟ್ ಬಿಲ್ಡಿಂಗ್ ತಯಾರಾಗಿವೆ. ಗಾಂಧೀಜಿ ಮತ್ತು ಯುವಜನತೆ ಯುವಕರಿಗೆ ಉತ್ಸಾಹ ತುಂಬುವಂತಹದಾಗಿದೆ.

**ಶ್ರೀ ಹಣಮಂತರಾಯ ವಿ. ಚೌಡಾಪುರ**
ಕಾಸರಬೋಸಗ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ

ಕರ್ನಾಟಕ ವಿಕಾಸ ಪತ್ರಿಕೆಯು ನಮ್ಮ ಊರಿನ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಲಭ್ಯವಿದ್ದು, ತುಂಬಾ ಉತ್ತಮವಾಗಿ, ಅರ್ಥಪೂರ್ಣವಾಗಿ ಯೋಗ್ಯವಾಗಿ ಮೂಡಿಬರುತ್ತಿದೆ. ಲೇಖನಗಳು ತುಂಬಾ ಚೆನ್ನಾಗಿ ಮೂಡಿ ಬರುತ್ತಿವೆ. ಗ್ರಾಮೀಣ ಜನರ ಮೂಲಭೂತ ಅವಶ್ಯಕತೆಗಳ ಅಭಿವೃದ್ಧಿ ಪ್ರಗತಿ ಇನ್ನೂ ಸಾಧಿಸಬಹುದಾದ ಬಗ್ಗೆ ತುಂಬಾ ವಿವರವಾಗಿ ತಿಳಿಸುತ್ತಿದೆ. ಗ್ರಾಮೀಣ ಜನರಿಗೆ ಈ ಪತ್ರಿಕೆ ಸಂಜೀವಿನಿಯಾಗಿದೆ. ತುಂಬಾ ಒಳ್ಳೆಯ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ.

**ಶ್ರೀ ಸಂತೋಷ್ ಎಸ್. ಆಚಾರ್ಯ**
ದುಬಲಗುಂಡಿ ಪೋಸ್ಟ್
ಹುಮನಾಬಾದ್ ತಾಲ್ಲೂಕು, ಬೀದರ ಜಿಲ್ಲೆ – 585418

ನಮ್ಮ ನೆಚ್ಚಿನ ಕರ್ನಾಟಕ ವಿಕಾಸ ಅಕ್ಟೋಬರ್ 2015ರ ಸಂಚಿಕೆಯ ಮುಖಪುಟದಲ್ಲಿ ಮೈಸೂರು ದಸರಾ ದರ್ಬಾರಿನ ಆನೆಯ ಮೆರವಣಿಗೆ ಚಿತ್ರ ಬಹಳ ಚೆನ್ನಾಗಿ ಮೂಡಿಬಂದಿದೆ. ಮೇಲೆ ಗಾಂಧೀಜಿಯವರ ಚಿತ್ರ ಹಾಗೂ ಡಾ॥ಎಂ.ಡಿ.ಉಮೇಶ ಅವರ ಗಾಂಧೀಜಿ ಮತ್ತು ಯುವ ಜನತೆ ಲೇಖನ ಬಹಳ ಚೆನ್ನಾಗಿತ್ತು. ಶೌಚಾಲಯದ ಸ್ವಚ್ಛತೆ, ಉದ್ಯೋಗ ಖಾತರಿ ಬಳಸಿ ದನದ ಕೊಟ್ಟಿಗೆ ನಿರ್ಮಿಸಿದ್ದು, ಕರ್ನಾಟಕದ ತಾಲ್ಲೂಕುಗಳ ಬರಗಾಲ ಪ್ರದೇಶದ ಘೋಷಣೆಗಳು ಹಾಗೂ ಸವಳು ಭೂಮಿಯಲ್ಲಿ ಮೀನು ಕೃಷಿಯ ಮಾಹಿತಿ, ವಿವಿಧ ಲೇಖಕರಿಂದ ವಿವಿಧ ಲೇಖನಗಳು ಚೆನ್ನಾಗಿದ್ದವು.

**ಶ್ರೀ ಕೊತ್ತಲ ಮಹದೇವಪ್ಪ**
ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116,

ಕರ್ನಾಟಕ ವಿಕಾಸ ಪತ್ರಿಕೆ ಓದುಗರ ಮನವನ್ನು ಮುದಗೊಳಿಸಿ ಹೃದಯವನ್ನು ಅರಳಿಸಿ ಜೀವನವನ್ನು ಉತ್ಕರ್ಷಗೊಳಿಸಲು ಉಪಯುಕ್ತವಾಗಿದೆ ವೈವಿಧ್ಯಮಯವಾದ ಲೇಖನಗಳಿಂದ ಗ್ರಾಮೀಣಾಭಿವೃದ್ಧಿಗೆ ಹಾಗೂ ಸಮಷ್ಟಿಯ ಸರ್ವಾಂಗೀಣ ಪ್ರಗತಿಗೆ ಸಹಕಾರಿಯಾಗಿದೆ. ಅಕ್ಟೋಬರ್ 2015ರ ಸಂಚಿಕೆಯ ಮುಖಪುಟ ಚಿತ್ತಾಕರ್ಷಕವಾಗಿತ್ತು. ಸಚಿವಾಲಯದಿಂದ ಸಂದೇಶ ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುಭಾಷ್ ಚಂದ್ರರವರ ವಿಚಾರಗಳು ಮನನೀಯವಾಗಿದ್ದವು. ಜೀವನ ಜಲವಾದ ನೀರಿನ ಅವಶ್ಯಕತೆ ಹಳ್ಳಿಗಳಲ್ಲಿ ಎಷ್ಟಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಇದು ಉಪಯುಕ್ತವಾಗಿದೆ.

**ಶ್ರೀ ಬಸವರಾಜ ಹೂಗಾರ,**
ಮುಕ್ಕಾ ಅಂಚೆ, ಹಿರೇಸಿಂಗನಗುತ್ತಿ, ಹುನಗುಂದ ತಾಲ್ಲೂಕು,
ಬಾಗಲಕೋಟೆ – 587154

ಲೇಖನ

# ಹೊತ್ತಿತೋ ಹೊತ್ತಿತು ಕನ್ನಡದ ದೀಪ



ಎನ್.ಆರ್. ಪಾಟೀಲ

1956ರ ನವೆಂಬರ್ 1, ಪ್ರತಿಯೊಬ್ಬ ಕನ್ನಡಿಗನ ಕನಸು ನನಸಾದ ದಿನ. ಸ್ವಾತಂತ್ರ್ಯ ಪೂರ್ವದಿಂದಲೂ ಅಖಂಡ ಕನ್ನಡನಾಡಿನ ಕನಸು ಕಾಣುತ್ತಿದ್ದ ಸಕಲ ಕನ್ನಡಿಗರ ದಶಕ-ದಶಕಗಳ ಸಾಧನೆ ಸಾಕಾರವಾದ ದಿನ. ಕನ್ನಡಿಗರ ಬಹುದಿನದ ಅಖಿಲ ಕರ್ನಾಟಕದ ಕಲ್ಪನೆಯ ಕಲ್ಪವೃಕ್ಷ ಸಾಕ್ಷಾತ್ಕಾರಗೊಂಡ ದಿನ. ತಾಯಿ ಭುವನೇಶ್ವರಿಯು ಕನ್ನಡ ಕುಲಕೋಟಿಯ ತನ್ನ ಮಕ್ಕಳನ್ನೆಲ್ಲ ಉದ್ಧರಿಸಲು ಅವತರಿಸಿ ಬಂದ ಶುಭದಿನ. ವಿಶಾಲ ಕರ್ನಾಟಕದ ಉದಯದೊಂದಿಗೆ "ಕನ್ನಡಾಂಬೆ"ಯ ಆಗಮನವಾದ ದಿನ. ದೀರ್ಘಕಾಲದ ತಮ್ಮ ಬಯಕೆ ಈಡೇರಿ ಸಮಸ್ತ ಕನ್ನಡಿಗರು ಸಂಭ್ರಮಿಸಿದ ದಿನ. ಆ ಪುಳಕಿತ ಸಂಭ್ರಮದ ಘಳಿಗೆಯನ್ನು ಕರ್ನಾಟಕ ರಾಜ್ಯೋತ್ಸವದ ಈ ಸಡಗರದಂದು ನೆನಪಿಸಿಕೊಳ್ಳೋಣ ಬನ್ನಿ. ಆ ಸಂಭ್ರಮ ಆ ಸಡಗರ.



ಕನ್ನಡ ನಾಡು ಉದಯಿಸಿ ಅರ್ಧ ಶತಮಾನಕ್ಕಿಂತಲೂ ಹೆಚ್ಚಾಗಿದೆ. ಇದು ರಾಜ್ಯದ ಅಭಿವೃದ್ಧಿಗೆ ಕಡಿಮೆ ಅವಧಿ ಏನೂ ಅಲ್ಲ. ಅದಕ್ಕೆ ತಕ್ಕಂತೆ ರಾಜ್ಯದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ.

ಪ್ರಿಯ ಓದುಗರೇ, ಕರ್ನಾಟಕ ರಾಜ್ಯೋತ್ಸವದ ಆ ಸಡಗರ ಆ ಸಂಭ್ರಮವನ್ನು ಆಸ್ವಾದಿಸಲು ದೇಶದ ಸ್ವಾತಂತ್ರ್ಯ ಪೂರ್ವದ ಆ ಹೋರಾಟದ ದಿನಗಳತ್ತ ನಿಮ್ಮನ್ನು ಕರೆದುಕೊಂಡು ಹೋಗುತ್ತಿದ್ದೇನೆ. ಕನ್ನಡ ನಾಡು, ನುಡಿ, ಸಂಸ್ಕೃತಿಗಳು ನೆರೆಹೊರೆಯ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕಾಲವದು. ದೇಶದಲ್ಲಿಯ ಆಂಗ್ಲರ ಆಡಳಿತವನ್ನು ಅಂತ್ಯಗೊಳಿಸುವ ಸ್ವಾತಂತ್ರ್ಯದ ದಿಟ್ಟ ಹೋರಾಟದೊಂದಿಗೆ ಸಕಲ ಕನ್ನಡಿಗರನ್ನು ಒಂದುಗೂಡಿಸುವ ವಿಶಾಲ ಕರ್ನಾಟಕದ ಕನಸು ಹಲವಾರು ಕನ್ನಡ ದಿಗ್ಗಜರಲ್ಲಿ ಮೊಳಕೆಯೊಡೆದು ಮರವಾಗಿ ಬೆಳೆಯುವುದರ ಕಡೆಗೆ ದಾಪುಗಾಲಿಕ್ಕಿತ್ತು. ಸಕಲ ಕನ್ನಡಿಗರು ಒಂದಾಗಿ ತನ್ನದೇ ಆದ ನೆಲ, ಜಲ, ಕಾಡುಗಳೊಂದಿಗೆ ಭವ್ಯ ಸುಂದರ ನಾಡೊಂದನ್ನು ಅಸ್ತಿತ್ವಕ್ಕೆ ತರುವ ಅಂದಿನ ಕನ್ನಡಿಗ ಹೋರಾಟಗಾರರನ್ನು ನೆನೆಸಿಕೊಂಡರೇನೆ ಮೈ-ಮನ ಪುಳಕಗೊಳ್ಳುತ್ತವೆ.

"ಅಮೃತವರ್ಷಿಣಿ"ಮನೆ ಸಂಖ್ಯೆ-3430, ಪ್ಲಾಟ್ ಸಂಖ್ಯೆ 21/ಬಿ, ಹೊಸ ಸಮರ್ಥ ಕಾಲೋನಿ,
ಲಕ್ಷ್ಮೀ ನಗರ ಹಿಂಡಲಗಾ -591108 , ಮೊ. : 9449008885

ಕರ್ನಾಟಕದ ಏಕೀಕರಣ ಹಾಗೂ ವಿಶಾಲ ಕರ್ನಾಟಕದ ಉದಯದ ಹೋರಾಟದ ಹಾದಿಯಲ್ಲಿ ನಮ್ಮ ಕನ್ನಡದ ವರಕವಿಗಳನ್ನು, ಸಾಹಿತ್ಯ ದಿಗ್ಗಜರನ್ನು ಮರೆಯುವಂತಿಲ್ಲ. ಸರ್ವ ಕನ್ನಡಿಗರಲ್ಲಿ ಹೋರಾಟದ ಕಿಚ್ಚು ಹಚ್ಚಿಸಿದವರೇ ನಮ್ಮ ಕವಿಗಳು–ಸಾಹಿತಿಗಳು. ರಾಷ್ಟ್ರಕವಿ ಕುವೆಂಪುರವರು "ಬಾರಿಸು ಕನ್ನಡ ಡಿಂಡಿಮವ", ವರಕವಿ ಬೇಂದ್ರೆಯವರ "ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?..... ಗಂಡುಸಾದರೆ ನಿನ್ನ ಬಲಿಕೊಡುವೆಯೇನು?", ರಾಜರತ್ನಂ ರವರ "ನರಕಕ್ಕಿಳಿಸಿ ನಾಲ್ಗೆ ಸೀಳ್ಸಿ, ಬಾಯ್ ಒಲಿಸಾಕಿದ್ರೂನೇ, ಮೂಗ್ನಲ್ಕನ್ನಡ್ಪ ಮಾತಾಡ್ತೀನಿ ನನ್ಮನ್ನ ನೀ ಕ್ಕಾಣೆ"......... ಇನ್ನೂ ಅನೇಕ ಕವಿಗಳು ತಂತಮ್ಮ ಕವನಗಳ ಮೂಲಕ ಕನ್ನಡದ ಕ್ರಾಂತಿಗೆ ಕರೆ ನೀಡಿದರು. ಕನ್ನಡದ ಸಾಹಿತಿಗಳು, ಚಿಂತಕರು, ವಿದ್ವಾಂಸರು, ರಾಜಕೀಯ ಮುತ್ಸದ್ದಿಗಳು ಹರಿದು ಹಂಚಿ ಹೋಗಿದ್ದ ಕನ್ನಡದ ನೆಲದುದ್ದಕ್ಕೂ ಸಂಚರಿಸಿದರು. ಕನ್ನಡಿಗರಲ್ಲಿ ತಮ್ಮ ಕವನ, ಭಾಷಣ, ಲೇಖನಗಳ ಮೂಲಕ ಸಕಲ ಕನ್ನಡಿಗರಲ್ಲಿ ಸಂಚಲನ ಮೂಡಿಸಿದರು. ಅವರೆದೆಯಲ್ಲಿ ಕನ್ನಡ ನಾಡು–ನುಡಿಯ ಸ್ವಾಭಿಮಾನದ ಜ್ಯೋತಿ ಪ್ರಜ್ವಲಿಸಿದರು. ಕನ್ನಡದಲ್ಲಿ ಕನ್ನಡದ ಜ್ಯೋತಿ ಪ್ರಜ್ವಲಿಸಿದ ಅಂಥಹ ಕೆಲವು ಕವನಗಳನ್ನು ಇಲ್ಲಿ ಕೇಳಿ ಆನಂದಿಸೋಣ ಬನ್ನಿ– ಕನ್ನಡದ ನಾಡು–ನುಡಿಯ ಸೇವೆಯೇ ಕನ್ನಡಿಗನ ಬದುಕಿನ ಗುರಿ ಎಂದು ಹೇಳುತ್ತ ಕುವೆಂಪು ಅವರು ಹಾಡುತ್ತಾರೆ–

ಬಾಳುವುದೇತಕೆ ನುಡಿ ಎಲೆ ಜೀವ
ಸಿರಿಗನ್ನಡದಲ್ಲಿ ಕವಿತೆಯ ಹಾಡೆ
ಸಿರಿಗನ್ನಡದೇಳಿಗೆಯನು ನೋಡೆ
ಕನ್ನಡ ತಾಯಿಯ ಸೇವೆ ಮಾಡೆ

**ಬೆನಗಲ್ ರಾಮರಾಯರು ಹಾಡುತ್ತಾರೆ–**

ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ
ಕನ್ನಡವೆ ಎನ್ನುಸಿರು ಪೆತ್ತೆನ್ನ ತಾಯಿ
ಕನ್ನಡವೇ ಧನದಾನ್ಯ ಕನ್ನಡವೇ ಮನೆ ಮಾನ್ಯ
ಕನ್ನಡವೇ ಎನಗಾಯ್ತು ಕಣ್ಣು ಕಿವಿ ಬಾಯಿ

**ಬೇಂದ್ರೆಯವರು ಬರೆದರು–**

ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ
ಕನ್ನಡ ಮಾತೇ ಮಾತೆಯು ಕರ್ನಾಟಕ ಒಂದೇ
.....ಇದನೊಪ್ಪದ ಹೆರವರು ಅವರಿದ್ದರು ಒಂದೇ
ಇರದಿದ್ದೂ ಒಂದೇ

ಕನ್ನಡ ನಾಡನ್ನು ಕಟ್ಟಲು ಮುಂದಾಗಿರುವ ಕನ್ನಡಿಗನ ಅದಮ್ಯ ಉತ್ಸಾಹ, ನಮ್ಮ ನಾಡನ್ನು ನಾವು ಕಟ್ಟೇ ತೀರುವೇವು ಎಂಬ ಅಚಲ ನಿರ್ಧಾರ ಹಾಗೂ ಕನ್ನಡಾಂಬೆಯ ಹಿರಿಮೆ ಗರಿಮೆಗಳನ್ನು ವಿಶ್ವದೆತ್ತರಕ್ಕೆ ಹಾರಿಸುವ ಛಲಗಳನ್ನು ಪರಿಚಯಿಸುವ ಡಿ.ಎಸ್ ಕರ್ಕಿಯವರು ಹಾಡುತ್ತಾರೆ–

ನರ ನರವನೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಕನ್ನಡದ ದೀಪ
ಹೊಮ್ಮಿರಲು ಪ್ರೀತಿ ಎಲ್ಲಿಹುದು ಭೀತಿ? ನಾಡೊಲನೆ ನೀತಿ ಹಿಡಿ ನೆನಪ
ಮನೆಮನೆಗಳಲ್ಲಿ ಮನಮನಗಳಲ್ಲಿ ಹಚ್ಚೇವು ಕನ್ನಡದ ದೀಪ
ಇಹುದೆಮಗೆ ಛಲವು, ಕನ್ನಡದ ಒಲವು ಕನ್ನಡದ ಒಲವು ಹಿಡಿ ನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ ಹಚ್ಚೇವು ಕನ್ನಡದ ದೀಪ

ಒಟ್ಟಾರೆಯಾಗಿ ಕನ್ನಡದ ಕವಿಗಳು ಜನಮನದಲ್ಲಿ ನಾಡು ಕಟ್ಟುವ ಒಲವು ಛಲ, ಧೈರ್ಯಗಳನ್ನು ತಂತಮ್ಮ ಕವನಗಳ ಮೂಲಕ ಬಿತ್ತಿದರು. ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ., ಸಾಲಿರಾಮಚಂದ್ರರಾಯರು, ಆನಂದಕಂದ, ತಿ.ನಂ.ಶ್ರೀ., ವಿ.ಸಿ... ಇನ್ನೂ ಅನೇಕ ಕವಿಪುಂಗವರು ಕನ್ನಡ ನಾಡು ಕಟ್ಟುವ ಆಶೆಯನ್ನು ಕನ್ನಡಿಗರಲ್ಲಿ ಬಡಿದೆಬ್ಬಿಸಿದರು. ತಂತಮ್ಮ ಕವನಗಳ ಮೂಲಕ ಕನ್ನಡ ನಾಡು–ನುಡಿಯ ಪ್ರಾಚೀನ ವೈಭವವನ್ನು ಜನಮನಕ್ಕೆ ತಿಳಿಸಿ ಕನ್ನಡದ ಪರಂಪರೆಯ ದರ್ಶನ ಮಾಡಿಸಿದರು. ತಮ್ಮ ಕವನಗಳಲ್ಲಿ ಕನ್ನಡಾಂಬೆಯನ್ನು ಪ್ರತಿಷ್ಠಾಪಿಸಿ, ಅವಳನ್ನೇ ಕನ್ನಡಿಗರ ದೇವರೆಂದು ಬಿಂಬಿಸಿ, ಕನ್ನಡಕ್ಕಾಗಿ ಹೋರಾಡಲು ಶಕ್ತಿ ಕೊಡು ಎಂದು ಬೇಡಿ ಕೋಳ್ಳುವ ಪ್ರಾರ್ಥನಾ ಗೀತೆಗಳನ್ನೂ ಕವಿಗಳು ರಚಿಸಿದರು. ಅವು ಕನ್ನಡಿಗರಲ್ಲರೂ ಒಂದಾಗುವ ಹೋರಾಟಕ್ಕೆ ಶಕ್ತಿ ತುಂಬಿದವು. ಶಾಂತ ಕವಿಗಳು ಕನ್ನಡಾಂಬೆಯಲ್ಲಿ ಬೇಡಿಕೊಳ್ಳುತ್ತಾರೆ–"ರಕ್ಷಿಸು ಕರ್ನಾಟಕದೇವಿ ಸಂರಕ್ಷಿಸು ಕರ್ನಾಟಕದೇವಿ........"

ಗೋವಿಂದ ಪೈ ಅವರು ಕನ್ನಡ ತಾಯಿಯನ್ನು ಪ್ರಾರ್ಥಿಸುತ್ತಾರೆ–

ತಾಯಿ ಬಾರೆ ಮೊಗವ ತೋರೆ ಕನ್ನಡಿಗರ ಮಾತೆಯೆ

ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ

ಇದೇ ಹಾಡಿನ ಕೊನೆಯ ಸಾಲುಗಳಲ್ಲಿ ಗೋವಿಂದ ಪೈ ಅವರು ಕನ್ನಡದೇವಿಯನ್ನು ಹೀಗೆ ಹೃದಯ ತುಂಬಿ ಪ್ರಶ್ನಿಸುತ್ತಾರೆ–

ನಮ್ಮದೆಯಂ ತಾಯೆ ಬಲಸು
ಎಲ್ಲರ ಬಾಯಲ್ಲಿ ನೆಲೆಸು
ನಮ್ಮ ಮನವನೊಂದೆ ಕಲಸು
ಇದನೊಂದನೇ ಕೋರುವೆ
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ?

ನಾಡು–ನುಡಿಯ ಈ ಕಾರ್ಯದಲ್ಲಿ ಕನ್ನಡ ದಿನಪತ್ರಿಕೆಗಳು ನಿರ್ವಹಿಸಿದ ಪಾತ್ರವೂ ಶ್ಲಾಘನೀಯವಾದುದು. ಕನ್ನಡ ನಾಡು–ನುಡಿಗೆ ಸೇವೆ ಸಲ್ಲಿಸುವ ಮೂಲ ಉದ್ದೇಶದಡಿ ಉತ್ತರ ಕರ್ನಾಟಕದಲ್ಲಿ "ಕರ್ನಾಟಕ ವಿದ್ಯಾವರ್ಧಕ ಸಂಘ" ಹಾಗೂ " ಮೈಸೂರು ಪ್ರದೇಶದಲ್ಲಿ ಕನ್ನಡ ಸಾಹಿತ್ಯ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದವು. "ಸಿರಿಗನ್ನಡಂ ಬಾಳ್ಗೆ" ಎಂದು ರಾ.ಹ.ದೇಶಪಾಂಡೆಯವರು ಘೋಷಿಸಿದರೆ, "ಸಿರಿಗನ್ನಡಂ ಬಾಳ್ಗೆ" ಎಂದು ಬಿ.ಎಂ.ಶ್ರೀ ಅವರು ಸಾರಿದರು. ಈ ಘೋಷಣೆಗಳು ಎಲ್ಲ ಕನ್ನಡಿಗರ ಬಾಯಲ್ಲಿ ಮಹಾಮಂತ್ರಗಳಂತೆ ಕೇಳಿ ಬರತೊಡಗಿದವು. ಆಲೂರು ವೆಂಕಟರಾಯರ "ಕರ್ನಾಟಕ ಗತವೈಭವ" ಪ್ರಾಚೀನ ಕನ್ನಡ ನಾಡಿನ ನೆಲ–ಜಲಗಳ ಪೂರ್ಣ ಪರಿಚಯ ಮಾಡಿಕೊಡುತ್ತ ಸಕಲ ಕನ್ನಡಿಗರು ಹೆಮ್ಮೆ ಪಡುವಂತೆ ಮಾಡಿತು. ಕನ್ನಡ ನಾಡು–ನುಡಿಯ ವೈಭವ ಅರಿತ ಅಸಂಖ್ಯಾತ ಕನ್ನಡಿಗರು ಕರುನಾಡಿನ ಅಸ್ತಿತ್ವಕ್ಕೆ ಪಣ ತೊಟ್ಟರು. ದೇಶದ ಸ್ವಾತಂತ್ರ್ಯದ ಹೋರಾಟದ ಜೊತೆಜೊತೆಗೆ ವಿಶಾಲ ಕರ್ನಾಟಕದ ರಚನೆಯ ಆಂದೋಲನವೂ ಜೋರಾಗಿಯೇ ನಡೆದಿತ್ತು. 1924ರಲ್ಲಿ ಮಹಾತ್ಮಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲೂ ಅಖಂಡ ಕರ್ನಾಟಕದ ಮಾತೂ ಕೇಳಿ ಬಂದವು.

1936ರಲ್ಲಿ ಕರ್ನಾಟಕ ಕುಲಪುರೋಹಿತರಾದ ಆಲೂರ ವೆಂಕಟರಾಯರ ನೇತೃತ್ವದಲ್ಲಿ ಕನ್ನಡ ನಾಡಿನ ಹೆಮ್ಮೆಯ ಭೂಮಿ, ವೀರರಸರು ಮೆಟ್ಟಿದ ತಾಣವಾದ ವಿಜಯನಗರದರಸರ ರಾಜಧಾನಿ ಹಂಪೆಯಲ್ಲಿ ಸಮಾರಂಭವೊಂದು ಜರುಗಿತು. ಅದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ 600 ವರ್ಷಗಳನ್ನು ಪೂರೈಸಿದ ಸ್ಮರಣೆಯ ಸಮಾರಂಭ. ಈ ಸಮಾರಂಭದಲ್ಲಿ ಕನ್ನಡದ ದಿಗ್ಗಜರೆಲ್ಲ ಭಾಗವಹಿಸಿದ್ದರು ಅಲ್ಲಿ ಕನ್ನಡ ನಾಡು ಕಟ್ಟವುದನ್ನು ಕುರಿತು ಸಮಗ್ರ ಚಿಂತನ–ಮಂಥನಗಳು ನಡೆದವು. ನಾಡು–ನುಡಿಯ ಏಳ್ಗೆಗಾಗಿ ಎಲ್ಲರೂ ಪ್ರತಿಜ್ಞೆಗೈದರು. ಅನೇಕ ಯೋಜನೆಗಳನ್ನು ಹಮ್ಮಿಕೊಂಡರು. ಒಟ್ಟಾರೆಯಾಗಿ ಸಕಲ ಕನ್ನಡಿಗರ ಹೋರಾಟಕ್ಕೆ ಕನ್ನಡಾಂಬೆ ಜಯ ತಂದಿತ್ತಳು. ನವೆಂಬರ್ 1, 1956, ವಿಶಾಲ ಕರ್ನಾಟಕದ ಉದಯವಾಯಿತು. ಆ ಸಂಭ್ರಮದಲ್ಲಿ ಕಾವ್ಯಾನಂದರು ಮೈಮರೆತು ಹಾಡಿದರು–

ಹೊತ್ತಿತೋ ಹೊತ್ತಿತು ಕನ್ನಡದ ದೀಪ
ಮುಗಿಯಿತೋ ಮಗಿಯಿತು ಶತಮಾನಗಳ ಶಾಪ
ಚಿರಕಾಲ ಬೆಳಗಲಿ ಕನ್ನಡದ ದೀಪ
ಜನಕ್ಕೆಲ್ಲ ಬೆಳಕಾಗಿ ಪುಣ್ಯ ಪ್ರದೀಪ
ಭಾರತಕ್ಕೆ ಬಲವಾಗಿ ಭವ್ಯ ಪ್ರದೀಪ
ಕಳೆಯುತ್ತ ತಾಪ ಬೆಳೆಸುತ್ತ ಸೈಪ
ಹೊತ್ತಿತೋ ಹೊತ್ತಿತು ಕನ್ನಡದ ದೀಪ

ಕೆ.ಎಸ್. ನರಸಿಂಹಸ್ವಾಮಿಯವರು ಮನದುಂಬಿ ಹಾಡಿದರು–

ಕನ್ನಡದ ಬದುಕು ತಲೆಯೆತ್ತಿ ನಿಂತ
ಮಂಗಳ ಮುಹೂರ್ತದಲ್ಲಿ
ಮನೆಮನೆಯ ಮುಂದೆ ಮುಂಬೆಳಗಿನಲ್ಲಿ
ಸಂತಸದ ರಂಗವಲ್ಲಿ
ನಗುತಿಹಳು ತಾಯಿ ಕನ್ನಡದ ದೇವಿ
ಬಾನೆದೆಗೆ ಮುತ್ತು ಕೊಟ್ಟು
ದುಡಿವವರ ಕಟ್ಟಿಗುಸಿರನ್ನು ತುಂಬಿ ಕಣ್ಣಲ್ಲಿ ದೀಪವಿಟ್ಟು

ವಿಶಾಲ ಕರ್ನಾಟಕಕ್ಕೆ ಮುದ್ರೆ ಬಿದ್ದಾಗ ಸಕಲ ಕನ್ನಡಿಗರು ಕುಣಿದು ಕುಪ್ಪಳಿಸಿದರು. ತಮ್ಮ ಬಹುಕಾಲದ ಬಯಕೆ ಈಡೇರಿ ಸಂಭ್ರಮಿಸಿದರು.

ರಾಮರಾಜ್ಯವನ್ನೇ ಕಟ್ಟುವ ಕನಸು ಕಂಡರು. ಸರ್ವ ಕನ್ನಡಿಗರ ಸಮಾನತಾ ಸಾಮ್ರಾಜ್ಯವನ್ನು ಕಟ್ಟುವ ಕಾರ್ಯದಲ್ಲಿ ಜಯ ನೀಡೆಂದು ಕನ್ನಡ ಕುಲಕೋಟಿಯ ಪರವಾಗಿ ಕನ್ನಡತಾಯಿಯಲ್ಲಿ ಕೆ.ಎಸ.ಎನ್.ರು ಹೀಗೆ ಪ್ರಾರ್ಥಿಸಿದರು–

ಹೊಸತೊಂದು ನಾಡು ಕಟ್ಟುವೆವು ತಾಯೆ
ಬೆನ್ತಟ್ಟಿ ಮುಂದೆ ಕಳಿಸು
ಮುಂದಿಟ್ಟ ಹೆಜ್ಜೆ ಹಿಂದೆಗೆಯದಂತೆ
ನಡೆಯುವದ ನಮಗೆ ಕಲಿಸು
ಮೈ ಬೆವರ ಸುರಿಸಿ ದುಡಿವಂತೆ ಮಾಡು
ಒಳಭೇದವನ್ನು ಅಳಿಸು
ಬಡತನ ತೊಡೆವ ಸಂಗ್ರಾಮದಲ್ಲಿ
ಶುಭವನ್ನು ನಮಗೆ ಹರಸು.

ಆದರೆ............

ಕನ್ನಡ ನಾಡು ಉದಯಿಸಿ ಇಂದಿಗೆ 57 ವರ್ಷಗಳು. ಅರ್ಧ ಶತಮಾನ ಒಂದು ರಾಜ್ಯದ ಅಭಿವೃದ್ಧಿಗೆ ಕಡಿಮೆ ಏನೂ ಅಲ್ಲ. ಅದಕ್ಕೆ ತಕ್ಕಂತೆ ರಾಜ್ಯದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ವಿಜ್ಞಾನ, ಕಲೆ, ಸಾಹಿತ್ಯ, ಕೃಷಿ, ಶೈಕ್ಷಣಿಕ ವಲಯಗಳಲ್ಲಿ ಗಮನಾರ್ಹ ಸಾಧನೆ ಮಾಡಲಾಗಿದೆ. ಆದರೂ ಕನ್ನಡದ ನೆಲದಲ್ಲಿ ಎಲ್ಲವೂ ಚೆನ್ನಾಗಿಲ್ಲ ಎಂಬ ಭಯ ಪ್ರಜ್ಞಾವಂತರನ್ನು ಕಾಡುತ್ತಲಿರುವುದು ಸತ್ಯ. ಅರಾಜಕತೆ ನಮ್ಮನು ಬಹು ವರ್ಷಗಳಿಂದ ಕಾಡಿದ್ದೂ ಇದೆ. ಹಿಂದಿನ ಬಾಜಪ ಸರ್ಕಾರವನ್ನು ಕನ್ನಡಿಗರು ತುಂಬ ಆಶೆ – ಆಕಾಂಕ್ಷೆಗಳಿಂದ ಆರಿಸಿ ಮೊದಲ ಬಾರಿಗೆ ತಂದಿದ್ದರು. ಆದರೆ ಪ್ರಾಮಾಣಿಕವಾಗಿ ಹೇಳ ಬೇಕೆಂದರೆ ಆ ಸರ್ಕಾರ ಕನ್ನಡಿಗನ ನಿರೀಕ್ಷೆಯೆತ್ತರಕ್ಕೆ ಏರಲೇ ಇಲ್ಲ. ಈಗ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು ಒಬ್ಬ ಪ್ರಾಮಾಣಿಕ ಹಾಗೂ ಹಿಂದುಳಿದ ವರ್ಗದಿಂದ ಬಂದಿರುವ ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದು ಕನ್ನಡ ನಾಡು–ನುಡಿಯ ಪ್ರಗತಿಯ ಆಶೆಯನ್ನು ಕನ್ನಡಿಗರು ನಿರೀಕ್ಷಿಸುತ್ತಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಗಳ ಮೂರನೆಯ ಕನ್ನಡ ರಾಜ್ಯೋತ್ಸವ. ಅವರಿಂದ ಕನ್ನಡಿಗರಾದ ನಾವು ನಾಡು–ನುಡಿಯ ಪ್ರಗತಿಯ ಹಿನ್ನೆಲೆಯಲ್ಲಿ ಬಹಳಷ್ಟು ನಿರೀಕ್ಷೆ ಯಲ್ಲಿದ್ದೇವೆ. ಆ ನಿರೀಕ್ಷೆಯನ್ನು ಮುಖ್ಯಮಂತ್ರಿಗಳು ಹುಸಿಯಾಗಿಸುವುದಿಲ್ಲ ಎಂಬ ನಂಬಿಕೆಯಲ್ಲಿದ್ದೇವೆ. ಈ ನಡುವೆ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿದ್ದು, ಕನ್ನಡ ಭಾಷಾಭಿವೃದ್ಧಿಗಾಗಿ ಕೇಂದ್ರ ಸರ್ಕಾರ 100ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಆ ಹಣ ಸಾರ್ಥಕ ರೂಪದಲ್ಲಿ ಖರ್ಚಾಗಬೇಕು.

ದೇಶದ ಇನ್ನುಳಿದ ಯಾವುದೇ ರಾಜ್ಯದಲ್ಲಿ ಇಲ್ಲದ ಇಂಗ್ಲೀಷ್ ಭಾಷಾ ವ್ಯಾಮೋಹ ಕನ್ನಡ ಭಾಷಾಭಿವೃದ್ಧಿಗೆ ಮುಳುವಾಗುತ್ತಿದೆ. ಅದರತ್ತ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕು. ಕನ್ನಡಿಗ ಮಕ್ಕಳು ಕನ್ನಡವನ್ನು ಮರೆತು ಇಂಗ್ಲಿಷ್ ಭಾಷೆಯಲ್ಲಿ ಮಾತಾಡುವಾಗ ನನಗಂತೂ ಬಹಳ ವೇದನೆ ಆಗುತ್ತದೆ. ಹೆತ್ತವರಾದ ನಾವೂ ನಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸದೆ, ದುಬಾರಿ ಆದರೂ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಕಳಿಸುತ್ತಿರುವುದು ವಿಷಾದನೀಯ. ಹೀಗೆ ಮುಂದುವರೆದರೆ ಕನ್ನಡದ ನೆಲದಲ್ಲಿ ಕನ್ನಡವೇ ಅನಾಥವಾಗುವ ಕಾಲ ಬಹಳ ದೂರವಿಲ್ಲ. ಇದಕ್ಕೆ ನಮ್ಮ ಮುಖ್ಯಮಂತ್ರಿಗಳು ಒಂದು ದಿಟ್ಟ ಪರಿಹಾರ ನೀಡಬೇಕು. ಕನ್ನಡ ಕಲಿತವರಿಗೆ ಮಾತ್ರ ಕರ್ನಾಟಕದ ನೆಲದಲ್ಲಿ ಕೆಲಸ ಎಂಬ ಘೋಷಣೆ ಆಗಬೇಕು.

ಹೊರರಾಜ್ಯಗಳಿಂದ ಬಂದವರು ಇಲ್ಲಿಯೇ ನೆಲೆಸಿ, ಇಲ್ಲಿಯ ನೆಲ–ಜಲ–ಗಾಳಿ ಅನುಭವಿಸು ತ್ತಿದ್ದರೂ ಕನ್ನಡಿಗರೊಂದಿಗೆ ಹೃದಯಪೂರ್ವಕವಾಗಿ ಬೆರೆಯುತ್ತಿಲ್ಲ. ಬೆಳಗಾವಿಯನ್ನು ಕುರಿತು ಮರಾಠಿಗರ ದಾಂಧಲೆ ಮುಂದುವರೆದೇ ಇದೆ. ಜಾಗತೀಕರಣ ರಾಜ್ಯದ ಮೇಲೂ ದುಷ್ಪರಿಣಾಮ ಬೀರುತ್ತಲಿದೆ. ಹೊಟ್ಟೆಬಾಕ–ಕೊಳ್ಳುಬಾಕ ಸಂಸ್ಕೃತಿ ಸಾಮಾಜಿಕ ಅಸಮಾನತೆಗೆ ದಾರಿ ಮಾಡಿಕೊಡುತ್ತಲಿವೆ. ಎಲ್ಲರಿಗೂ ಸಮಪಾಲು–ಸಮಬಾಳು ಎಂಬ ನೀತಿಯಡಿ ಸರ್ಕಾರ ಬಡವರನ್ನು ಮೇಲೆತ್ತಲು ಹಲವಾರು ಯೋಜನೆ ಗಳನ್ನು ಹಾಕಿಕೊಂಡರೂ ಅಧಿಕಾರಿಗಳ ಹೊಟ್ಟೆಬಾಕ ಸಂಸ್ಕೃತಿ ಯೋಜನೆಗಳ ಹೆಚ್ಚಿನ ಲಾಭವನ್ನು ತಿಂದು ಹಾಕಿ ಫಲಾನುಭವಿಗಳಿಗೆ ನಿರೀಕ್ಷಿತ ಫಲ ದೊರೆಯುತ್ತಿಲ್ಲ. ನಾವು ಕನ್ನಡಿಗರು ಕೆಚ್ಚೆದೆಯ ವೀರರು. ನಮಗೆ ಪರ ಭಾಷೆಗಳ ಬಗೆಗೆ ಗೌರವವಿದೆ. ಅಂದಮಾತ್ರಕ್ಕೆ ಪರಭಾಷಿಗರು ಇಲ್ಲಿ ಏನೆಲ್ಲ ಮಾಡಿದರೆ ನಡೆಯುತ್ತದೆ ಎಂದರ್ಥವಲ್ಲ. ಬನ್ನಿ, ಇಂದು ನಮ್ಮ ಕನ್ನಡ ರಾಜ್ಯೋತ್ಸವ ದಿನ. ಪ್ರತಿ ಕನ್ನಡಿಗನ ಹೆಮ್ಮೆಯ ದಿನ. ನಾವು ಕನ್ನಡಿಗರು ನೆಲ–ಜಲ–ಭಾಷೆಗಳ ಉಳಿವು–ಅಭಿವೃದ್ಧಿಗಾಗಿ ಇಂದೇ ಪಣ ತೊಡೋಣ

ಲೇಖನ

# ಮಹಾತ್ಮಗಾಂಧಿ ನರೇಗಾ ಯೋಜನೆ ಜಾಗೃತಿ ಮೂಡಿಸಲು ಕಲಾಜಾಥ

ನಾಗರತ್ನ ಆಚನೂರು

ಇತ್ತೀಚಿನ ಎಫ್.ಎಂ ರೇಡಿಯೋ, ದೂರದರ್ಶನ, ಮೊಬೈಲ್, ಹೀಗೆ ಹಲವಾರು ಎಲೆಕ್ಟ್ರಾನಿಕ್ ಮಾಧ್ಯಮಗಳು ಹೆಚ್ಚಾಗಿ ಪ್ರಭಾವ ಇದ್ದರೂ ಸಹ ಯೋಜನೆಗಳ ಅರಿವು ಜನಸಾಮನ್ಯರಿಗೆ ಅಷ್ಟಾಗಿ ಮನಮುಟ್ಟಿಸುವಲ್ಲಿ ಪರಿಣಾಮಕಾರಿಯಾಗಿಲ್ಲ. ಅನಾದಿಕಾಲದಿಂದ ಗ್ರಾಮಗಳಲ್ಲಿ ಮನರಂಜನೆಯ ಬೀದಿನಾಟಕದಂತಹ ಜಾನಪದ ಶೈಲಿಯ ಕಾರ್ಯಕ್ರಮಗಳ ಮೇಲಿನ ಆಸಕ್ತಿ ಇನ್ನೂ ನಶಿಸಿಲ್ಲ. ಹಾಗಾಗಿಯೇ ಸರ್ಕಾರದ ಇಂದಿನ ಯೋಜನೆಗಳನ್ನು ಜನರಿಗೆ ತಲುಪಿಸಲು ಅವರಲ್ಲಿ ಜಾಗೃತಿ ಮೂಡಿಸಲು ಕಲಾಜಾಥವನ್ನು ಅವಲಂಬಿಸಿರುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಮಹಾತ್ಮಗಾಂಧಿ ನರೇಗಾ ಯೋಜನೆ ಕೂಡ ಹೊರತಾಗಿಲ್ಲ. ಈ ಕಲಾಜಾಥದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ ವರದಿ ಇಲ್ಲಿದೆ.

ಜೀವನಾಧಾರಕ್ಕೆ ಕೂಲಿ ಅರಸಿ ವಲಸೆ ಹೋಗುವ ಮಂದಿಗೆ ಇರುವಲ್ಲೇ ಉದ್ಯೋಗ ನೀಡಿ ಅವರಿಗೆ ಆರ್ಥಿಕ ಆಸರೆ ನೀಡುವ ಮೂಲಕ ಅವರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಸುಸ್ಥಿರಗೊಳಿಸುವಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯು ಸಹಕಾರಿಯಾಗಿದೆ.



ಯಾದಗಿರಿ ಜಿಲ್ಲೆಯ ಯಾದಗಿರಿ, ಶಹಾಪುರ, ಸುರಪೂರ ತಾಲ್ಲೂಕುಗಳು ಹಿಂದುಳಿದ IPPE ತಾಲ್ಲೂಕುಗಳಾಗಿದ್ದು ಈ ತಾಲ್ಲೂಕುಗಳ ಆಯ್ದ ಎರಡು ಗ್ರಾಮ ಪಂಚಾಯತಿಯಲ್ಲಿ ಕಲಾಜಾಥವನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಆದೇಶದ ಮೇರೆಗೆ ಪ್ರದರ್ಶಿಸಲಾಯಿತು.

## ಮಹಾತ್ಮಗಾಂಧಿ ನರೇಗಾ ನಡೆದು ಬಂದ ದಾರಿ

ಹಳ್ಳಿಗಳಿಂದ ಕೂಡಿದ ನಮ್ಮ ದೇಶದಲ್ಲಿ ಜನರು ಬಡತನ, ಅನಕ್ಷರತೆ, ಹಸಿವಿನಿಂದ ಇಂದಿಗೂ ನರಳುತ್ತಿದ್ದಾರೆ. ಇದಕ್ಕಾಗಿ ಸರ್ಕಾರ ಹತ್ತು ಹಲವು

ಜಿಲ್ಲಾ ಐಇಸಿ ಸಂಯೋಜಕರು, ಜಿಲ್ಲಾ ಪಂಚಾಯಿತಿ ಯಾದಗಿರಿ



ಯೋಜನೆಗಳನ್ನು ಜಾರಿಗೆ ತಂದಿದೆ. ಈ ಸಮಸ್ಯೆಗಳಿಗೆ ಪರಿಹಾರವಾಗಬಲ್ಲದ್ದು ಉದ್ಯೋಗ ಖಾತರಿ ಯೋಜನೆ. ಜೀವನಾಧಾರಕ್ಕೆ ಕೂಲಿ ಅರಸಿ ವಲಸೆ ಹೋಗುವ ಮಂದಿಗೆ ಇರುವಲ್ಲೇ ಉದ್ಯೋಗ ನೀಡಿ ಅವರಿಗೆ ಆರ್ಥಿಕ ಆಸರೆ ನೀಡುವ ಮೂಲಕ ಅವರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಸುಸ್ಥಿರಗೊಳಿಸುವಲ್ಲಿ ಸಹಕಾರಿಯಾಗಿದೆ. ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ಕೂಲಿ ಉದ್ಯೋಗದಾಯಕ ಕಾರ್ಯಕ್ರಮ ಕೂಡಾ ಒಂದಾಗಿದ. ಜನರಿಗೆ ಜೀವನದ ಭದ್ರತೆ, ಉದ್ಯೋಗ ಅವಕಾಶಗಳನ್ನು ಸೃಷ್ಟಿಸಬೇಕಾಗಿದೆ ಅದರೊಂದಿಗೆ ಮಾನವ ಅಭಿವೃದ್ಧಿ, ದೇಶದ ಅಭಿವೃದ್ಧಿಪಡಿಸುವುದು ಮುಖ್ಯವಾಗಿದೆ. ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005 ರಂದು 02-02-2006 ರಿಂದ ಜಾರಿಗೆ ತರಲಾಗಿರುತ್ತದೆ. ಆ ನಿಟ್ಟಿನಲ್ಲಿ ಈ ಒಂದು ಯೋಜನೆಯ ಅಡಿಯಲ್ಲಿ ಮಾಹಿತಿ ಶಿಕ್ಷಣ ಸಂವಹನ ಪಾತ್ರ ಮುಖ್ಯವಾಗಿದ್ದು, ಜನರನ್ನು ಯೋಜನೆಯಲ್ಲಿ ತೊಡಗುವಂತೆ ಪ್ರೇರೇಪಿಸುವಲ್ಲಿ ಈ ಐಇಸಿ ಕಾರ್ಯಕ್ರಮಗಳು ಪೂರಕವಾಗುತ್ತವೆ. ಇದರ ರೂಪಕವಾಗಿ ಕಲಾಜಾಥವನ್ನು ಜಿಲ್ಲೆಯ ಆರು ಗ್ರಾಮ ಪಂಚಾಯತಿಗಳಲ್ಲಿ ಕೈಗೊಳ್ಳಲಾಯಿತು.

### ಕಲಾಜಾಥಾ ಕಾರ್ಯಕ್ರಮದ ಉದ್ದೇಶಗಳು

- ಅತಿ ಹಿಂದುಳಿದ ಗ್ರಾಮಗಳಲ್ಲಿ ಬೀದಿನಾಟಕಗಳ ಮೂಲಕ ಯೋಜನೆಯ ಉದ್ದೇಶವನ್ನು ದೃಶ್ಯಗಳ ಮೂಲಕ ಯೋಜನೆಯ ಬಗ್ಗೆ ಅರಿವು ಮೂಡಿಸುವುದು.
- ದುರ್ಬಲ ವರ್ಗದವರು, ಭೂ ರಹಿತ ಕಾರ್ಮಿಕರಿಗೆ ಯೋಜನೆಯಡಿ ಸಿಗುವ ಲಾಭಗಳನ್ನು ತಿಳಿಹೇಳಲು
- ಯೋಜನೆಯಲ್ಲಿ ಅಕುಶಲ ಉದ್ಯೋಗಾವಕಾಶಗಳನ್ನು ನೀಡಿ ವಲಸೆ ಹೋಗುವುದನ್ನು ತಡೆಯಲು
- ಧ್ವನಿವರ್ಧಕಗಳನ್ನು ಬಳಸಿಕೊಂಡು ಜನರನ್ನು ಸೆಳೆಯಲು
- ಗ್ರಾಮಗಳ ಅಭಿವೃದ್ಧಿಗೆ ಯೋಜನೆಯಿಂದ ಜಾರಿಗೆ ತಂದಿರುವ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಜಾಗೃತಿ ಮೂಡಿಸಲು.



### ಪ್ರಯೋಜನಗಳು:

ನಮ್ಮ ರಾಜ್ಯದಲ್ಲಿ 30ನೇ ಜಿಲ್ಲೆಯಾಗಿ ರಚನೆಯಾಗಿರುವ ಯಾದಗಿರಿಯಲ್ಲಿ ಅನಕ್ಷರತೆ, ಬಡತನರೇಖೆಯ ಕುಟುಂಬಗಳೇ ಹೆಚ್ಚಾಗಿದ್ದು, ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಜನರನ್ನು ಜಾಗೃತಿಗೊಳಿಸಲು ಮಾಹಿತಿ ಶಿಕ್ಷಣ ಸಂವಹನ ಪಾತ್ರ ಮುಖ್ಯವಾಗಿ ಜನರಿಗೆ ಈ ಯೋಜನೆಯ ಬಗ್ಗೆ ಅರಿವನ್ನು ಮೂಡಿಸುವುದು, ಈ ಯೋಜನೆಯ ಮೂಲಕ ಜನರಿಗೆ ಉದ್ಯೋಗಾವಕಾಶಗಳನ್ನು ನೀಡುವ ಮೂಲಕ ಆರ್ಥಿಕ, ಸಾಮಾಜಿಕವಾಗಿ ಸ್ವಲ್ಪವಾದರೂ ಮುಂದುವರೆಯುವಂತೆ ಮಾಡುವ ಒಂದು ಉದ್ದೇಶ ಹೊಂದಿರುವುದರಿಂದ ಜನರಿಗೆ ಸರಳ ರೀತಿಯಲ್ಲಿ ಯೋಜನೆಯ ಬಗ್ಗೆ ತಿಳಿಸಲು ಕಲಾಜಾಥ ಪ್ರಮುಖ ಪಾತ್ರ ವಹಿಸಿದೆ.

ಲೇಖನ

# 73ನೇ ಸಂವಿಧಾನ ತಿದ್ದುಪಡಿ ಕಾಯಿದೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಸ್ಥಳೀಯ ಸರ್ಕಾರಗಳ ಸ್ಥಾನ-ಮಾನ



ಎಲ್.ಎಸ್. ದಿನೇಶ

ಪರಿವರ್ತನೆ ಜಗದ ನಿಯಮ. ಯಾವುದೇ ವ್ಯಕ್ತಿಯಾಗಲೀ, ವಸ್ತುವಾಗಲೀ ಸಮಯ, ಸಂದರ್ಭ ಮತ್ತು ಪರಿಸರದಲ್ಲಿ ನಡೆಯುವ ದಿನನಿತ್ಯದ ಚಟುವಟಿಕೆಗಳ ಅನುಗುಣವಾಗಿ ಬದಲಾವಣೆಯಾಗಬೇಕಾಗುತ್ತದೆ. ಅದೇ ರೀತಿಯಾಗಿ ದೇಶದ ಕಾನೂನು ಮತ್ತು ಕಟ್ಟುಪಾಡುಗಳು ಕೆಲವೊಂದು ಸನ್ನಿವೇಶಗಳಲ್ಲಿ ಬದಲಾವಣೆಗೆ ಅವಕಾಶ ನೀಡಬೇಕಾಗುತ್ತದೆ. ದೇಶದ ಅತ್ಯುನ್ನತ ಕಾನೂನಿನ ಅಂಗವೇ ಸಂವಿಧಾನ. ಸರ್ಕಾರದ ಆಡಳಿತದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಅಧಿಪತಿಯೇ ಸಂವಿಧಾನ. ಇಂತಹ ಸಂವಿಧಾನದಲ್ಲಿ ಸಾರ್ವಜನಿಕ ಹಿತಾಸಕ್ತಿಗಳಿಗೆ ಅನುಗುಣವಾಗಿ ಕಾನೂನು ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಇಂತಹ ಕಾನೂನು ಬದಲಾವಣೆಗಳನ್ನು ಸಂವಿಧಾನದ ಭಾಷೆಯಲ್ಲಿ 'ತಿದ್ದುಪಡಿ' ಎಂದು ಕರೆಯುತ್ತಾರೆ. ಸಂವಿಧಾನದಲ್ಲಿ ಮೂಲ ವಿಧಿಗಳಲ್ಲಿರುವ ಕಾನೂನು ನಿಯಮಗಳಿಗೆ ತಿದ್ದುಪಡಿ ಮಾಡಲಾಗುತ್ತದೆ. ಅಂತಹ ಸಂವಿಧಾನ ತಿದ್ದುಪಡಿಗಳಲ್ಲಿ 73 ನೇ ಸಂವಿಧಾನ ತಿದ್ದುಪಡಿಯು ಒಂದು.

"ಆರಂಕುಶವಿಟ್ಟೊಡಂ ನೆನೆಯುವುದೆನ್ನ ಮನಂ ಬನವಾಸಿ ದೇಶಮಂ" ಇದು ಕನ್ನಡ ಸಾಹಿತ್ಯದ ದಿಗ್ಗಜ ಆದಿಕವಿ ಪಂಪನ "ಆದಿಪುರಾಣ" ಗ್ರಂಥದ ಸಾಲುಗಳು. ಅದೇ ರೀತಿಯಾಗಿ 73 ನೇ ಸಂವಿಧಾನ ತಿದ್ದುಪಡಿಯೆಂದರೆ- ನೆನಪಾಗುವುದೊಂದೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಸ್ಥಳೀಯ ಸರ್ಕಾರಗಳ ಸಬಲೀಕರಣ.

> ಸಂವಿಧಾನದಲ್ಲಿ ಯಾವುದೇ ಕಾನೂನು ನಿಯಮಾವಳಿಗಳಿಗೆ ತಿದ್ದುಪಡಿ ಮಾಡಬೇಕಾದರೆ ಅನಾವಶ್ಯಕವಾಗಿ ತಿದ್ದುಪಡಿ ಮಾಡುವಂತಿಲ್ಲ. ಅದಕ್ಕೆ ಅದರದೇ ಆದ ನೀತಿ-ನಿಯಮಗಳನ್ನು ಪಾಲಿಸಬೇಕು.

ಸಂವಿಧಾನದಲ್ಲಿರುವ ಆಶೋತ್ತರಗಳನ್ನು ದೇಶದ ಎಲ್ಲಾ ರಾಜ್ಯಗಳ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಪಾಲಿಸಬೇಕು ಮತ್ತು ಅನುಷ್ಠಾನಕ್ಕೆ ತರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ರೈತಾಪಿ ಕುಟುಂಬಗಳ ಪುರುಷರು ಮತ್ತು ಮಹಿಳೆಯರು ಸಕ್ರೀಯವಾಗಿ ಆಸಕ್ತಿಯಿಂದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪಾಲ್ಗೊಳ್ಳುತ್ತಿರುವುದು ಸಹ ಈ 73ನೇ ತಿದ್ದುಪಡಿಯಿಂದ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ "ಸಾಮಾಜಿಕ ನ್ಯಾಯ" ದೊರಕುತ್ತಿರುವುದು ಸಂವಿಧಾನದ ವಿಧಿವಿಧಾನಗಳಿಂದ. ದೇಶದ ಪ್ರತಿಯೊಬ್ಬ ನಾಗರೀಕ ಪ್ರಜೆಯು ಸಹ ಪ್ರಜಾಪ್ರಭುತ್ವ ಚುನಾವಣೆ ಮತ್ತು ಮತದಾನದಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುವಂತೆ ಮಾಡಿರುವುದು ಈ ನಮ್ಮ ಸಂವಿಧಾನ.

ಕೆ. ಲಕ್ಕಿಹಳ್ಳಿ, ಕೊನೇಹಳ್ಳಿ (ಅಂಚೆ) ತಿಪಟೂರು (ತಾ), ತುಮಕೂರು (ಜಿಲ್ಲೆ)
ಮೊಬೈಲ್ : 9591938499

## ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಪ್ರಕ್ರಿಯೆ

ಸಂವಿಧಾನದಲ್ಲಿ ಯಾವುದೇ ಕಾನೂನು ನಿಯಮಾವಳಿಗಳಿಗೆ ತಿದ್ದುಪಡಿ ಮಾಡಬೇಕಾದರೆ ಅನಾವಶ್ಯಕವಾಗಿ ತಿದ್ದುಪಡಿ ಮಾಡುವಂತಿಲ್ಲ. ಅದಕ್ಕೆ ಅದರದೇ ಆದ ನೀತಿ–ನಿಯಮಗಳನ್ನು ಪಾಲಿಸಬೇಕು. ಸಂವಿಧಾನದಲ್ಲಿ ಮೂಲವಿಧಿಗೆ ಧಕ್ಕೆಯಾಗದಂತೆ, ತಿದ್ದುಪಡಿಯನ್ನು ಎರಡು ವಿಧಾನಗಳಲ್ಲಿ ಮಾಡಲಾಗುತ್ತದೆ. 1) ಸರಳ ಬಹುಮತ ಮತ್ತು 2) ವಿಶೇಷ ಬಹುಮತ. ಇಂತಹ ತಿದ್ದುಪಡಿಯನ್ನು ಮಾಡಲು ಅವಕಾಶ ಮಾಡಿಕೊಟ್ಟಿರುವ ಸಂವಿಧಾನದ ಏಕೈಕ ವಿಧಿ ಅದುವೇ 368 ನೇ ವಿಧಿ.

## 73ನೇ ಸಂವಿಧಾನದ ತಿದ್ದುಪಡಿಯ ಹಿನ್ನೆಲೆ :

73ನೇ ತಿದ್ದುಪಡಿಯನ್ನು ಕಾಯಿದೆಯಾಗಿ 1992 ರಲ್ಲಿ ರೂಪಿಸಿ, ತದನಂತರ ಅಂದಿನ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ಪಿ.ವಿ. ನರಸಿಂಹರಾವ್ ರವರ ನಾಯಕತ್ವದಲ್ಲಿ ಕೇಂದ್ರ ಸರ್ಕಾರವು ಸಂವಿಧಾನದ 73ನೇ ತಿದ್ದುಪಡಿಯನ್ನು ಸಂಸತ್ತಿನ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆಯಿತು. ತದನಂತರ ಏಪ್ರಿಲ್ 24, 1993 ರಲ್ಲಿ ಅಂದಿನ ರಾಷ್ಟ್ರಪತಿಗಳಾದ ಸನ್ಮಾನ್ಯ ಶಂಕರ್ ದಯಾಳ್ ಶರ್ಮಾರವರ ನಾಮಾಂಕಿತದ ಮುದ್ರೆಯೊಂದಿಗೆ ಈ ತಿದ್ದುಪಡಿಯನ್ನು ಕಾನೂನಾಗಿ ರಾಷ್ಟ್ರಾದ್ಯಂತ ಏಕಕಾಲದಲ್ಲಿ ಜಾರಿಗೆ ತರಲಾಯಿತು. ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಗಳು ಮತ್ತು ಜವಾಬ್ದಾರಿಗಳ 29 ವಿಷಯಗಳನ್ನು ಸಂವಿಧಾನದ 11ನೇ ಅನುಸೂಚಿಯಲ್ಲಿ 73 ನೇ ತಿದ್ದುಪಡಿ 1992 ರ ಕಾಯಿದೆಯೊಂದಿಗೆ ಸೇರಿಸಲಾಗಿದೆ.

ಜಗತ್ತಿನಲ್ಲಿಯೇ ಅತಿ ದೊಡ್ಡ ಸಂವಿಧಾನ ಹೊಂದಿರುವ ಏಕೈಕ ದೇಶ ಭಾರತ. ಇಂತಹ ಸಂವಿಧಾನವನ್ನು ನವೆಂಬರ್ 26, 1949ರಂದು ಅಂಗೀಕರಿಸಿಕೊಳ್ಳಲಾಯಿತು. ಸಂವಿಧಾನವನ್ನು "ರಾಜ್ಯಾಂಗ" ಎಂದು ಕರೆಯಲಾಗುತ್ತದೆ. ಇಂತಹ ರಾಜ್ಯಾಂಗ ಸಂವಿಧಾನವನ್ನು ಜನವರಿ 26, 1950 ರಂದು ಭಾರತದಲ್ಲಿ ಜಾರಿಗೆ ತರಲಾಯಿತು.

ಈ ದಿನದ ಸವಿನೆನಪಿಗಾಗಿ ಪ್ರತೀ ವರ್ಷ ಜನವರಿ 26ರ ದಿನವನ್ನು 'ಗಣರಾಜ್ಯೋತ್ಸವ' ಎಂದು ದೇಶದಾದ್ಯಂತ ಆಚರಿಸಲಾಗುತ್ತದೆ. ಈ ಗಣ ರಾಜ್ಯೋತ್ಸವವನ್ನು 'ಸಂವಿಧಾನದ ಹಬ್ಬ' ಎಂದು ಕರೆಯಲಾಗುತ್ತದೆ. ಇಂತಹ ಸಂವಿಧಾನವನ್ನು ರಚನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಮತ್ತು "ಭಾರತದ ಸಂವಿಧಾನದ ಪಿತಾಮಹ" ಎಂದು ದೇಶ–ವಿದೇಶಗಳಲ್ಲಿ ಹೆಸರು ವಾಸಿಯಾಗಿರುವ ಕಾನೂನು ತಜ್ಞರಾದ ಡಾ. ಬಿ.ಆರ್. ಅಂಬೇಡ್ಕರ್ ರವರನ್ನು ಮತ್ತು ಸಂವಿಧಾನ ರಚನೆಯಲ್ಲಿ ಸಹಕರಿಸಿದ ಜವಾಹರಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್, ಡಾ. ಬಾಬು ರಾಜೇಂದ್ರ ಪ್ರಸಾದ್ ಇವರೆಲ್ಲರುಗಳನ್ನು ಈ ಸಂದರ್ಭದಲ್ಲಿ ನೆನೆಯುವುದು ನಮ್ಮ ಆದ್ಯ ಕರ್ತವ್ಯ ಎಂದೇ ಭಾವಿಸಬೇಕು.

## 73ನೇ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ ಸಂವಿಧಾನದ ಉಪವಿಧಿಗಳ ಉಲ್ಲೇಖ :

ಸಂವಿಧಾನದ 395 ಮೂಲವಿಧಿಗಳಲ್ಲಿ ಅತೀ ಹೆಚ್ಚಿನ ಉಪವಿಧಿಗಳನ್ನು ಹೊಂದಿರುವ ಏಕೈಕ ಸಂವಿಧಾನದ ಮೂಲವಿಧಿ ಅದುವೇ 243ನೇ ವಿಧಿ. 73ನೇ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ 243 ಎ ಇಂದ 243 ಒ ರವರೆಗೆ 15 ಉಪವಿಧಿಗಳನ್ನು ಈ ತಿದ್ದುಪಡಿಯ ಮೂಲಕ ಮಾಡಲಾಗಿದೆ. ಅವುಗಳು ಈ ಮುಂದಿನಂತಿವೆ.






**243 ನೇ ವಿಧಿ :**

ಪಂಚಾಯತ್ ರಾಜ್ ಸಂಸ್ಥೆಗಳ ಪ್ರದೇಶಗಳ ವ್ಯಾಖ್ಯೆಗಳಿಗೆ ಸಂಬಂಧಿಸಿದೆ.

**1) 243 ಎ: ಗ್ರಾಮ ಸಭೆ ನಡೆಸುವುದು ಕಡ್ಡಾಯ.**

**2) 243 ಬಿ: ಪಂಚಾಯತ್ ರಾಜ್‌ನ ಸ್ಥಳೀಯ ಸರ್ಕಾರಗಳ ರಚನೆ ಬಗ್ಗೆ ತಿಳಿಸುತ್ತದೆ.**

ಈ ವಿಧಿಯಲ್ಲಿ ದೇಶದ ಪ್ರತಿಯೊಂದು ರಾಜ್ಯವು ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ಗಳನ್ನು ರಚಿಸಬೇಕಾಗಿರುವುದು ಆಯಾ ರಾಜ್ಯ ಸರ್ಕಾರಗಳ ಅಧಿಕಾರ ಮತ್ತು ಕರ್ತವ್ಯ ಎಂದು ಹೇಳುತ್ತದೆ.

**3) 243 ಸಿ: ಪಂಚಾಯತಿಗಳ ವಿವಿಧ ಅಂಗಗಳ ರಚನೆ ಕುರಿತು ತಿಳಿಸುತ್ತದೆ.**

ಪಂಚಾಯತಿಗಳ ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಲ್ಲಿ ಎಲ್ಲಾ ಸ್ಥಾನಗಳನ್ನು ನೇರ ಚುನಾವಣೆಯ ಮೂಲಕ ಆಯ್ಕೆಗೊಂಡ ವ್ಯಕ್ತಿಗಳಿಂದ ಭರ್ತಿ ಮಾಡುವ ಅಧಿಕಾರ ಮತ್ತು ಕರ್ತವ್ಯ.

**4) 243 ಡಿ: ಪಂಚಾಯತಿಗಳ ಸ್ಥಾನಗಳ ಮೀಸಲಾತಿಗಳ ಕುರಿತು ವಿವರಣೆ ನೀಡುತ್ತದೆ.**

ಎಸ್.ಸಿ/ಎಸ್.ಟಿ ಮತ್ತು ಮಹಿಳೆಯರಿಗೆ ಈ ವಿಧಿಯಲ್ಲಿ ಮೀಸಲಾತಿಯನ್ನು ಎಲ್ಲಾ ಸ್ಥಳೀಯ ಸರ್ಕಾರಗಳಲ್ಲಿ ಮೀಸಲಾತಿ ಕಲ್ಪಿಸುವುದು.

**5) 243 ಇ: ಪಂಚಾಯತಿಗಳ ಅಧಿಕಾರ ವಿಧಿ ಬಗ್ಗೆ ತಿಳಿಸುತ್ತದೆ.**

ಪ್ರತಿಯೊಂದು ಗ್ರಾಮ ಪಂಚಾಯತಿ ತಾಲ್ಲೂಕು ಪಂಚಾಯತ್ ಜಿಲ್ಲಾ ಪಂಚಾಯತ್‌ಗಳ ಮೊದಲ ಸಭೆ ಪ್ರಾರಂಭವಾದ ದಿನದಿಂದ 5 ವರ್ಷಗಳ ಅಧಿಕಾರ ಅವಧಿ ಹೊಂದಿರುತ್ತದೆ.

**6) 243 ಎಫ್: ಪಂಚಾಯತಿ ಸದಸ್ಯರ ಅನರ್ಹತೆಯ ಬಗ್ಗೆ ತಿಳಿಸುತ್ತದೆ.**



ಎಲ್ಲಾ ಗ್ರಾಮ ಪಂಚಾಯತಿ ತಾಲ್ಲೂಕು ಪಂಚಾಯತ್ ಜಿಲ್ಲಾ ಪಂಚಾಯತ್‌ಗಳ ಸದಸ್ಯರ ವಿವಿಧ ಅನರ್ಹತೆಗಳ ಬಗ್ಗೆ ತಿಳಿಸುತ್ತದೆ.

ಅನರ್ಹತೆಗಳೆಂದರೆ, ಕನಿಷ್ಠ ವಯಸ್ಸು ಆಗದಿರುವುದು, ಲಿಂಗ, ಜಾತಿ, ಮೀಸಲಾತಿ, ಪ್ರಮಾಣಪತ್ರಗಳ ಸತ್ಯಾಂಶಗಳನ್ನು ದೃಢೀಕರಿಸುವಲ್ಲಿ ವಿಫಲರಾದಲ್ಲಿ ಅಂತಹ ಪಂಚಾಯತಿ ಸದಸ್ಯರು ಅನರ್ಹತೆ ಹೊಂದುತ್ತಾರೆ.

**7) 243 ಜಿ: ಪಂಚಾಯತಿಗಳ ವಿವಿಧ ಅಧಿಕಾರಗಳು ಮತ್ತು ಪ್ರಾಧಿಕಾರಗಳ ಬಗ್ಗೆ ತಿಳಿಸುತ್ತದೆ.**

ಎಲ್ಲಾ ಪಂಚಾಯತಿಗಳಲ್ಲಿ ಸಾಮಾಜಿಕ, ಆರ್ಥಿಕ, ಅಭಿವೃದ್ಧಿ ಯೋಜನೆಗಳನ್ನು ಸಿದ್ಧತೆ ಮಾಡಿಕೊಳ್ಳುವುದರ ಬಗ್ಗೆ ತಿಳಿಸುತ್ತದೆ.

11ನೇ ಅನುಸೂಚಿಯಲ್ಲಿರುವ 73ನೇ ತಿದ್ದುಪಡಿಯನುಸಾರ ನಮೂದಿಸಿರುವ 29 ವಿಷಯಗಳ ಅನುಷ್ಠಾನದ ಬಗ್ಗೆ ತಿಳಿಸಿರುತ್ತದೆ.



**8) 243 ಹೆಚ್ :** ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತೆರಿಗೆ ವಿಧಿಸುವ ಮತ್ತು ನಿಧಿ ಸಂಗ್ರಹಿಸುವ ಅಧಿಕಾರ ಮತ್ತು ಕರ್ತವ್ಯದ ಬಗ್ಗೆ ತಿಳಿಸುತ್ತದೆ.

**9) 243 ಐ : ಪಂಚಾಯತಿಗಳನ್ನು ಆರ್ಥಿಕವಾಗಿ ಸಬಲೀಕರಿಸಲು ಹಣಕಾಸು ರಚನೆ ಬಗ್ಗೆ ತಿಳಿಸುತ್ತದೆ.**

ರಾಜ್ಯ ಮತ್ತು ಪಂಚಾಯತಿಗಳ ನಡುವೆ ಹಣಕಾಸು ಹಂಚಿಕೆ ಕುರಿತು ರಾಜ್ಯಪಾಲರು ಮಧ್ಯಸ್ಥಿಕೆ ವಹಿಸಬಹುದು.

ಪಂಚಾಯತಿಗಳ ಹಣಕಾಸಿನ ಸ್ಥಿತಿ–ಗತಿಗಳ ಅಧ್ಯಯನ ಮಾಡಲು ಪಂಚಾಯತಿಗಳ ಮಟ್ಟದಲ್ಲಿ ಹಣಕಾಸು ಆಯೋಗ ರಚನೆಗೆ ರಾಜ್ಯಪಾಲರು, ಶಿಫಾರಸ್ಸು ಮಾಡಬಹುದು.

**10) 243 ಜೆ: ಪಂಚಾಯತ್ ಸ್ಥಳೀಯ ಸರ್ಕಾರಗಳ ಲೆಕ್ಕಪತ್ರಗಳ ಪರಿಶೀಲನೆ.**

ಎಲ್ಲಾ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅನುದಾನದ ಲೆಕ್ಕಪತ್ರಗಳ ದಾಖಲೆಗಳನ್ನು ಸಂಗ್ರಹಿಸುವುದು ಮತ್ತು ಪರಿಶೀಲನೆ ನಡೆಸುವುದು.

ವಿಧಾನಮಂಡಲದಲ್ಲಿ ಈ ಕುರಿತು ಕಾನೂನು ರೂಪಿಸುವ ಅಧಿಕಾರ ಮತ್ತು ಕರ್ತವ್ಯದ ಬಗ್ಗೆ ತಿಳಿಸುತ್ತದೆ.

**11) 243 ಕೆ: ಪಂಚಾಯತಿಗಳ ವ್ಯಾಪ್ತಿಯಲ್ಲಿ ನಡೆಯವ ಚುನಾವಣೆಗಳ ಬಗ್ಗೆ ತಿಳಿಸುತ್ತದೆ.**

ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಚುನಾವಣೆಯು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು.

ಪಂಚಾಯತಿ ವ್ಯಾಪ್ತಿಯ ಚುನಾವಣೆಗಳ ನಿರ್ವಹಣೆ ಮಾಡುವುದು.

ಪಂಚಾಯತಿ ಚುನಾವಣೆ ಸಂಬಂಧಿಸಿದಂತೆ ವಿಧಾನಮಂಡಲವು ಕಾಲಕಾಲಕ್ಕೆ ಕಾನೂನು ಮಾಡುವ ಅಧಿಕಾರ ಮತ್ತು ಕರ್ತವ್ಯವಿದೆ.

**12) 243 ಎಲ್:** ಒಕ್ಕೂಟ ರಾಜ್ಯಗಳ ಪ್ರದೇಶಗಳಿಗೆ ಅನ್ವಯವಾಗುವುದರ ಬಗ್ಗೆ ತಿಳಿಸುತ್ತದೆ.

**13) 243 ಎಂ:** ಒಕ್ಕೂಟ ರಾಜ್ಯಗಳ ಕೆಲವು ಅನುಸೂಚಿತ ಪಂಗಡ ಮತ್ತು ಅನುಸೂಚಿತ ಪ್ರದೇಶಗಳಿಗೆ ಅನ್ವಯ ಆಗದಿರುವುದರ ಬಗ್ಗೆ ತಿಳಿಸುತ್ತದೆ.

**14) 243 ಎನ್:** ಪಂಚಾಯತಿಗಳ ಮೇಲೆ ಜಾರಿಯಲ್ಲಿರುವ ಕಾನೂನುಗಳನ್ನು ಮಾಡುವುದರ ಬಗ್ಗೆ ತಿಳಿಸುತ್ತದೆ.

**15) 243 ಒ:** ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಚುನಾವಣೆ ವಿಷಯಗಳಲ್ಲಿ ನ್ಯಾಯಾಲಯಗಳು ಮಧ್ಯ ಪ್ರವೇಶ ಮಾಡುವುದನ್ನು ಮತ್ತು ವಿಚಾರಣೆ ಮಾಡುವುದನ್ನು ನಿಷೇಧಿಸಲಾಗಿದೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಅಂಶಗಳು ಸಂವಿಧಾನದ 73ನೇ ತಿದ್ದುಪಡಿ ಕಾಯಿದೆಯಲ್ಲಿ ಸೇರ್ಪಡೆಗೊಂಡು ಆ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಸ್ಥಳೀಯ ಸರ್ಕಾರಗಳಲ್ಲಿ ಒಂದು ರೀತಿಯ ವಿಶೇಷವಾದ ಸ್ಥಾನ–ಮಾನ ನೀಡಿರುವುದು ಮತ್ತು ಹೊಂದಿರುವುದು ಈ ಮೇಲಿನ ಎಲ್ಲಾ ವಿಧಿ–ವಿಧಾನಗಳಿಂದ ತಿಳಿದು ಬರುತ್ತದೆ ಎಂದು ಹೇಳಬಹುದು.

ಲೇಖನ

# ಗ್ರಾಮೀಣ ರಸ್ತೆಗಳ ವ್ಯವಸ್ಥೆ : ಗ್ರಾಮೀಣ ಅಭಿವೃದ್ಧಿಗೆ ಮೂಲಾಧಾರ

**ಸ. ದಾ. ಸುಳಕೂಡೆ**

ಜಾಗತೀಕರಣದ ಇಂದಿನ ದಿನಮಾನಗಳಲ್ಲಿ ಗ್ರಾಮೀಣ ಪ್ರದೇಶದ ಮೂಲ ಸೌಕರ್ಯಗಳಿಗೆ ಮತ್ತು ಸಂಪರ್ಕ ವ್ಯವಸ್ಥೆಗೆ ಆದ್ಯತೆ ನೀಡುವ ಅನಿವಾರ್ಯತೆಯು ಯೋಜನೆಯ ಭಾಗವೇ ಆಗಿದೆ. ಮೂಲಭೂತ ಸೌಕರ್ಯಗಳ ಸುನಿಶ್ಚಿತತೆಯು ಗ್ರಾಮಗಳ ಸ್ವಾವಲಂಬನೆಗೆ ಪ್ರೇರಕ ಮತ್ತು ಪೂರಕ ಅಂಶವೆಂಬುವುದರಲ್ಲಿ ಎರಡು ಮಾತಿಲ್ಲ. ಗ್ರಾಮೀಣ ಜನತೆಯ ಮೂಲ



ಗ್ರಾಮೀಣ ಬದುಕು ಸ್ವಾವಲಂಬನೆ, ಸ್ವಚ್ಛತೆಯತ್ತ ದಿಟ್ಟ ಮತ್ತು ಧೀಮಂತ ಹೆಜ್ಜೆ ಇಡುವಲ್ಲಿ ಗ್ರಾಮೀಣ ರಸ್ತೆಗಳು ಪೂರಕವಾಗಿವೆ.

ಬೇಡಿಕೆಗಳಲ್ಲಿ 'ಗ್ರಾಮ ಸಂಪರ್ಕ ರಸ್ತೆ ನಿರ್ಮಾಣ ಮತ್ತು ಸುವ್ಯವಸ್ಥಿತ ನಿರ್ವಹಣೆ' ಪ್ರಮುಖವಾಗಿದೆ. ಗ್ರಾಮೀಣ ರಸ್ತೆಗಳು ಇಂದಿಗೂ ಇದ್ದು ಇಲ್ಲದಂತಿವೆ. ಬಹಳಷ್ಟು ರಸ್ತೆಗಳು ವಾಹನ ಚಾಲನೆಗೆ ಯೋಗ್ಯವಾಗಿಲ್ಲೆಂಬ ಅಪಸ್ವರ ನಿತ್ಯದ ಮಾತೇ ಆಗಿದೆ. ರಸ್ತೆಗಳು ಸರಿಯಾಗಿ ನಿರ್ಮಾಣ ಮತ್ತು ನಿರ್ವಹಣೆಯಾಗದ ಕಾರಣ, ಸಾರ್ವಜನಿಕ ಬಸ್ ಸಂಚಾರ ಸ್ಥಗಿತಗೊಂಡ ಉದಾಹರಣೆಗಳೂ ಇವೆ. ಸ್ವಾತಂತ್ರ್ಯ ದೊರತ ನಂತರ ಗ್ರಾಮೀಣ ಪ್ರದೇಶಗಳ ಸುಧಾರಣೆಗೆ ಒತ್ತು ನೀಡಿ ಸಂಪರ್ಕ ರಸ್ತೆ ನಿರ್ಮಾಣ ಮತ್ತು ನಿರ್ವಹಣೆಗೆ ಸಾಕಷ್ಟು ಅನುದಾನವನ್ನು ಕಾದಿರಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರ್ವ ಋತು ಸಂಚಾರಕ್ಕೆ ಯೋಗ್ಯವಾಗಿರುವ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿವೆ. ಇವುಗಳಲ್ಲಿ ಮುಖ್ಯ ಯೋಜನೆಗಳು ಇಂತಿವೆ.

1. **ಮುಖ್ಯ ಜಿಲ್ಲಾ ರಸ್ತೆಗಳು**
2. **ಇತರೆ ಜಿಲ್ಲಾ ರಸ್ತೆಗಳು**
3. **ಟಿ.ಡಿ.ಬಿ ರಸ್ತೆಗಳು**

# 1319 'ಶ್ರೀ ಶಿವಪ್ರಸಾದ', ರಾಮತೀರ್ಥನಗರ, ಬೆಳಗಾವಿ – 590015



**4. ಗ್ರಾಮ ರಸ್ತೆಗಳು**

**5. ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ**

**6. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ**

5ನೇ ಪಂಚವಾರ್ಷಿಕ ಯೋಜನೆ ಅನ್ವಯ ಕನಿಷ್ಟ ಸೇವಾ ಕಾರ್ಯಕ್ರಮದಡಿ ರಸ್ತೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. ಕೃಷಿ ಉತ್ಪನ್ನಗಳ ಸಾಗಾಣಿಕೆಯ ಉದ್ದೇಶ, ಈ ರಸ್ತೆ ನಿರ್ಮಾಣಕ್ಕೆ ಮೂಲ ಕಾರಣವಾಗಿತ್ತು. ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಹಳ್ಳಿಗಾಡಿನ ಸಂಪರ್ಕ ರಸ್ತೆಗಳು ಪ್ರಮುಖ ಪಾತ್ರವಹಿಸುತ್ತಿರುವುದನ್ನು ಅರಿತುಕೊಂಡ ಯೋಜನಾ ಪರಿಣಿತರು, ರಸ್ತೆ ನಿರ್ಮಾಣ ಮತ್ತು ನಿರ್ವಹಣೆಯನ್ನು ಕನಿಷ್ಟ ಸೇವಾ ಕಾರ್ಯಕ್ರಮದಡಿ ಸೇರಿಸಿರುವುದು ಗಮನಾರ್ಹ. ಗ್ರಾಮೀಣ ರಸ್ತೆಗಳು ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಸೂಕ್ತ ಅವಕಾಶ ಕಲ್ಪಿಸುವುದರಿಂದ, ಗ್ರಾಮೀಣ ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಧ್ಯವಾಗುವುದರ ಜೊತೆಗೆ ನಾಡಿನ ಜನತೆಗೆ ಕೃಷಿ ಉತ್ಪನ್ನ ಸುಲಭವಾಗಿ ದೊರೆಯಲೂ ಸಾಧ್ಯವಾಗುತ್ತದೆ. ಸುಸ್ಥಿತಿಯಲ್ಲಿರುವ ಗ್ರಾಮೀಣ ರಸ್ತೆಗಳು ಗ್ರಾಮೀಣ ಜನರ ಸಾಂಸ್ಕೃತಿಕ ಮತ್ತು ಪ್ರೇರಕ ಶಕ್ತಿಯೂ ಆಗಿವೆ.

ಒಂದು ಅರ್ಥದಲ್ಲಿ ಗ್ರಾಮೀಣ ರಸ್ತೆಗಳು ಗ್ರಾಮೀಣ ಜನರ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯದ ಜೀವನಾಡಿಗಳಾಗಿವೆ ಎಂದು ಹೇಳಬಹುದಾಗಿದೆ. ಅಮೇರಿಕೆಯ ಹಿಂದಿನ ಅಧ್ಯಕ್ಷರಾಗಿದ್ದ ಜಾನ್. ಎಫ್. ಕೆನಡಿಯವರು 'ನಮ್ಮ ಸಂಪತ್ತು ರಸ್ತೆಗಳನ್ನು ನಿರ್ಮಿಸಿದರೆ ರಸ್ತೆಗಳು ರಾಷ್ಟ್ರದ ಸಂಪತ್ತನ್ನು ನಿರ್ಮಿಸುತ್ತವೆ' ಎಂದಿದ್ದಾರೆ. ರಸ್ತೆ ಮಾನವ ಜನಾಂಗದ ಅಭ್ಯುದಯ ಪ್ರಗತಿಯ ಮುಖ್ಯ ವಾಹಕವೆಂಬುದು ಸರ್ವಕಾಲಿಕ ಸತ್ಯವೇ ಆಗಿದೆ. ಔದ್ಯೋಗಿಕ ಘಟಕಗಳ ಸ್ಥಾಪನೆ, ವ್ಯಾಪಾರ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ 'ರಸ್ತೆ' ಒಂದು ಪ್ರಮುಖ ಅಂಗವಾಗಿ ಗುರುತಿಸಲ್ಪಟ್ಟಿದೆ. ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಗ್ರಾಮಗಳ ಚಿತ್ರಣ ಇತರ ಗ್ರಾಮಗಳಿಗಿಂತ ಭಿನ್ನವಾಗಿರುವುದು ಸಹಜವೇ ಆಗಿದೆ. ಅದರಂತೆ ರಾಜ್ಯ / ರಾಷ್ಟ್ರ ಹೆದ್ದಾರಿಗುಂಟ ಮತ್ತು ಹತ್ತಿಕೊಂಡು ಇರುವ ಗ್ರಾಮಗಳು ನಗರ ಪ್ರದೇಶದ ಎಲ್ಲ ಸವಲತ್ತುಗಳನ್ನು ಬಾಚಿಕೊಳ್ಳುವುದರಲ್ಲಿ ಮುಂದಿರುತ್ತವೆ. ರಸ್ತೆ ಸಂಪರ್ಕ ಸರಿಯಾಗಿರುವ ಗ್ರಾಮಗಳ ಜನತೆಯು ಉದ್ಯೋಗ ದೊರಕಿಸಿಕೊಳ್ಳುವಲ್ಲಿಯೂ ಸಾಕಷ್ಟು ಅವಕಾಶವುಳ್ಳವರಾಗಿರುತ್ತಾರೆ. ಗ್ರಾಮೀಣ ರಸ್ತೆಗಳು ಸುಸ್ಥಿತಿಯೊಳಗಿದ್ದಲ್ಲಿ ಸಾಮಾಜಿಕ ಸಂಬಂಧಗಳು ಬೆಳೆಯಲು ಅವಕಾಶ ಕಲ್ಪಿಸುತ್ತವೆ. ಉತ್ತಮ ಆರೋಗ್ಯ ಸೇವೆ ಪಡೆಯುವಲ್ಲಿ ಸಂಪರ್ಕ ರಸ್ತೆಗಳು ಸಹಕಾರಿಯಾಗಿವೆ. ಸಕಾಲಿಕವಾಗಿ ತುರ್ತು ಚಿಕಿತ್ಸೆ, ಹೆರಿಗೆ ವ್ಯವಸ್ಥೆಗೆ ಉತ್ತಮ ರಸ್ತೆಗಳ ಪಾತ್ರವೂ ಇದೆ.

ಗ್ರಾಮೀಣ ರಸ್ತೆಗಳು ಗ್ರಾಮೀಣ ಜನತೆಗೆ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯದ ಕೊಂಡಿಗಳಾಗಿರುವಂತೆ ಪಟ್ಟಣ ಪ್ರದೇಶದ ಜನತೆಗೆ ನೈಸರ್ಗಿಕ ತಾಜಾ ಕಾಯಿಪಲ್ಲೆ, ಹಾಲು, ಹಣ್ಣು ಇತರೆ ನಿತ್ಯೋಪಯೋಗಿ ಸಾಮಾನುಗಳು ಸಿಗಲು ಸಹ ಸಾಧ್ಯವಾಗುತ್ತದೆ. ಇದಲ್ಲದೆ ಪಟ್ಟಣ ಪ್ರದೇಶದ ಔದ್ಯೋಗಿಕರಣ ಕಚ್ಚಾ ಸರಕು ಪೂರೈಸಲು ಈ ರಸ್ತೆಗಳು ಸಹಕಾರಿಯಾಗಿವೆ. ವಾಣಿಜ್ಯೀಕರಣ ಮತ್ತು ವ್ಯಾಪಾರ ವರ್ಗಕ್ಕೂ ರಸ್ತೆಗಳು ಲಾಭ ಭರಿಸುವ ಮಹತ್ವದ ಜೋಡಣೆಗಳಾಗಿವೆ. ಶಿಕ್ಷಣಕ್ಕೂ ಸಂಪರ್ಕ ರಸ್ತೆಗಳು ಸಂಬಂಧವಿರುವುದು ಕಂಡು ಬಂದಿದೆ. ಸಂಪರ್ಕ ಸಮರ್ಪಕವಾದಷ್ಟು ಉನ್ನತ ಶಿಕ್ಷಣ ಪಡೆಯುವ ಅವಕಾಶವು ಹೆಚ್ಚಾಗುತ್ತದೆ. ಗ್ರಾಮ ಪರಿಸರದ ಪ್ರೇಕ್ಷಣೀಯ ಮತ್ತು ಧಾರ್ಮಿಕ ಕ್ಷೇತ್ರಗಳ ಬೆಳವಣಿಗೆಯಲ್ಲೂ ಗ್ರಾಮ ರಸ್ತೆಗಳ ಪಾತ್ರ ಪ್ರಮುಖವಾಗಿದೆ. ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ರಸ್ತೆಗಳೇ ಮೂಲಾಧಾರಗಳಾಗಿವೆ.

ಗ್ರಾಮೀಣ ಪ್ರದೇಶದ ಅಭ್ಯುದಯಕ್ಕೆ ಮೂಲಾಧಾರವಾಗಿ ನಿಂತಿರುವ ರಸ್ತೆಗಳ ವರ್ಗೀಕರಣ ಈ ಕೆಳಗೆ ಕೊಡಲಾಗಿದೆ.

**1. ಮುಖ್ಯ ಜಿಲ್ಲಾ ರಸ್ತೆಗಳು**

ಜಿಲ್ಲೆಯಲ್ಲಿಯ ಮಾರುಕಟ್ಟೆ, ಉತ್ಪಾದನಾ ಪ್ರದೇಶ ಮತ್ತು ಔದ್ಯೋಗಿಕ ಘಟಕ ಪ್ರದೇಶ, ರಾಜ್ಯ ಮತ್ತು

ರಾಷ್ಟ್ರ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ಜಿಲ್ಲೆಯಲ್ಲಿರುವ ಪ್ರಮುಖ ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಗಳು ಎಂದು ಕರೆಯಲಾಗುತ್ತದೆ. ಈ ರಸ್ತೆಗಳು ಗ್ರಾಮೀಣ ಜನತೆಗೆ ತಮ್ಮ ಕಚ್ಚಾ ಸಾಮಾಗ್ರಿ ಸರಾಗವಾಗಿ ತ್ವರಿತವಾಗಿ ಮಾರುಕಟ್ಟೆಗೆ ಸಾಗಿಸಲು ಸಹಾಯಕವಾಗಿವೆ. ಇವು ಸುಸ್ಥಿತಿಯಲ್ಲಿದ್ದರೆ ಸಾಮಗ್ರಿ ಸಾಗಣಿಕೆದಾರರು ಮತ್ತು ದೊಡ್ಡ ವ್ಯಾಪಾರಸ್ಥರು ಹಾಗೂ ಉದ್ಯಮದಾರರು ಗ್ರಾಮೀಣ ಜನರಿಂದ ನೇರವಾಗಿ ಸಾಮಾನು ಖರೀದಿಸಲು ಸಾಧ್ಯವಾಗುತ್ತದೆ. ಇದಲ್ಲದೆ ರೈತರಿಗೆ ತಮ್ಮ ಸಾಮಾನು ಇತರ ಜಿಲ್ಲೆಗೂ ಒಯ್ಯಲು ಅನುಕೂಲವಾಗುತ್ತದೆ. ಇವು ಪ್ರವಾಸೋದ್ಯಮ ಬೆಳವಣಿಗೆಗೂ ಸಹಕಾರಿಯಾಗಿವೆ. ಉತ್ತಮ ಆರೋಗ್ಯ ಮತ್ತು ಉನ್ನತ ಶಿಕ್ಷಣಕ್ಕೂ ಪೂರಕವಾಗಿದೆ. ಪಟ್ಟಣ ಪ್ರದೇಶಗಳು, ಗ್ರಾಮಗಳನ್ನು ಜೋಡಿಸುವ ಈ ರಸ್ತೆಗಳು ಗ್ರಾಮೀಣ ಜನತೆಯ ಬದುಕಿಗೆ ವಿಶಾಲತೆ ತುಂಬುವ ಸಾಧನಗಳಾಗಿವೆ.

### 2. ಇತರೆ ಜಿಲ್ಲಾ ರಸ್ತೆಗಳು

ಗ್ರಾಮೀಣ ಪ್ರದೇಶಗಳಿಂದ ಮಾರುಕಟ್ಟೆ ಕೇಂದ್ರಗಳಿಗೆ, ತಾಲ್ಲೂಕು ಕೇಂದ್ರಗಳಿಗೆ, ಹೋಬಳಿಗಳಿಗೆ ಅಥವಾ ಇತರೆ ಮುಖ್ಯ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು 'ಇತರೆ ಜಿಲ್ಲಾ ರಸ್ತೆಗಳು' ಎಂದು ಗುರುತಿಸಲಾಗಿದೆ. ಇವು ಸಹ ಗ್ರಾಮೀಣ ಜನತೆಗೆ ಅಗತ್ಯ ರಸ್ತೆ ಸಂಪರ್ಕ ಒದಗಿಸುತ್ತಿವೆ. ಸರಕು ಸಾಗಣಿಯೊಂದಿಗೆ ಗ್ರಾಮ, ಗ್ರಾಮಗಳ ನಡುವೆ ಸಂಪರ್ಕ ಹೊಂದಲು ಅವಕಾಶ ಕಲ್ಪಿಸಿರುವ ಈ ರಸ್ತೆಗಳು ಗ್ರಾಮೀಣರ ಜೀವನಾಡಿಗಳಾಗಿವೆ.

### 3. ಟಿ.ಡಿ.ಬಿ ರಸ್ತೆಗಳು

'ತಾಲೂಕು ಅಭಿವೃದ್ಧಿ ಮಂಡಳಿಗಳು' ಅಸ್ತಿತ್ವ ದಲ್ಲಿದ್ದಾಗ ನಿರ್ಮಾಣಗೊಂಡ ರಸ್ತೆಗಳನ್ನು ಟಿ.ಡಿ.ಬಿ ರಸ್ತೆಗಳೆಂದು ಕರೆಯಲಾಗುತ್ತದೆ. ಇವು ಗ್ರಾಮಗಳ ಸಂಪರ್ಕ ಕೊಂಡಿಗಳಾಗಿವೆ. ಈ ರಸ್ತೆಗಳ ನಿರ್ವಹಣೆಯು ಸರಿಯಾಗಿದ್ದಲ್ಲಿ ಗ್ರಾಮೀಣ ಜನರ ಓಡಾಟ ಮತ್ತು ವ್ಯವಹಾರ ಇನ್ನಷ್ಟು ಉತ್ತಮಗೊಳ್ಳಲು ಸಾಧ್ಯವಾಗುತ್ತದೆ.

### 4. ಗ್ರಾಮ ರಸ್ತೆಗಳು

ಗ್ರಾಮ, ಗ್ರಾಮಗಳ ನಡುವೆ ಅಥವಾ ಗ್ರಾಮದ ಸರಹದ್ದಿನಲ್ಲಿ ಸಂಪರ್ಕ ಒದಗಿಸುವ ರಸ್ತೆಗಳನ್ನು ಗ್ರಾಮ ರಸ್ತೆಗಳೆಂದು ಕರೆಯಲಾಗುತ್ತದೆ. ಇಂದಿನ ಗ್ರಾಮ ಪಂಚಾಯಿತಿಯಿಂದಲೇ ನಿರ್ಮಾಣಗೊಂಡ ಮತ್ತು ನಿರ್ವಹಣೆಗೊಳ್ಳುತ್ತಿರುವ ರಸ್ತೆಗಳು ಇವಾಗಿವೆ. ಇವು ಗ್ರಾಮೀಣ ಜನತೆಯ ನಿತ್ಯೋಪಯೋಗಿ ರಸ್ತೆಗಳಾಗಿವೆ.

**ನಮ್ಮ ಹೊಲ – ನಮ್ಮ ರಸ್ತೆ** ಎಂಬ ಯೋಜನೆಯ ಮೂಲಕ ಹೊಲಗಳ ಸಂಪರ್ಕ ಒದಗಿಸುವ ರಸ್ತೆಗಳು ಸಹ ನಿರ್ಮಾಣಗೊಂಡಿವೆ. ಇವು ಕೃಷಿಕರಿಗೆ ಬಹುವಿಧದಲ್ಲಿ ಉಪಯುಕ್ತವಾಗಿವೆ.

ಸಕ್ಕರೆ ಕಾರ್ಖಾನೆಗಳು ಕಬ್ಬು ಸಾಗಾಣಿಕೆಗೆ ಅನುಕೂಲವಾಗುವಂತೆ ಮಾಡಲು ನಿರ್ಮಿಸಿದ ರಸ್ತೆಗಳು ರೈತರ ಸೇವೆಯಲ್ಲಿವೆ. ಇವು ಕಬ್ಬು ಸಾಗಾಣಿಕೆಗೆ ಬಳಕೆಯಾಗುವುದರ ಜೊತೆಗೆ ರೈತರ ಹೊಲಗಳಿಗೂ ಸಂಪರ್ಕ ಒದಗಿಸುತ್ತದೆ. ಈ ರಸ್ತೆಗಳನ್ನು ಆಯಾ ಪ್ರದೇಶದ ಸಕ್ಕರೆ ಕಾರ್ಖಾನೆಗಳು ನಿರ್ಮಿಸಿ ನಿರ್ವಹಣೆ ಮಾಡುತ್ತವೆ.

ಬರಗಾಲ ಕಾಮಗಾರಿ ಯೋಜನೆಯಡಿ, ಕೂಲಿಗಾಗಿ ಕಾಳು ಯೋಜನೆಯಾದ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲೂ ಅನೇಕ ಗ್ರಾಮೀಣ ರಸ್ತೆಗಳು ನಿರ್ಮಾಣಗೊಂಡಿವೆ. ಇವೆಲ್ಲ ಗ್ರಾಮೀಣ ಜನತೆಗೆ ರಸ್ತೆ ಸಂಪರ್ಕ ಒದಗಿಸುವ ಉದ್ದೇಶ ಹೊಂದಿವೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲೂ ರಸ್ತೆಗಳ ನಿರ್ಮಾಣವಾಗುತ್ತಲಿವೆ. ಇವುಗಳು ಸಕಾಲಿಕವಾಗಿ ನಿರ್ವಹಣೆಗೊಳ್ಳುವ ಅಗತ್ಯವಿದೆ. ಇಂದಿಗೂ ಗ್ರಾಮ ಮತ್ತು ಗ್ರಾಮದ ಹೊರಗಿನ ರಸ್ತೆಗಳನ್ನು ಸರ್ವಋತು ಸಂಪರ್ಕ ರಸ್ತೆಗಳನ್ನಾಗಿ ರಕ್ಷಿಸಲು ಅನುದಾನದ ಕೊರತೆ ಇದೆ. ನಮ್ಮ ಹೊಲ – ನಮ್ಮ ದಾರಿ, ಈ ಯೋಜನೆಯು ಹೊಲಗಳಿಗೆ ಗೊಬ್ಬರ, ಬಿತ್ತನೆ ಬೀಜ, ಕೃಷಿ ಉಪಕರಣ ಸಾಗಿಸಲು ಸಹಕಾರಿಯಾಗಿದೆ.

### 5. ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ

'ರಸ್ತೆ' ಇದೊಂದು ಮೂಲಭೂತ ಆವಶ್ಯಕತೆ ಇರುವುದನ್ನು ಗಮನಿಸಿ ಯೋಜನಾ ವಲಯದಲ್ಲಿ ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶ ಇಂತಿವೆ.

1. ತುರ್ತು ಮತ್ತು ಅಗತ್ಯವಿರುವ ರಸ್ತೆ ಕಾಮಗಾರಿಗಳನ್ನು ಆದ್ಯತೆಯ ಮೇಲೆ ತಗೆದುಕೊಳ್ಳುವುದು.

2. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ 3ನೇ ಹಂತದ ಟೆಂಡರ್ ಪ್ರೀಮಿಯಂ ಮತ್ತು ನಿರ್ವಹಣಾ ಅನುದಾನ ಪಾವತಿಸಲು ಅವಕಾಶ ಕಲ್ಪಿಸುವುದು.

3. ರಸ್ತೆ ದುರಸ್ತಿ, ರಸ್ತೆ ನಿರ್ವಹಣೆಯು ಕಾಮಗಾರಿಗಳನ್ನು ಹಮ್ಮಿಕೊಳ್ಳುವುದು.

4. ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಡಾ. ಡಿ. ಎಂ. ನಂಜುಂಡಪ್ಪ ರವರ ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತ ಅಧಿಕಾರದ ಸಮಿತಿ ಶಿಫಾರಸ್ಸಿನಲ್ಲಿ ಸೂಚಿಸಲಾದ ಸೂಚ್ಯಂಕ ಆಧಾರ ವನಿಟ್ಟುಕೊಳ್ಳುವುದು.

ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿಯ ಯೋಜನೆಯನ್ನು 2003–04 ನೇ ಸಾಲಿನಿಂದ ಪ್ರಾರಂಭಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ನಿಗದಿಗೊಳಿಸಿದ ಅನುದಾನವನ್ನು ಗ್ರಾಮೀಣ ರಸ್ತೆ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳುವುದು ಅಗತ್ಯ.

ಬಾಕಿ ಬಿಲ್ಲುಗಳನ್ನು ಮತ್ತು ದಿನಗೂಲಿ ನೌಕರರ ದಿನಗೂಲಿ ವೇತನ ಪಾವತಿಸಿದ ನಂತರ ಹಾಗೂ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ 3 ನೇ ಹಂತದ ಟೆಂಡರ್ ಪ್ರೀಮಿಯಂ ಮತ್ತು ನಿರ್ವಹಣಾ ಅನುದಾನ ಹೊರತುಪಡಿಸಿ ಉಳಿದ ಅನುದಾನದಲ್ಲಿ ಹೊಸ ಕಾಮಗಾರಿಗಳನ್ನು ಕೈ ಕೊಳ್ಳುವ ಪರಿಪಾಠ ಹಾಕಿಕೊಳ್ಳಬೇಕಿದೆ. ಆದರೆ ಹೊಸ ಕಾಮಗಾರಿಗೆ ಆದ್ಯತೆ ಕೊಡಲಾಗುತ್ತಿದೆ. ಇದು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅನುಕೂಲ ಮಾಡಿಕೊಟ್ಟ ಯೋಜನೆಯಾಗಿದೆ.

### 6. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ

ಬಡತನ ನಿರ್ಮೂಲನೆ ಮತ್ತು ಗ್ರಾಮ – ನಗರ ನಡುವಿನ ಅಂತರ ಕಡಿಮೆಗೊಳಿಸುವುದು ಅದ್ಯತೆಯ ಕ್ಷೇತ್ರವಾಗಿ ಇಂದು ಮಾರ್ಪಟ್ಟಿದೆ. ಈ ದಿಶೆಯಲ್ಲಿ ರಸ್ತೆ ಸಂಪರ್ಕ ಮಹತ್ವದ ಪಾತ್ರ ವಹಿಸುತ್ತದೆಂಬುದನ್ನು ಮನಗಂಡ ಕೇಂದ್ರ ಸರಕಾರವು ಜನತೆಗೆ ಸರ್ವಋತು ಸಂಚಾರಕ್ಕೆ ಯೋಗ್ಯವಾಗಿರುವ ರಸ್ತೆ ನಿರ್ಮಾಣಕ್ಕೆ 'ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ' ಎಂಬ ವಿನೂತನ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯ ಉದ್ದೇಶಗಳು ಇಂತಿವೆ.




1. ಸಂಪರ್ಕರಹಿತ ಜನ ವಸತಿ / ಗ್ರಾಮಗಳ ಮಧ್ಯೆ ಹೊಸದಾಗಿ ಸಂಪರ್ಕ ರಸ್ತೆ ನಿರ್ಮಾಣ.

2. 1000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮಗಳಿಗೆ ಉತ್ತಮ ಸರ್ವಋತು ರಸ್ತೆ ಸಂಪರ್ಕ ಕಲ್ಪಿಸುವುದು.

3. 500 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಪ್ರತಿ ಗ್ರಾಮಕ್ಕೆ 10ನೇ ಪಂಚವಾರ್ಷಿಕ ಯೋಜನೆಯ ಕೊನೆಯೊಳಗಾಗಿ ಸರ್ವ ಋತು ಸಂಪರ್ಕ ರಸ್ತೆ ಒದಗಿಸುವುದು.

4. ಗುಡ್ಡಗಾಡು ರಾಜ್ಯಗಳಲ್ಲಿ ಹಾಗೂ ಬಂಜರು ಪ್ರದೇಶ, ಗಿರಿಜನ ಪ್ರದೇಶಗಳಲ್ಲಿ 250 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ ಜನವಸತಿಗಳಿಗೆ ಸಂಪರ್ಕ ರಸ್ತೆ ಕಲ್ಪಿಸುವುದು.

5. ಒಂದು ಜಿಲ್ಲೆಯಲ್ಲಿಯ ಎಲ್ಲ ಸಂಪರ್ಕರಹಿತ ಜನವಸತಿಗಳ ಸಂಪರ್ಕ ರಸ್ತೆ ಹೊಂದಿದ್ದನ್ನು ಖಾತ್ರಿ ಮಾಡಿಕೊಂಡ ನಂತರ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯ ಕೈಕೊಳ್ಳುವುದು. ಆದರೆ ರಾಜ್ಯದಲ್ಲಿ ಸಂಪರ್ಕ ರಹಿತ ಜನವಸತಿಗಳು ಇರುವವರೆಗೆ ರಾಜ್ಯಕ್ಕೆ ನಿಗದಿಯಾದ ಅನುದಾನ ಶೇಕಡಾ 20 ಕ್ಕೆ ಒಳಪಟ್ಟು ಮೇಲ್ದರ್ಜೆಗೇರಿಸುವ ಕಾರ್ಯವನ್ನು ಕೈಗೊಳ್ಳಬಹುದು. ಮೇಲ್ದರ್ಜೆಗೇರಿಸುವ ಕಾರ್ಯ ಕೈಗೆತ್ತಿಕೊಳ್ಳುವಾಗ ಭಾಗಶಃ ಋತು ರಸ್ತೆಗಳನ್ನು ಸರ್ವಋತು ರಸ್ತೆಗಳನ್ನಾಗಿ ಮಾರ್ಪಡಿಸಲು ಆದ್ಯತೆ ನೀಡುವುದು.

ಪ್ರತಿ ಗ್ರಾಮ ಸರ್ವಋತು ರಸ್ತೆ ಹೊಂದುವುದ ರೊಂದಿಗೆ ಜನರ 'ವಹಿವಾಟು' ಚಲನ ವಲನಕ್ಕೆ ಪ್ರೋತ್ಸಾಹ ನೀಡುವ ಮಹಾತ್ವಾಕಾಂಕ್ಷೆ ಯೋಜನೆ



ಇದಾಗಿದೆ. ಪ್ರತಿ ಗ್ರಾಮ ರಸ್ತೆಯು ಮುಖ್ಯ ರಸ್ತೆಗೆ ಜೋಡಣೆಯಾಗುವಂತೆ ಮಾಡುವ ಈ ಯೋಜನೆ ಕುಗ್ರಾಮಗಳನ್ನು ಸುಗ್ರಾಮಗಳನ್ನಾಗಿಸಿದೆ. ಸಂಪರ್ಕ ರಸ್ತೆಯ ಕೊರತೆಯಿಂದಾಗಿ ಅನುಭವಿಸುತ್ತಿದ್ದ ಹಲವಾರು ಯಾತನೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ದೂರ ಮಾಡಿದೆ. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಸ್ವಾತಂತ್ರ್ಯ ನಂತರ ಹಮ್ಮಿಕೊಂಡ ವಿಶ್ವಾಸಾರ್ಹ ಮತ್ತು ಗುಣಮಟ್ಟದ ಯೋಜನೆಯಾಗಿದೆ. ಈ ಯೋಜನೆಯಲ್ಲಿ ಗುಣಮಟ್ಟದ ರಸ್ತೆಗಳು ನಿರ್ಮಾಣವಾಗಿವೆ.

ಗ್ರಾಮೀಣ ಬದುಕು ಸ್ವಾವಲಂಬನೆ, ಸ್ವಚ್ಛತೆಯತ್ತ ದಿಟ್ಟ ಮತ್ತು ಧೀಮಂತ ಹೆಜ್ಜೆ ಇಡುವಲ್ಲಿ ಗ್ರಾಮೀಣ ರಸ್ತೆಗಳು ಪೂರಕವಾಗಿವೆ. ಗ್ರಾಮ ಪಂಚಾಯತಿಗಳು ತಮ್ಮ ಬೇಕು – ಬೇಡಿಕೆಗಳನ್ನು ಗ್ರಾಮ ಸಭೆಯ ಮೂಲಕ ಪಟ್ಟಿ ಮಾಡಿಕೊಂಡು ರಸ್ತೆ ಸಂಪರ್ಕದಂತಹ ಕಾಮಗಾರಿಗಳನ್ನು ಅದ್ಯತೆಯ ಮೇಲೆ ನಿರ್ವಹಿಸುವಂತೆ ನೋಡಿಕೊಳ್ಳುವ ಅಗತ್ಯವಿದೆ. ಪ್ರತಿ ಗ್ರಾಮ ಸ್ವಚ್ಛತೆಯಿಂದ ಕೂಡಿರಲು ಗ್ರಾಮದೊಳಗಿನ ರಸ್ತೆಗಳು ಶುಚಿಯಾಗಿರಿಸುವ ಅಗತ್ಯವಿದೆ. ಪ್ರತಿ ಗ್ರಾಮ ಪಂಚಾಯತಿ ತನ್ನ ಅಭಿವೃದ್ಧಿ ಅನುದಾನ, ಕರ ವಸೂಲಿಯ ಅನುದಾನ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯ ಅನುದಾನ, 12ನೇ ಹಣಕಾಸಿನ ಅನುದಾನ, ಸ್ವಚ್ಛ ಗ್ರಾಮ ಯೋಜನೆಯ ಅನುದಾನ, ಜಲ ನಿರ್ಮಲ ಯೋಜನೆಯ ಮತ್ತು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಸಮರ್ಪಕತೆಯೊಂದಿಗೆ ಯೋಜನಾಬದ್ಧವಾಗಿ ವಿನಯೋಗಿಸಿಕೊಂಡರೆ ಗ್ರಾಮಗಳ ರಸ್ತೆ, ಗಟಾರ ಶುಚಿತ್ವದಿಂದಲೂ ಸಂಚಾರಕ್ಕೆ ಯೋಗ್ಯವಾಗಿ, ಗ್ರಾಮದ ಸೌಂದರ್ಯವನ್ನು ಹೆಚ್ಚಿಸುತ್ತವೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಸದಸ್ಯರು ಹೆಚ್ಚಿನ ಮುತುವರ್ಜಿ ವಹಿಸುವ ಅಗತ್ಯವಿದೆ.

ಗ್ರಾಮೀಣ ಪ್ರದೇಶದ ಜನರ ಅಭ್ಯುದಯದಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ವಸತಿ, ರಸ್ತೆ ಮತ್ತು ಆಹಾರ ಭದ್ರತೆ ಪ್ರಮುಖ ಪಾತ್ರ ವಹಿಸುತ್ತಿರುವ ಹಿನ್ನಲೆಯಲ್ಲಿ 'ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ' ಹಮ್ಮಿಕೊಳ್ಳಲಾಗಿದೆ. ಈ ಯೋಜನೆ ಗ್ರಾಮೀಣ ಪ್ರದೇಶದ ಸಮಗ್ರ ಅಭಿವೃದ್ಧಿಯ ಧ್ಯೇಯೋದ್ದೇಶ ಹೊಂದಿದೆ. ಈ ಯೋಜನೆಯಲ್ಲೂ ಗ್ರಾಮೀಣ ರಸ್ತೆ ನಿರ್ಮಾಣ ಮತ್ತು ನಿರ್ವಹಣೆಗೆ ಅವಕಾಶವಿದೆ. ಗ್ರಾಮೀಣ ರಸ್ತೆ ನಿರ್ಲಕ್ಷ್ಯಕ್ಕೆ ಒಳಗೊಂಡಷ್ಟು, ಗ್ರಾಮೀಣ ಅಭ್ಯುದಯದ ವೇಗ ಮಂದಗತಿಗೆ ಒಳಗೊಳ್ಳುವುದು ಕಂಡು ಬಂದಿದೆ. ಗ್ರಾಮೀಣ ರಸ್ತೆಗಳ ನಿರ್ವಹಣೆಯಲ್ಲಿ ಅಭಿಯಂತರರು ಸಕಾಲಿಕವಾಗಿ ಅಂದಾಜು ವೆಚ್ಚ ಪಟ್ಟಿ ತಯಾರಿಸಿ ಕೊಡುವುದು ಸಹ ಅಷ್ಟೇ ಮುಖ್ಯವಾಗಿದೆ. ಕರ್ನಾಟಕ ಸರ್ಕಾರವು ಎಲ್ಲಾ ಗ್ರಾಮಗಳು ಸರ್ವಋತು ರಸ್ತೆ ಸಂಪರ್ಕ ಹೊಂದಬೇಕೆಂದು ಸ್ಪಷ್ಟ ನೀತಿಯನ್ನಿಟ್ಟು ಕೊಂಡು ಜಿಲ್ಲಾ ರಸ್ತೆಗಳ ನೀಲಿ ನಕ್ಷೆಯನ್ನು ಸಿದ್ಧ ಪಡಿಸಿಕೊಂಡು ಅನುದಾನದ ಲಭ್ಯತೆಯಂತೆ ಕ್ರಿಯಾ ಯೋಜನೆ ಹಾಕಿಕೊಂಡಿದೆ. ಕುಗ್ರಾಮ – ಸುಗ್ರಾಮ, ನಮ್ಮ ಹೊಲ ನಮ್ಮ ರಸ್ತೆ, ಸುವರ್ಣ ಗ್ರಾಮೋದಯ ಮುಂತಾದ ಜನಪರ ಯೋಜನೆಗಳ ಮೂಲಕ ಗ್ರಾಮೀಣ ಜನತೆಗೆ ಸೂಕ್ತ ರಸ್ತೆ ವ್ಯವಸ್ಥೆ ಒದಗಿಸಲು ಮುಂದಾಗಿದೆ. ಸರ್ಕಾರದ ಯಾವುದೇ ಯೋಜನೆ ಕ್ರಿಯಾಶೀಲವಾಗಿರಲು ಕಾರ್ಯನಿರತ ಸಿಬ್ಬಂದಿಯ ನಿಷ್ಠೆ ಮತ್ತು ಶ್ರದ್ಧೆಯೊಂದಿಗೆ ಗ್ರಾಮೀಣ ಪ್ರದೇಶದ ಚುನಾಯಿತ ಪ್ರತಿನಿಧಿಗಳು ಮತ್ತು ಸಮುದಾಯವು ಸರ್ಕಾರದ ಯೋಜನೆಗಳಾದ ಸರ್ವಋತು ಸಂಪರ್ಕ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ, ಬೀದಿ ದೀಪ ನಿರ್ವಹಣೆ ಮತ್ತು ಕುಡಿಯುವ ನೀರಿನ ಯೋಜನೆಗಳು ನಮಗಾಗಿ ಎಂಬ ಅಭಿಮಾನವಿದ್ದಲ್ಲಿ ಮಾತ್ರ ನಿಶ್ಚಿತ ಗುರಿ ಸಾಧಿಸಲು ಸಾಧ್ಯ.

ಲೇಖನ



ನಾಗರತ್ನ ಭಟ್

ಸ್ವಚ್ಛ ಭಾರತ ಮಿಷನ್ ಕೇವಲ ಕಾರ್ಯಕ್ರಮ ವಾಗಿರದೆ ಇದೊಂದು ಜನಾಂದೋಲನವಾಗಿದೆ.

# ಸ್ವಚ್ಛತೆ ನಡೆದುಬಂದ ಹಾದಿ

"ಸ್ವಾತಂತ್ರ್ಯ ಮತ್ತು ಸ್ವಚ್ಛತೆ ಎರಡೂ ಕೂಡ ಮಾನವನ ಜನ್ಮಸಿದ್ಧ ಹಕ್ಕು". ಸ್ವಾತಂತ್ರ್ಯಕ್ಕಾಗಿ ಎಷ್ಟು ಹಂಬಲವಿತ್ತೋ ಅಷ್ಟೆ ಆಸಕ್ತಿಯನ್ನು ಸ್ವಚ್ಛತೆಯೆಡೆಗೂ ಕೊಡಬೇಕಾಗುತ್ತದೆ. ಒಂದು ವೇಳೆ ಸ್ವಚ್ಛತೆಯೆಡೆಗೆ ಉದಾಸೀನ ದೃಷ್ಟಿ ಹೊಂದಿದ್ದರೆ ನಮ್ಮ ಶತ್ರು ನಮ್ಮ ಅಂಗಳದಲ್ಲಿಯೇ ಹುಟ್ಟಿ ಬೆಳೆದು ನಮ್ಮ ನಾಶಕ್ಕೆ ನಾಂದಿಯಾಗುತ್ತದೆ. ಜನಸಂಖ್ಯೆ ಹೆಚ್ಚಾದಂತೆ, ಸ್ವಚ್ಛತೆಯ ಸಮಸ್ಯೆಯು ಹೆಚ್ಚಾಗುತ್ತಿದ್ದು, ಇಡೀ ಸಮುದಾಯಕ್ಕೆ ಇದೊಂದು ಸವಾಲಾಗಿ ನಿಂತಿದೆ.

ಭಾರತ ಸ್ವತಂತ್ರವಾಗಲು ಬ್ರಿಟಿಷರೊಂದಿಗೆ ಯುದ್ಧ ಮಾಡಬೇಕಾಯ್ತು. ಆದರೆ ಅದೇ ಸ್ವತಂತ್ರ ಭಾರತವನ್ನು ಸ್ವಚ್ಛ ಭಾರತವಾಗಿ ನಿರ್ವಹಣೆ ಮಾಡಲು ಸನ್ನದ್ಧರಾಗಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಎಲ್ಲಾ ಅಂಶಗಳನ್ನು ಮನಗೊಂಡು (1) ಬಯಲು ಬಹಿರ್ದೆಸೆ ಮುಕ್ತಗೊಳಿಸುವುದು, (2) ತ್ಯಾಜ್ಯಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿಭಾಯಿಸುವ ಅಂಶಗಳತ್ತ ಹೆಚ್ಚು ಆದ್ಯತೆ ನೀಡಬೇಕಾಗಿದೆ.

**1. ಬಯಲು ಬಹಿರ್ದೆಸೆ ಪದ್ಧತಿ:** ಇದು ತಲೆಮಾರುಗಳ ರೂಢಿ. ಆಗ ಜನ ಸಾಂದ್ರತೆ ಕಡಿಮೆ ಇತ್ತು ಖಾಲಿ ಭೂಮಿ, ಆರಣ್ಯ, ಪ್ರಾಣಿಗಳ ಸಂಖ್ಯೆಯು ಅಧಿಕವಾಗಿತ್ತು. ವಿರಳವಾದ ಜನ ವಸತಿ, ಕಡಿಮೆ ಜನಸಂಖ್ಯೆ ಇದ್ದಂತಹ ಪರಿಸ್ಥಿತಿಯಲ್ಲಿ ಸಮುದಾಯಕ್ಕೆ ಇದು ಸಮಸ್ಯೆಯಾಗಿ ಕಾಣಲಿಲ್ಲ. ಆದರೆ ಕಾಲಕ್ರಮೇಣ ಆದ ವಿಪರೀತ ಬದಲಾವಣೆಗೆ ಬಯಲು ಬಹಿರ್ದೆಸೆ ಒಂದು ಘೋರ ಸಮಸ್ಯೆಯಾಗಿ ಪರಿಣಮಿಸಿ, ಅರಿವಿಗೆ ಬಾರದ ಅನಾಹುತಗಳಿಗೆ ಪರಿಹಾರ ಹುಡುಕಲು ಮುಂದಾದಾಗ ಗೋಚರಿಸಿದ್ದು, ಮಾನವ ಮಲ ಅತೀ ವಿಷಕಾರಿ ಎಂಬುದು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಾ ಬಂದಿದ್ದು, ವಿವರ ಈ ಕೆಳಗಿನಂತಿದೆ.

1. 1985–1995 ಕೇಂದ್ರ ಗ್ರಾಮೀಣ ನೈರ್ಮಲ್ಯ ಯೋಜನೆ
2. 1991–2001 ಡ್ಯಾನಿಡಾ ಮೊದಲ ಹಂತದ ನೈರ್ಮಲ್ಯ ಕಾರ್ಯಕ್ರಮ
3. 1995–2004 ನೈರ್ಮಲ್ಯ ಕರ್ನಾಟಕ ಯೋಜನೆ
4. 1999–2002 ಮಕ್ಕಳ ಪರಿಸರ ಅಭಿವೃದ್ಧಿ ಯೋಜನೆ (Unicef ನೆರವು)
5. 1999–2004 ಕೇಂದ್ರ ವಲಯ ಸುಧಾರಣಾ ಯೋಜನೆ
6. ಸ್ವಚ್ಛ ಗ್ರಾಮ ಯೋಜನೆ
7. ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ (ಡ್ಯಾನಿಡಾ)

ಕರ್ನಾಟಕ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸಂಸ್ಥೆ,
ಕಾವೇರಿ ಭವನ, ಬೆಂಗಳೂರು

| | | | | |
|---|---|---|---|---|
| 1. | 02–10–2005 | 28–03–2006 | ರೂ. 500/– | |
| 2. | 29–03–2006 | 20–10–2008 | ರೂ. 1,200/– | (ಕೇಂದ್ರ 75%, ರಾಜ್ಯ 25%) |
| 3. | 21–10–2008 | 06–05–2009 | ರೂ. 2,500/– | (ಕೇಂದ್ರ 75%, ರಾಜ್ಯ 25%) |
| 4. | 07–05–2009 | 31–05–2011 | ರೂ. 3,000/– | (ಕೇಂದ್ರ 50%, ರಾಜ್ಯ 50%) |
| 5. | 01–06–2015 | 31–03–2012 | ರೂ. 3,700/– | (ಕೇಂದ್ರ 75%, ರಾಜ್ಯ 25%) |
| 6. | 01–04–2012<br>01–10–2014<br>NBA ಜೊತೆಗೆ NREGA ಸಹಭಾಗಿತ್ವ | | ರೂ. 4,700/–<br><br>ರೂ. 5,400/– | (ಕೇಂದ್ರ 75%, ರಾಜ್ಯ 25%) |
| 7. | 02–10–2014 | ಪ್ರಸ್ತುತ | ರೂ. 12,000/–<br>SC/ST ಫಲಾನುಭವಿಗಳಿಗೆ ರಾಜ್ಯ ಸರಕಾರದಿಂದ ಹೆಚ್ಚುವರಿ ರೂ. 3,000/– | (ಕೇಂದ್ರ 75%, ರಾಜ್ಯ 25%) |

8. 1993 ರಿಂದ ವಿಶ್ವಬ್ಯಾಂಕ್‌ನ ಜಲನಿರ್ಮಲ ಯೋಜನೆ
9. 2005–2012 ಸಂಪೂರ್ಣ ಸ್ವಚ್ಛತಾ ಆಂದೋಲನ
10. 2012–2014 ನಿರ್ಮಲ ಭಾರತ ಅಭಿಯಾನ
11. ಪ್ರಸ್ತುತ 2014 ಅಕ್ಟೋಬರ್ 2 ರಿಂದ ಸ್ವಚ್ಛ ಭಾರತ ಮಿಷನ್

ಈ ರೀತಿ ವಿವಿಧ ಹಂತದಲ್ಲಿ ಹಲವಾರು ಯೋಜನೆಗಳ ಮೂಲಕ ನಿರಂತರ ಪ್ರಯತ್ನಗಳು ನಡೆದರೂ ಕೂಡ ನಿಗದಿತ ಗುರಿ ಸಾಧಿಸುವಲ್ಲಿ ನಿರೀಕ್ಷಿತ ಪ್ರಮಾಣ ತಲುಪುವಲ್ಲಿ ಸಾಧ್ಯವಾಗ ದಿದ್ದುದರಿಂದ ಕೇವಲ ಮನ ಪರಿವರ್ತನೆಯಿಂದ ಅನುಷ್ಠಾನ ಕಷ್ಟಸಾಧ್ಯ ಎಂಬುದು ಅರಿವಾಗಿ ಪ್ರೋತ್ಸಾಹಧನದ ರೂಪದಲ್ಲಿ ಆರ್ಥಿಕ ನೆರವನ್ನು ಒದಗಿಸಿ, ಜನರು ಶೌಚಾಲಯ ಸೌಲಭ್ಯ ಹೊಂದುವಂತೆ ಪ್ರೇರೇಪಿಸಲಾಯಿತು.

2005ರಿಂದ ಸಂಪೂರ್ಣವಾಗಿ ನೈರ್ಮಲ್ಯಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು, ಪ್ರಾರಂಭದಲ್ಲಿ ಕೇವಲ ಬಡತನ ರೇಖೆಯ ಕೆಳಗಿರುವ ಫಲಾನುಭವಿಗಳನ್ನು ಮಾತ್ರ ಕೇಂದ್ರೀಕರಿಸಿ, ಪ್ರೋತ್ಸಾಹಧನವಾಗಿ ರೂ. 500/– ನೀಡಲಾಗುತ್ತಿತ್ತು. ಕಾಲಕ್ರಮೇಣ ಪ್ರೋತ್ಸಾಹಧನವನ್ನು ಮೇಲಿನ ಕೋಷ್ಟಕದಲ್ಲಿ ನೀಡಿರುವಂತೆ ಹೆಚ್ಚಿಸಲಾಯಿತು.

ಬಯಲು ಬಹಿರ್ದೆಸೆ ಮುಕ್ತ ಎನ್ನುವುದು ತುಂಬಾ ವಿಶಾಲವಾದ ಪರಿಕಲ್ಪನೆಯಾಗಿದ್ದು, ಇಡೀ ಜನವಸತಿಯೇ ಒಳಗೊಳ್ಳುತ್ತದೆ. ಇಲ್ಲಿ ಶ್ರೀಮಂತ, ಬಡವ, ಯಾವುದೇ ಜಾತಿಯ ಅಭ್ಯಂತರ ಇಲ್ಲದೆ ಪ್ರತಿಯೊಬ್ಬರೂ ಕೂಡ ಬಯಲು ಬಹಿರ್ದೆಸೆ ಮಾಡುವುದನ್ನು ನಿಲ್ಲಿಸಬೇಕು. ಪರ್ಯಾಯವಾಗಿ ಶೌಚಾಲಯ ನಿರ್ಮಾಣ ಮಾಡಿ ಬಳಸಬೇಕು. ಅದ್ದರಿಂದ ಬಯಲು ಬಹಿರ್ದೆಸೆ ಮುಕ್ತ ಪರಿಕಲ್ಪನೆಯಡಿಯಲ್ಲಿ ಕೇವಲ BPL ನವರಿಗೆ ಮಾತ್ರ ಕೇಂದ್ರೀಕೃತವಾಗುವುದು ಸೂಕ್ತವಲ್ಲ ಎಂದು APL ನಲ್ಲಿ ಬರುವ 5 ವರ್ಗಗಳಿಗೂ ಯೋಜನೆಯ ನೆರವನ್ನು ವಿಸ್ತರಿಸಲಾಯಿತು.

ಅವುಗಳೆಂದರೆ:–

1. APL ನ ಸಣ್ಣ ಮತ್ತು ಅತೀಸಣ್ಣ ರೈತರು.
2. APL ಮಹಿಳಾ ಆಧಾರಿತ ಕುಟುಂಬಗಳು.
3. ಅಂಗವಿಕಲರಿರುವ ಎಲ್ಲಾ APL ಕುಟುಂಬಗಳು.
4. APL ನ ಭೂರಹಿತ ಕಾರ್ಮಿಕರು.
5. APL ನ ಎಲ್ಲಾ SC/ST ಕುಟುಂಬಗಳು.

ಹಾಗೂ BPL ಮತ್ತು APLನ ಫಲಾನುಭವಿಗಳಿಗೆ ಅದ್ಯತೆಯ ಮೇರೆಗೆ ಪ್ರೋತ್ಸಾಹಧನ ನೀಡಲಾಗುವುದು.

1. ರಾಷ್ಟ್ರೀಯ ಸಾಮಾಜಿಕ ನೆರವಿನ ಯೋಜನೆಯ ಫಲಾನುಭವಿ ಕುಟುಂಬಗಳಿಗೆ.
2. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಅನುಷ್ಠಾನಗೊಳ್ಳುತ್ತಿರುವ ಗರ್ಭಿಣಿ ಹಾಗೂ ಹಾಲುಣಿಸುತ್ತಿರುವ ತಾಯಂದಿರಿಗೆ ಸಂಬಂಧಿಸಿದ ಯೋಜನೆಗಳ ಫಲಾನುಭವಿ ಕುಟುಂಬಗಳಿಗೆ.
3. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿ ಹೆಣ್ಣು ಮಕ್ಕಳಿರುವ ಕುಟುಂಬಗಳಿಗೆ (ಶಿಶು ಅಭಿವೃದ್ಧಿ ಯೋಜನೆ).

ಈ ಬಗ್ಗೆ ವಿಶೇಷ ಸುತ್ತೋಲೆಯನ್ನು ನೀಡಿ, ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿದೆ.

**☆ ಸ್ವಚ್ಛ ಭಾರತ ಮಿಷನ್‌ನಲ್ಲಿ ಮುಖ್ಯವಾಗಿ 5 ಘಟಕಗಳಿವೆ**

1. ವೈಯುಕ್ತಿಕ ಶೌಚಾಲಯ ನಿರ್ಮಾಣ
2. ಸಾಂಸ್ಥಿಕ ಶೌಚಾಲಯ (ಶಾಲೆ, ಅಂಗನವಾಡಿಗಳಿಗೆ) ನಿರ್ಮಾಣ
3. ಸಾರ್ವಜನಿಕ ಶೌಚಾಲಯ ನಿರ್ಮಾಣ
4. ಗುಂಪು ಶೌಚಾಲಯ ನಿರ್ಮಾಣ



5. ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ

**☆ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ಘಟಕಗಳಿಗೆ ಲಭ್ಯವಿರುವ ಅನುದಾನದ ವಿವರ:**

**1. ವೈಯುಕ್ತಿಕ ಶೌಚಾಲಯ:** ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬವು ಶೌಚಾಲಯ ನಿರ್ಮಿಸಿಕೊಂಡು, ಬಳಸಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯ/ರಾಷ್ಟ್ರವನ್ನಾಗಿ ಮಾಡುವ ಗುರಿಯನ್ನು ಹೊಂದಿದ್ದು, ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳು 75:25 ರ ಅನುಪಾತದಲ್ಲಿ ರೂ. 12,000/– ಗಳನ್ನು ಪ್ರೋತ್ಸಾಹಧನವಾಗಿ ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ. SC/ST ಫಲಾನುಭವಿಗಳಿಗೆ ರಾಜ್ಯ ಸರಕಾರವು ಹೆಚ್ಚಿನ ಪ್ರೋತ್ಸಾಹಧನವಾಗಿ ರೂ. 3,000/– ಗಳನ್ನು ನೀಡುತ್ತಿದೆ.

**2. ಸಾಂಸ್ಥಿಕ ಶೌಚಾಲಯ ನಿರ್ಮಾಣ:** ಸರ್ಕಾರಿ ವಲಯದ ಪ್ರತಿಯೊಂದು ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲೂ ಮಕ್ಕಳ ಸಂಖ್ಯೆಗನುಗುಣವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಿ, ಮಕ್ಕಳು ಅದನ್ನು ನಿಗದಿತ ಉದ್ದೇಶಕ್ಕಾಗಿ ಬಳಸುವಂತೆ, ಶಿಕ್ಷಕರು ಮನವೊಲಿಸಿ, ಶಾಲಾ ಹಂತದಲ್ಲಿ ಬಯಲು ಬಹಿರ್ದೆಸೆ ಮುಕ್ತ ಪರಿಕಲ್ಪನೆ ಮೂಡಿಸಿದಲ್ಲಿ ಮುಂದಿನ ನಾಗರೀಕ ಸಮಾಜದ ಬುನಾದಿ ಭದ್ರವಾಗಿರುತ್ತದೆ ಎಂಬ ಉದ್ದೇಶದಿಂದ ಆಯಾಯ ಇಲಾಖೆಯ ಮೂಲಕವೇ ಶೌಚಾಲಯ ನಿರ್ಮಾಣ ಮತ್ತು ನಿರ್ವಹಣೆಗೆ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ರೂ. 35,000/– ಗಳ ಪ್ರೋತ್ಸಾಹಧನವಾಗಿ ನೀಡಲಾಗುತ್ತದೆ.

**3. ಪ್ರತೀ ಅಂಗನವಾಡಿಗಳಿಗೂ (ಸರ್ಕಾರಿ ಕಟ್ಟಡಗಳಿಗೆ ಮಾತ್ರ):** ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಶಿಶು ಸ್ನೇಹಿ ಶೌಚಾಲಯಗಳನ್ನು ನಿರ್ಮಾಣ ಮಾಡಿ ಮಕ್ಕಳಿಗೆ ಬಾಲ್ಯದಲ್ಲಿಯೇ ಶೌಚಾಲಯದ ಬಳಕೆ ಬಗ್ಗೆ ರೂಢಿ ಮಾಡಿಸಬೇಕು. ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸುವಾಗ ಮಕ್ಕಳು ಇಷ್ಟ ಪಡುವ ರೀತಿಯಲ್ಲಿ ಒಳಗಡೆ ಆಕರ್ಷಕವಾಗಿ ಚಿತ್ರ ಬಿಡಿಸಿರಬೇಕು, ಸಾಕಷ್ಟು ಗಾಳಿ ಬೆಳಕು ಇರಬೇಕು. ಎಲ್ಲಾ ಶೌಚಾಲಯಗಳಿಗೂ

ಪೂರಕ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಇದಕ್ಕಾಗಿ ರೂ. 8,000/– ಪ್ರೋತ್ಸಾಹಧನದ ಸೌಲಭ್ಯ ಕಲ್ಪಿಸಲಾಗಿದೆ.

ಸರ್ಕಾರಿ ಕಟ್ಟಡದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಹಾಗೂ ಸರ್ಕಾರಿ ಕಟ್ಟಡದಲ್ಲಿರುವ ಅಂಗನವಾಡಿಗಳಿಗೆ ಮಾತ್ರ ಪ್ರೋತ್ಸಾಹಧನದ ಸೌಲಭ್ಯವಿದ್ದು, ಖಾಸಗಿ ಕಟ್ಟಡಗಳಲ್ಲಿರುವ ಶಾಲೆ ಮತ್ತು ಅಂಗನವಾಡಿಗಳಿಗೆ ಖಡ್ಡಾಯವಾಗಿ ಶೌಚಾಲಯ ಒದಗಿಸುವುದು ಕಟ್ಟಡದ ಮಾಲೀಕರ ಜವಾಬ್ದಾರಿಯಾಗಿರುತ್ತದೆ.

**4. ಗುಂಪು ಶೌಚಾಲಯ:** ಗ್ರಾಮೀಣ ಜನ ವಸತಿಗಳಲ್ಲಿ ಅನಿವಾರ್ಯ ಸಂದರ್ಭದಲ್ಲಿ ವೈಯುಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಸಾಧ್ಯವಾಗದ ಕುಟುಂಬಗಳನ್ನು ಕೇಂದ್ರೀಕರಿಸಿಕೊಂಡು ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯನ್ನು ತಲುಪಬೇಕಾದ ಉದ್ದೇಶದಿಂದ, ಆ ಫಲಾನುಭವಿ ಕುಟುಂಬಗಳಿಗೆ ಸಮೀಪದಲ್ಲಿ, ಅನುಕೂಲವಾಗುವಂತೆ ವೈಯುಕ್ತಿಕ ಫಲಾನುಭವಿಯ ಪ್ರೋತ್ಸಾಹಧನದಲ್ಲಿಯೇ ಆಯಾಯ ಘಟಕದ ಮೊತ್ತದಲ್ಲಿಯೇ ಒಂದೆಡೆ ನಿರ್ಮಿಸಿ, ಅದರ ಕೀಲಿಯನ್ನು ಆಯಾಯ ಫಲಾನುಭವಿ ಕುಟುಂಬ ಗಳಿಗೆ ಕೊಟ್ಟು ಅವರೇ ನಿರ್ವಹಿಸಿಕೊಂಡು ಹೋಗಬೇಕು.



**5. ಸಮುದಾಯ ಶೌಚಾಲಯ:** ಜನಸಂದಣಿ ಹೆಚ್ಚಿರುವಂತಹ ಪ್ರದೇಶಗಳಾದ, ಸಂತೆ ಸೇರುವ ಸ್ಥಳ, ಸಾರ್ವಜನಿಕವಾದ ದೇವಸ್ಥಾನ, ಜಾತ್ರೆ ನಡೆಯುವ



ಸ್ಥಳ, ಗ್ರಾಮೀಣ ಪ್ರದೇಶದ ಬಸ್‌ನಿಲ್ದಾಣ, ಮುಂತಾದ ಕಡೆಗಳಲ್ಲಿ ನಿರ್ಮಿಸಬಹುದಾಗಿದ್ದು, ಗ್ರಾಮ ಪಂಚಾಯತಿಯು ಇದಕ್ಕೆ ಪೂರಕ ಸೌಲಭ್ಯಗಳಾದ ನೀರು, ವಿದ್ಯುತ್‌ಗಳನ್ನು ಒದಗಿಸಿ, ಸ್ವಚ್ಛತೆಯನ್ನು ನಿರ್ವಹಿಸಬೇಕು.

**6. ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ:** ಗ್ರಾಮೀಣ ಪ್ರದೇಶದಲ್ಲಿ ಸಮಗ್ರ ಸ್ವಚ್ಛತೆಯನ್ನು ಕೇಂದ್ರೀಕೃತ ವಾಗಿರಿಸಿಕೊಂಡು, ಇಡಿ ಗ್ರಾಮದ ಸ್ವಚ್ಛತೆಗಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯನ್ನು ಪ್ರತಿ ಪಂಚಾಯತಿಗಳು ತಮ್ಮ ಹಂತದಲ್ಲಿಯೇ ಅನುಷ್ಠಾನ ಗೊಳಿಸಬೇಕು. ಇದಕ್ಕೆ ಕ್ರಿಯಾಯೋಜನೆ ತಯಾರಿಸು ವಾಗ, ಸಾರ್ವಜನಿಕರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವ ಮುಖ್ಯವಾಗಿದ್ದು, ಅಗತ್ಯತೆಯ ಆಧಾರ ವಾಗಿರಬೇಕು (Need Base Analysis). ಇಡಿ ಸಮುದಾಯವು ಮನೆಯ ಹಂತದಿಂದಲೇ ತ್ಯಾಜ್ಯ ನಿರ್ವಹಣೆ ಮಾಡಿಕೊಳ್ಳುವಂತಾಗಬೇಕು. ಮನೆಯ ಹಂತದಲ್ಲಿ ಸಾಧ್ಯವಾಗದಿದ್ದ ಸಂದರ್ಭದಲ್ಲಿ ಸಮುದಾಯದಲ್ಲಿ ಇದಕ್ಕಾಗಿ ನಿಗದಿ ಪಡಿಸಿದ ವ್ಯವಸ್ಥೆಗೆ ಹಾಕಬೇಕು. ಹಾಗೆಯೇ ತ್ಯಾಜ್ಯ ನೀರನ್ನೂ ಕೂಡ ಸೂಕ್ತವಾದ ರೀತಿಯಲ್ಲಿ ಪುನರ್ಬಳಕೆ ಮಾಡಿ ಕೊಳ್ಳಬೇಕು. ಆಗದಿದ್ದಲ್ಲಿ ಮಾತ್ರ ಚರಂಡಿಗೆ ಬಿಡಬೇಕು. ಪರಿಸರಕ್ಕೆ ಹಾನಿಕಾರಕವಾದಂತಹ ಪ್ಲಾಸ್ಟಿಕ್ ಮುಂತಾದವುಗಳ ಬಳಕೆಯನ್ನು ಕಡಿಮೆ ಮಾಡಬೇಕು. ಕಾಲಕ್ರಮೇಣ ನಿಲ್ಲಿಸಬೇಕು.

| | | | |
|---|---|---|---|
| 1. | ವೈಯುಕ್ತಿಕ ಶೌಚಾಲಯಕ್ಕೆ | ರೂ. 12,000/- | ಸಾಮಾನ್ಯ ಫಲಾನುಭವಿಗೆ |
| 2. | ವೈಯುಕ್ತಿಕ ಶೌಚಾಲಯಕ್ಕೆ | ರೂ. 15,000/- | SC/ST ಫಲಾನುಭವಿಗೆ |
| 3. | ಶಾಲೆ ಶೌಚಾಲಯಕ್ಕೆ | ರೂ. 35,000/- | ಆಯಾಯ ಇಲಾಖೆಗೆ ನೀಡಲಾಗುತ್ತದೆ |
| 4. | ಅಂಗನವಾಡಿ ಶೌಚಾಲಯಕ್ಕೆ | ರೂ. 8,000/- | |
| 5. | ಸಮುದಾಯ ಶೌಚಾಲಯಕ್ಕೆ | ರೂ. 2.00 | ಒಂದು ಘಟಕಕ್ಕೆ |
| 6. | ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ | ರೂ. 7.00ಲಕ್ಷದಿಂದ 20.00ಲಕ್ಷಗಳ ಗಳವರೇಗೆ ಲಭ್ಯವಿದೆ | |

**ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ವಿವಿಧ ಘಟಕಗಳಿಗೆ ಲಭ್ಯವಿರುವ ಪ್ರೋತ್ಸಾಹಧನದ ವಿವರ:**

**ಕರ್ನಾಟಕ ಸರ್ಕಾರದ ವಿಶೇಷ ಕೊಡುಗೆ:** ಶೌಚ ಮತ್ತು ಸ್ನಾನ ಎರಡು ಕೂಡ ಮಹಿಳೆಯರ ಘನತೆಯ ವಿಷಯಗಳಾಗಿವೆ. ಈ ದೃಷ್ಟಿಯಿಂದ ರಾಜ್ಯ ಸರ್ಕಾರವು "ಗ್ರಾಮೀಣ ಗೌರವ ಯೋಜನೆ" ಎಂಬ ಹೊಸ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಇದಕ್ಕೂ ವಾರ್ಷಿಕ ಗುರಿ ನಿಗದಿಪಡಿಸಲಾಗಿದೆ. ಸ್ವಚ್ಛ ಭಾರತ ಮಿಷನ್‌ನ ಪ್ರೋತ್ಸಾಹಧನದೊಂದಿಗೆ ಹೆಚ್ಚುವರಿಯಾಗಿ SC/ST ಫಲಾನುಭವಿಗಳಿಗೆ ರೂ. 5,000/- ಗಳನ್ನು ನೀಡಿ, ಬಚ್ಚಲು ಮನೆ ಸಹಿತ ಶೌಚಾಲಯ ನಿರ್ಮಿಸುವುದು ಉದ್ದೇಶವಾಗಿದೆ. ಪ್ರತಿ ಘಟಕದ ವೆಚ್ಚವು ರೂ. 20,000/- ಗಳಾಗಿದ್ದು, ಆರ್ಥಿಕ ಸೌಲಭ್ಯದ ವಿವರ ಈ ಕೆಳಕಂಡಂತಿದೆ.

**ಅರ್ಹ ಸಾಮಾನ್ಯ ವರ್ಗದ ಕುಟುಂಬಗಳಿಗೆ.**

| | |
|---|---|
| NBA | ರೂ. 4,700/- (ರಾಜ್ಯದ ಪಾಲು ರೂ. 1,500/-) |
| MNREGA | ರೂ. 5,400/- |
| ಹೆಚ್ಚುವರಿ ರಾಜ್ಯದ ಪಾಲು | ರೂ. 5,900/- |
| ಫಲನುಭವಿ ವಂತಿಗೆ | ರೂ. 4,000/- |
| **ಒಟ್ಟು** | ರೂ. 20,000/- |

**ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಕುಟುಂಬಗಳಿಗೆ.**

| | |
|---|---|
| NBA | ರೂ. 4,700/- (ರಾಜ್ಯದ ಪಾಲು ರೂ. 1,500/-) |
| MGNREGA | ರೂ. 5,400/- |
| ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ | ರೂ. 5,000/- |
| ಹೆಚ್ಚುವರಿ ರಾಜ್ಯದ ಪಾಲು | ರೂ. 3,400/- |
| ಫಲಾನುಭವಿ ವಂತಿಗೆ | ರೂ. 1,500/- |
| **ಒಟ್ಟು** | ರೂ. 20,000/- |



**ಆಧುನಿಕ ಸೌಲಭ್ಯದ (Hightech Community Toilet) ಸಾರ್ವಜನಿಕ ಶೌಚಾಲಯ:**

ಸಾರ್ವಜನಿಕ ಶೌಚಾಲಯ ಎಂದರೆ ಗ್ರಾಮೀಣ ಪ್ರದೇಶದಲ್ಲಿ ದೀರ್ಘಕಾಲ ಬಾಳಿಕೆ ಇಲ್ಲದ, ಕೊಳಕು ಅಸಮರ್ಪಕ ಬಳಕೆಯ ಅವ್ಯವಸ್ಥಿತ ಪದ್ಧತಿ ಎಂಬ ಕಲ್ಪನೆಗೆ ವ್ಯತಿರಿಕ್ತವಾಗಿ, ಸುಸಜ್ಜಿತವಾದ ಎಲ್ಲಾ ವ್ಯವಸ್ಥೆಗಳನ್ನು ಅಂದರೆ ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕವಾದ ವಿಭಾಗ, ಪ್ರತಿ ವಿಭಾಗದಲ್ಲೂ ಸ್ನಾನಗೃಹ, ಶೌಚಗೃಹ, ವಿಕಲಚೇತನರು ಹಾಗೂ ವೃದ್ಧರಿಗೆ ಅನುಕೂಲವಾಗುವಂತೆ, ರ್‍ಯಾಂಪ್ ವ್ಯವಸ್ಥೆ, ಶೌಚಾಲಯ ನಿರ್ವಹಣೆ ಮಾಡುವವರಿಗೆ (Care taker of the Unit) ಪ್ರತ್ಯೇಕ ಕೊಠಡಿ ವ್ಯವಸ್ಥೆ, ಬಟ್ಟೆ ತೊಳೆಯಲು ವಿದ್ಯುನ್ಮಾನ ಬಟ್ಟೆ ತೊಳೆಯುವ ಯಂತ್ರ, ತಲೆಕೂದಲು ಒಣಗಿಸಿಕೊಳ್ಳಲು ವಿದ್ಯುನ್ಮಾನ ಸಾಧನ, ವಿಶೇಷವಾಗಿ ಮಹಿಳಾ ವಿಭಾಗದಲ್ಲಿ ಉಡುಗೆ ಬದಲಿಸಿಕೊಳ್ಳಲು ಪ್ರತ್ಯೇಕ ಕೊಠಡಿ ಹೀಗೆ ವಿಶಿಷ್ಟ ರೀತಿಯ ಎಲ್ಲಾ ಸೌಲಭ್ಯಗಳಿರುವ ಸಮುದಾಯ ಶೌಚಾಲಯ ನಿರ್ಮಾಣ ಮಾಡಲು ರೂ. 20.00 ಲಕ್ಷಗಳ ಕ್ರಿಯಾ ಯೋಜನೆಯು ಸಿದ್ಧವಾಗಿರುತ್ತದೆ.




**ಪೈಪ್ ಕಾಂಪೋಸ್ಟ್:**

ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ಮನೆಯ ಹಂತದಲ್ಲಿಯೇ ಗೊಬ್ಬರ ತಯಾರಿಸಿಕೊಳ್ಳಲು ಅತಿ ಕಡಿಮೆ ಖರ್ಚು ಮತ್ತು ಕಡಿಮೆ ಜಾಗದಲ್ಲಿ ಪೈಪ್ ಮೂಲಕ ಗೊಬ್ಬರ ತಯಾರಿಸುವ ವಿಧಾನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಅನುಷ್ಠಾನ ಮಾಡಿದ್ದು, ಇದೊಂದು ವಿನೂತನ ಹಾಗೂ ಸುಲಭ ವಿಧಾನವಾಗಿದೆ.

**ನಡವಳಿಕಯಲ್ಲಿ ಬದಲಾವಣೆ (IPC):**

ಸ್ವಚ್ಛ ಭಾರತ ಮಿಷನ್‌ನ ಶೀಘ್ರ ಅನುಷ್ಠಾನಕ್ಕೆ ಪೂರಕ ಹಾಗೂ ಪರಿಣಾಮಕಾರಿಯಾಗಿ ಮನ ಪರಿವರ್ತನೆಯ ಕಾರ್ಯ ಆಗಬೇಕಾಗಿದೆ. ಬಯಲು ಬಹಿರ್ದೆಸೆ ಪದ್ಧತಿಯು ತಲೆಮಾರುಗಳಿಂದ ರೂಢಿಗತವಾಗಿರುವ ಒಂದು ಅಭ್ಯಾಸ. ಇದು ಜೀವನದೊಂದಿಗೆ ಹಾಸುಹೊಕ್ಕಾಗಿ, ಅದೇ ಸರಿ ಎನ್ನುವಂತಹ ಮನೋಪ್ರವೃತ್ತಿಯನ್ನು ಬದಲಾಯಿಸಿ, ಶೌಚಾಲಯ ಬಳಸುವತ್ತ ಸಮುದಾಯದ ಮನ ಪರಿವರ್ತನೆ ಬಹಳ ಮುಖ್ಯವಾಗಿರುತ್ತದೆ. ಕೇವಲ ಶೌಚಾಲಯ ಕಟ್ಟಿದರೆ ನಿಗದಿತ ಉದ್ದೇಶ ಪೂರ್ಣವಾಗುವುದಿಲ್ಲ. ಶೌಚಾಲಯದ ಬಳಕೆ ಅತಿ ಮುಖ್ಯ ಹಾಗೂ ಅನಿವಾರ್ಯ ಅಂಶ ಎಂದು ಪರಿಗಣಿಸುವಂತೆ, ಸಮುದಾಯವನ್ನು ಪ್ರೇರೇಪಿಸಬೇಕು. ಇದಕ್ಕೆ ಹಲವಾರು ಮಾಧ್ಯಮಗಳು ಸಹಕಾರಿಯಾದರೂ ಪರಿಪೂರ್ಣ ಮನವರಿಕೆ ಯಾಗಲು ವೈಯುಕ್ತಿಕ ಸಮಾಲೋಚನೆ ತುಂಬಾ ಪರಿಣಾಮಕಾರಿಯಾಗಿರುತ್ತದೆ.

ವೈಯಕ್ತಿಕ ಸಮಾಲೋಚನೆಯ ಮೂಲ ಬದಲಾವಣೆಗೆ ಕಾರಣವಾಗುತ್ತದೆ. ಅಂದರೆ ಪರಸ್ಪರ ಚರ್ಚೆ, ಮನವರಿಕೆ, ಸಣ್ಣ ಗುಂಪು ಚರ್ಚೆ, ಧಾರ್ಮಿಕ ಮುಖಂಡರುಗಳ ಮೂಲಕ ಪ್ರವಚನ/ಸಂದೇಶ ಮುಂತಾದವುಗಳ ಮೂಲಕ ನಿರ್ವಹಿಸಬಹುದು.

**ಆರೋಗ್ಯ ಇಲಾಖೆಯಿಂದ:**

ಮನೆಗೆ ಭೇಟಿ ನೀಡುವ ಆರೋಗ್ಯ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಮಹಿಳೆಯರು ಹಾಗೂ ಹದಿಹರೆಯದವರೊಂದಿಗೆ ಆತ್ಮೀಯ ಸಮಾಲೋಚನೆ ನಡೆಸಿ, ಶೌಚಾಲಯದ ಮಹತ್ವ, ಮರ್ಯಾದೆ ಮತ್ತು ಘನತೆಯ ಪ್ರಶ್ನೆ, ಸಾಂಕ್ರಾಮಿಕ ರೋಗಗಳ ಹರಡುವಿಕೆ ಹಿನ್ನೆಲೆಯಲ್ಲಿ ಮಾಹಿತಿ ನೀಡಬೇಕು. ವೈಯಕ್ತಿಕ ಶುಚಿತ್ವ ಮತ್ತು ಮನೆಯ ಶುಚಿತ್ವದ ಬಗ್ಗೆ ತಿಳಿಸುವುದು ಅಗತ್ಯವಾಗಿರುತ್ತದೆ.



**ಆಶಾ ಕಾರ್ಯಕರ್ತೆಯರು ಮತ್ತು ANM ಗಳು ಮನೆ ಭೇಟಿಯ ವೇಳೆ ತಿಳಿಸಬೇಕಾದ SBM ಮಾಹಿತಿ:**

- ವೈಯಕ್ತಿಕ ನೈರ್ಮಲ್ಯ/ಸಮಸ್ಯೆಗಳು
- ಗರ್ಭಿಣಿ ಸ್ತ್ರೀಯರ ಆರೋಗ್ಯ ಮತ್ತು ಬಯಲು ಬಹಿರ್ದೆಸೆ ಮುಕ್ತ (ODF), ಶೌಚಾಲಯದ ಬಳಕೆ.
- ಗರ್ಭಿಣಿ ಸ್ತ್ರೀಯರು ಹೊರಗಡೆ ಶೌಚಕ್ಕೆ ಹೋಗಲು ಹಿಂದೇಟು ಹಾಕಿ, ಶೌಚ ನಿರ್ಬಂಧದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮ.
- ಬಯಲಿನಲ್ಲಿ ಬಹಿರ್ದೆಸೆಗೆ ಹೋದಾಗ ಯಾರಾದರು ನೋಡುತ್ತಾರೆಂದು ಕುಂತು ಎದ್ದು ಮಾಡುವುದರಿಂದ ಗರ್ಭದಲ್ಲಿರುವ ಶಿಶುವಿನ ಮೇಲಾಗುವ ದುಷ್ಪಪರಿಣಾಮ.
- ಮಾನಸಿಕವಾಗಿ ಅನುಭವಿಸುವ ಯಾತನೆ.



- ಸೊಂಕು ರೋಗಗಳು ಉಂಟಾಗಿ, ಹುಟ್ಟಲಿರುವ ಶಿಶುವಿನ ಮೇಲೆ ಮಾರಕ ರೋಗಗಳ ಪ್ರಭಾವ.
- ಬಯಲಿನಲ್ಲಿ ಬಹಿರ್ದೆಸೆಗೆ ಹೋಗುವುದರಿಂದ ಹರಡಬಹುದಾದ ರೋಗಗಳು.
- ಮಕ್ಕಳ ಮಲವನ್ನು (3 ವರ್ಷಕ್ಕಿಂತ ಕೆಳಗಿನ) ಸುರಕ್ಷಿತವಾಗಿ ವಿಲೇವಾರಿ ಅಂದರೆ ಹುಟ್ಟಿದ ಮಕ್ಕಳ ಮಲವನ್ನು ಹೊರಗೆ ಎಸೆಯದಂತೆ, ಮಕ್ಕಳನ್ನು ಬೀದಿಯಲ್ಲಿ ಕೂರಿಸಿ, ಹಾಗೆ ಬಿಡದಂತೆ, ಆ ಮಲವನ್ನು ಶೌಚಾಲಯದಲ್ಲಿಯೇ ವಿಲೇವಾರಿ ಮಾಡಬೇಕು.
- ಶೌಚವನ್ನು ಬಳಸಿದ ನಂತರ ಸೋಪಿನಿಂದ ಶುದ್ಧವಾಗಿ ಕೈತೊಳೆಯಬೇಕು.
- ಊಟಕ್ಕೆ ಮೊದಲು ಹಾಗೂ ಊಟದ ನಂತರ ಕೈ ತೊಳೆಯುವ ಬಗ್ಗೆ ತಿಳಿಸಿಕೊಡಬೇಕು.
- ಉಗುರುಗಳನ್ನು ಉದ್ದವಾಗಿ ಬಿಡದಂತೆ ತಿಳಿಸಬೇಕು.
- ಪ್ರತಿದಿನ ಸ್ನಾನ ಹಾಗೂ ತೊಳೆದ ಬಟ್ಟೆ ಧರಿಸುವ ಬಗ್ಗೆ ವಿವರಿಸಬೇಕು.
- ಹದಿಹರೆಯದ ಹೆಣ್ಣು ಮಕ್ಕಳು ಬಯಲಿಗೆ ಹೋಗಿ ಬಹಿರ್ದೆಸೆ ಮಾಡಲು, ಮುಜುಗರಪಟ್ಟು ವಿಳಂಬ ಮಾಡುವುದರಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮವನ್ನು ವಿವರಿಸ ಬೇಕು.
- ವೈಯಕ್ತಿಕ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ, ನ್ಯಾಪ್‌ಕಿನ್‌ಗಳ ಬಳಕೆ / ಶುದ್ದ ಹತ್ತಿ ಬಟ್ಟೆಯ ಬಳಕೆ ಬಗ್ಗೆ ವಿವರಿಸಬೇಕು.
- ಅವುಗಳ ಉಪಯೋಗದ ನಂತರ, ಸುರಕ್ಷಿತ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಶೌಚಾಲಯದ ಒಳಗೆ, ಚರಂಡಿ ಮುಂತಾದವು ಗಳಲ್ಲಿ ಹಾಕಬಾರದು.
- ಶುದ್ಧ ಹತ್ತಿ ಬಟ್ಟೆಯನ್ನು ಬಳಸುವವರಾಗಿದ್ದರೆ, ಬಿಸಿನೀರು, ಸೋಪಿನಿಂದ ತೊಳೆದು, ಬಿಸಿಲು, ಗಾಳಿಯಲ್ಲಿ ಒಣಗಿಸಿಯೇ ಬಳಸಬೇಕು.
- ಒಳಉಡುಪುಗಳನ್ನು ಪ್ರತಿದಿನ ತೊಳೆದು ಉಪಯೋಗಿಸಬೇಕು.

## ಗೃಹ ನೈರ್ಮಲ್ಯ:

- [redacted]ನೆಯಲ್ಲಿ ಕಸ ಸಂಗ್ರಹವಾಗದಂತೆ ನಿರ್ವಹಿಸಬೇಕು.
- ಎಲ್ಲೆಂದರಲ್ಲಿ ಕಸದ ರಾಶಿ ಹಾಕಬಾರದು.
- ಕಸ ಹಾಕಲು ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬೇಕು.
- ಕಸವನ್ನು ಪ್ರತ್ಯೇಕಿಸಿ ಸಂಗ್ರಹಿಸಿಕೊಳ್ಳಬೇಕು.
- ಆದಷ್ಟು ಪ್ರಮಾಣದಲ್ಲಿ ತ್ಯಾಜ್ಯವನ್ನು ಮರು ಉಪಯೋಗಕ್ಕೆ ಬರುವಂತೆ ನಿರ್ವಹಿಸಬೇಕು.
- ಉಪಯೋಗಿಸಲು ಬಾರದ ಕಸವನ್ನು ಸಾರ್ವಜನಿಕ ಕಸದ ತೊಟ್ಟಿಯಲ್ಲಿಯೇ ಹಾಕಬೇಕು.
- ಚರಂಡಿ, ಬೀದಿಗಳಲ್ಲಿ ಹಾಕಬಾರದು.
- ಬಚ್ಚಲು ನೀರನ್ನು ಚರಂಡಿಗೆ ಬಿಡಬೇಕು.
- ತ್ಯಾಜ್ಯವನ್ನು ಪುನರ್ಬಳಕೆ ಮಾಡಿಕೊಳ್ಳುವ ಸಾಧ್ಯತೆಗಳನ್ನು ಸೃಷ್ಟಿಸಿಕೊಳ್ಳಬೇಕು, ಅಂದರೆ ಕೈತೋಟ, ಹೂವಿನಗಿಡ, ತೆಂಗಿನಗಿಡ ಮುಂತಾದವುಗಳಿಗೆ ಹರಿಸಬೇಕು.
- ಆದಷ್ಟು ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು.
- ಮನೆಯ ಸುತ್ತಲು ಕಳೆ, ಕಸ ಇಲ್ಲದಂತೆ ಸ್ವಚ್ಛವಾಗಿ ನಿರ್ವಹಿಸಬೇಕು.
- ನೀರನ್ನು ಬಹಳ ದಿನಗಳವರೆಗೆ ತುಂಬಿಡದೆ ಆಗಾಗ ಬದಲಾಯಿಸುತ್ತಿರಬೇಕು.

## ಪರಿಸರ ನೈರ್ಮಲ್ಯ:

- ಪರಿಸರ ಅಂದರೆ ನಾವು ವಾಸಿಸುವ ಸುತ್ತ ಮುತ್ತ ಇರುವ ಪ್ರಕೃತಿ ನಿರ್ಮಿತ ಮತ್ತು ಮಾನವ ನಿರ್ಮಿತ ಸಂಪನ್ಮೂಲಗಳಾಗಿರುತ್ತವೆ.

- ವೈಯಕ್ತಿಕ ಸ್ವಚ್ಛತೆ ಮತ್ತು ಗೃಹ ಸ್ವಚ್ಛತೆಯಿಂದ ಪರಿಸರದ ಸ್ವಚ್ಛತೆಯು ಹೆಚ್ಚುತ್ತದೆ.
- ಸಾಧ್ಯವಿದ್ದಲ್ಲಿ ಗಿಡಗಳನ್ನು ಬೆಳಸಬೇಕು.
- ಎಲ್ಲೆಂದರಲ್ಲಿ ತ್ಯಾಜ್ಯವನ್ನು ಸುರಿದು ಸೊಳ್ಳೆ, ನೊಣ ಮುಂತಾದವುಗಳ ಉಗಮಕ್ಕೆ ಕಾರಣ ವಾಗಬಾರದು.
- **ವೈದ್ಯರು:** ಆಸ್ಪತ್ರೆಗೆ ಬರುವ ಪ್ರತಿಯೊಬ್ಬ ರೋಗಿಗಳಿಗೂ ಬಯಲು ಬಹಿರ್ದೆಸೆಯಿಂದ ಉಂಟಾಗುವ ರೋಗಗಳ ಬಗ್ಗೆ ತಿಳಿಸಬೇಕು. ಹಾಗೂ ಶೌಚಾಲಯವನ್ನು ಬಳಸುವುದು ಕಡ್ಡಾಯ ಎಂಬುದನ್ನು ಮನವರಿಕೆ ಮಾಡಬೇಕು.

### ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:

ಪ್ರತಿ ಅಂಗನವಾಡಿಯ ವ್ಯಾಪ್ತಿಯಲ್ಲಿಯೂ ತಾಯಂದಿರ ಸಭೆ ನಡೆದಾಗ ಶೌಚಾಲಯ ಹೊಂದದ ಕುಟುಂಬವನ್ನು ಗುರುತಿಸಿ ಮುಂದಿನ ಸಭೆಯ ಒಳಗೆ ಶೌಚಾಲಯ ನಿರ್ಮಿಸುವಂತೆ ಮನವೊಲಿಸುವುದು. ಹಾಗೂ ವೈಯಕ್ತಿಕ ನೈರ್ಮಲ್ಯದ ಬಗ್ಗೆ ತಿಳಿಸಿ, ಅನುಸರಿಸುವಂತೆ, ನೋಡಿಕೊಳ್ಳುವುದು. ಎಲ್ಲಾ ಅಂಗನವಾಡಿ ಶಿಕ್ಷಕಿಯರು ಕಡ್ಡಾಯವಾಗಿ ಶೌಚಾಲಯ ನಿರ್ಮಿಸಿಕೊಂಡು ಬಳಸುವುದು ಹಾಗೂ ಅಂಗನವಾಡಿಗಳಲ್ಲಿ ಶೌಚಾಲಯ ಹೊಂದಿ ಮಕ್ಕಳನ್ನು ಬಳಸುವಂತೆ ರೂಡಿ ಮಾಡಿಸುವುದು.

### ಸಮಾಜ ಕಲ್ಯಾಣ ಇಲಾಖೆ:

ಇಲಾಖೆ ವತಿಯಿಂದ ನಿರ್ಮಿಸಿ, ನಿರ್ವಹಿಸು ತ್ತಿರುವ ಪ್ರತಿ ವಸತಿ ನಿಲಯಗಳಲ್ಲು ಶೌಚಾಲಯದ ಬಳಕೆ ಮತ್ತು ವೈಯಕ್ತಿಕ ನೈರ್ಮಲ್ಯದ ಬಗ್ಗೆ ಮನದಟ್ಟು ಮಾಡಿಸಬೇಕು ಅಗತ್ಯತೆಯ ಆಧಾರದ ಮೇಲೆ ಶೌಚ ಹಾಗೂ ಮೂತ್ರ ಘಟಕಗಳನ್ನು ನಿರ್ಮಿಸಬೇಕು ಪೂರಕ ನೀರಿನ ಸೌಲಭ್ಯವನ್ನು ಒದಗಿಸಬೇಕು. ಇಲಾಖಾ ಅಧಿಕಾರಿಗಳು ವಸತಿ ನಿಲಯಗಳಿಗೆ ಭೇಟಿ ನೀಡಿದಾಗ ಶೌಚಾಲಯ ವ್ಯವಸ್ಥೆಯನ್ನು ಖುದ್ದು ಪರಿಶೀಲಿಸಬೇಕು. ನಿರ್ವಹಣೆಯ ಬಗ್ಗೆ ಕಾಳಜಿ ವಹಿಸಬೇಕು. ವಸತಿ ನಿಲಯದ ವಿದ್ಯಾರ್ಥಿಗಳಿಗೆ ಶೌಚಾಲಯದ ಬಳಕೆ ಹಾಗೂ ಮಹತ್ವದ ಬಗ್ಗೆ ಮನವರಿಕೆ ಮಾಡಿಸಬೇಕು.

### ಶಿಕ್ಷಣ ಇಲಾಖೆ:

- **ಶಾಲಾ ಹಂತದಲ್ಲಿ:** ಪ್ರತಿ ಶಾಲೆಯಲ್ಲಿಯೂ ಕನಿಷ್ಟ ವಾರಕ್ಕೊಮ್ಮೆ ನೈರ್ಮಲ್ಯ ಶಿಕ್ಷಣ/ಮಾಹಿತಿ ನೀಡಿ ಮಕ್ಕಳಿಗೆ ಮನವರಿಕೆ ಮಾಡಿಸುವುದು.
- **ಮಕ್ಕಳ ಮೂಲಕ:** ಯಾರ ಮನೆಯಲ್ಲಿ ಶೌಚಾಲಯ ಇಲ್ಲ ಎಂಬುದನ್ನು ಗುರುತಿಸಿ, ಮಕ್ಕಳ ಮೂಲಕ ಮನೆಗೆ ತಿಳಿಸುವುದು.
- **ಪ್ರತೀ ಶಾಲೆಯಲ್ಲೂ:** ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಹೊಂದಿ ಮಕ್ಕಳು ಬಳಸುವಂತೆ ಶಿಕ್ಷಕರು ಕ್ರಮ ವಹಿಸಬೇಕು.
- **SDMC ಸಭೆ:** ಶಾಲೆಯ SDMCಯ ಪ್ರತಿಯೊಬ್ಬ ಸದಸ್ಯರು ಕೂಡ ಶೌಚಾಲಯವನ್ನು ಹೊಂದಿ ಬಳಸುವಂತೆ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಬರುವ ಇತರರನ್ನು ಶೌಚಾಲಯ ನಿರ್ಮಿಸಿ ಬಳಸುವಂತೆ ಮನವರಿಕೆ ಮಾಡಿಸು ವುದು ಶಿಕ್ಷಕರ ಮತ್ತು SDMC ಸದಸ್ಯರ ಜವಾಬ್ದಾರಿಯಾಗಿರುತ್ತದೆ.

ಶಾಲಾ ಹಂತದಲ್ಲಿ ಬಿಸಿಯೂಟದ ತ್ಯಾಜ್ಯದ ಸೂಕ್ತ ನಿರ್ವಹಣೆ, ಕೈತೋಟ ಅಭಿವೃದ್ಧಿ, ತ್ಯಾಜ್ಯ ನೀರಿನ ಸೂಕ್ತ ನಿರ್ವಹಣೆ ಮಕ್ಕಳ ವೈಯಕ್ತಿಕ ಶುಚಿತ್ವ, ಶೌಚಾಲಯ ಬಳಸಿದ ನಂತರ ಸೋಪಿನಿಂದ ಕೈತೊಳೆಯುವ ಪದ್ದತಿ, ಚಪ್ಪಲಿ ಧರಿಸಿಯೇ ಶೌಚಾಲಯಕ್ಕೆ ಹೋಗುವುದು, ತೊಳೆದ ಬಟ್ಟೆಗಳನ್ನೇ ಧರಿಸುವುದು, ಪ್ರತಿದಿನ ಸ್ನಾನ ಮಾಡುವುದು, ಹಲ್ಲು, ಬಾಯಿ ಸ್ವಚ್ಛವಾಗಿಟ್ಟುಕೊಳ್ಳುವ ವಿಧಾನ, ಕೈ, ಕಾಲುಗಳ ಉಗುರಿನ ಮೂಲಕ ರೋಗಾಣುಗಳು ದೇಹ ಪ್ರವೇಶಿಸದಂತೆ ನಿಯಮಿತವಾಗಿ ಉಗುರು ಕತ್ತರಿಸುವ ಪದ್ದತಿ, ಕೂದಲು ಉದುರಿ ಆಹಾರದ ಮೂಲಕ ದೇಹ ಸೇರದಂತೆ ಎಚ್ಚರಿಕೆ ವಹಿಸಿ, ಎಣ್ಣೆ ಹಚ್ಚಿ ತಲೆಬಾಚುವಂತೆ ಶಿಸ್ತುಬದ್ಧ ಜೀವನ ರೂಢಿಸುವುದು ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.

### ಗ್ರಾಮ ಪಂಚಾಯತಿ ಹಂತದಲ್ಲಿ:

ಗ್ರಾಮ ಪಂಚಾಯತಿಯಲ್ಲಿ ಯಾವುದೇ ಕಾರ್ಯಕ್ರಮ/ ರಾಷ್ಟ್ರೀಯ/ ರಾಜ್ಯದ ಹಬ್ಬಗಳಿದ್ದರೂ, ಅಲ್ಲಿ ಶೌಚಾಲಯದ ಮಹತ್ವ ಎಂಬ ವಿಷಯವನ್ನು ಕಡ್ಡಾಯವಾಗಿ ಪ್ರಸ್ತಾಪಿಸಬೇಕು. ಆಯಾಯ ವ್ಯಾಪ್ತಿಯ ಚುನಾಯಿತ ಪ್ರತಿನಿಧಿಗಳು ತಮ್ಮ ವ್ಯಾಪ್ತಿಯಲ್ಲಿರುವ ಶೌಚಾಲಯ ರಹಿತ ಕುಟುಂಬ ಗಳನ್ನು ಭೇಟಿ ಮಾಡಿ, ಮನವೊಲಿಸಬೇಕು. ಗ್ರಾಮ

ಪಂಚಾಯ್ತಿಯ ಸಿಬ್ಬಂಧಿಗಳು ಯಾವುದೇ ಸಂದರ್ಭದಲ್ಲಿ ಮನೆಭೇಟಿ ಮಾಡಿದರೂ, ಶೌಚಾಲಯದ ಬಗ್ಗೆ ಕುಟುಂಬದ ಸದಸ್ಯರೊಂದಿಗೆ ಚರ್ಚಿಸಬೇಕು. ಹಾಗೂ ಯಾವುದೇ ಸೌಲಭ್ಯ ಬಯಸಿ ಸಾರ್ವಜನಿಕರು ಗ್ರಾಮ ಪಂಚಾಯತಿಗೆ ಬಂದರೂ ಅವರಲ್ಲಿ ಶೌಚಾಲಯ ಹೊಂದಿ ಬಳಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಹಾಗೂ ಯಾವುದೇ ಸೌಲಭ್ಯ ಕೇಳಿದರೂ ಶೌಚಾಲಯ ಕಡ್ಡಾಯ ಎಂಬುದನ್ನು ಮನವರಿಕೆ ಮಾಡಬೇಕು ಹಾಗೆಯೇ ಗ್ರಾಮ ಪಂಚಾಯತಿಯಲ್ಲಿಯೂ ಶೌಚಾಲಯವನ್ನು ಹೊಂದಿ, ಸಿಬ್ಬಂದಿಗಳು ಹಾಗೂ ಗ್ರಾಮ ಪಂಚಾಯತಿಗೆ ಬರುವಂತಹ ಸಾರ್ವಜನಿಕರು ಅದನ್ನೆ ಬಳಸುವಂತೆ ಮನವರಿಕೆ ಮಾಡಬೇಕು.

**ಗ್ರಾಮೀಣ ಪ್ರದೇಶದ ಇತರೆ ಎಲ್ಲಾ ಕಛೇರಿಗಳಲ್ಲಿ:**

ಗ್ರಾಮೀಣ ಪ್ರದೇಶದ ಪ್ರತಿಯೊಂದು ಸಾರ್ವಜನಿಕ ಕಛೇರಿಗಳಲ್ಲೂ ಶೌಚಾಲಯಗಳನ್ನು ಹೊಂದಿರಬೇಕು. ಸಾರ್ವಜನಿಕರು ಕರ್ತವ್ಯದ ಮೇಲೆ ಬಂದಾಗ ಹೊರಗಡೆ ಶೌಚ ಮತ್ತು ಮೂತ್ರ ಮಾಡದಂತೆ ಆ ಕಛೇರಿಯಲ್ಲಿ ಕ್ರಮ ವಹಿಸಬೇಕು. ನೀರಿನ ಸೌಲಭ್ಯ ಮತ್ತು ಸ್ವಚ್ಛತೆಯನ್ನು ನಿರ್ವಹಿಸಬೇಕು.

ಎಲ್ಲಾ ಕಛೇರಿಗಳಲ್ಲೂ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯಗೊಳಿಸಿ ಹೊರಗಡೆ/ಬಯಲು ಶೌಚ ಮತ್ತು ಮೂತ್ರ ವಿಸರ್ಜನೆ ಮಾಡುವುದು ತಪ್ಪು ಎಂಬುದನ್ನು ಸಾರ್ವಜನಿಕವಾಗಿ ಮನವರಿಕೆ ಮಾಡಬೇಕು..

ಮನ ಪರಿವರ್ತನೆ/ನಡವಳಿಕೆಯಲ್ಲಿ ಬದಲಾವಣೆ ತರುವ ಪ್ರಯತ್ನ ನಿರಂತರವಾಗಿರಬೇಕು. ಇದು ಒಂದೇ ಬಾರಿಗೆ ಸಾಧ್ಯವಾಗುವಂತಹುದಲ್ಲ. ಕಾರಣ ಬಯಲು ಬಹಿರ್ದೆಸೆ ಎಂಬುದು ತಲೆಮಾರುಗಳಿಂದ ರೂಢಿಯಲ್ಲಿದ್ದು ಅದನ್ನು ಒಮ್ಮೆಲೇ ಬಿಡಲು ಹಾಗೂ ಹೊಸದನ್ನು ಅಳವಡಿಸಿಕೊಳ್ಳಲು ಸಮುದಾಯ ಅಷ್ಟು ಸುಲಭವಾಗಿ ಒಪ್ಪುವುದಿಲ್ಲ. ಇದಕ್ಕೆ ಕಾರಣ ಮನೆಯ ಸಮೀಪದಲ್ಲಿ ಶೌಚಾಲಯವಿರುವುದು ಗಲೀಜು ಎಂಬ ಭಾವನೆ. ಶೌಚಕ್ಕೆ ದೂರ ಹೋಗಬೇಕೆನ್ನುವ ನಂಬಿಕೆ, ಅದು ಮನೆಯ ಹತ್ತಿರ ಇದ್ದರೆ ವಾಸನೆ ಬರುತ್ತದೆ ಎಂಬ ಅನುಮಾನ ಇನ್ನು ಕೆಲವು ಪ್ರದೇಶಗಳಲ್ಲಿ ರೂಢಿಯಲ್ಲಿರುವಂತೆ "ನಾಗಬೀದಿ"ಯ ಕಲ್ಪನೆ, ಗುಡಿ, ಉತ್ಸವಗಳು ಹೋಗುವ ದಾರಿಗಳ ನೆಪ, ಹೀಗೆ ಕಾರಣ ಹಲವಾರು. ಇನ್ನೂ ಕೆಲಮೊಮ್ಮೆ ಶೌಚಾಲಯದ ಬಗ್ಗೆ ಸ್ಪಷ್ಟ ಕಲ್ಪನೆ ಇರದೆ, ಜಾಗದ ಸಮಸ್ಯೆ ಮುಂದಿಟ್ಟು, ಬಯಲನ್ನೇ ಅವಲಂಬಿಸಿರುವುದು ಸಾಮಾನ್ಯವಾದ ವಿಷಯಗಳಾಗಿವೆ. ಇವೆಲ್ಲವುಗಳ ಜೊತೆಗೆ ಅಸಮರ್ಪಕ ನೀರಿನ ಪೂರೈಕೆ/ಲಭ್ಯತೆಯ ಕೊರತೆ ಕೂಡ ಬಯಲು ಬಹಿರ್ದೆಸೆಗೆ ಮುಖ್ಯ ಕಾರಣವಾಗಿರುತ್ತದೆ.

ಇವೆಲ್ಲವುಗಳನ್ನು ಸಮರ್ಪಕವಾದ ರೀತಿಯಲ್ಲಿ ತಿಳಿಹೇಳಿ ಇದೆಲ್ಲಕ್ಕೂ ಒಂದೇ ಪರಿಹಾರ ಶೌಚಾಲಯದ ಮಹತ್ವವನ್ನು ಮನದಟ್ಟು ಮಾಡಿಸುವುದೇ ಆಗಿದೆ. ಹಾಗೂ ಘನತೆ, ಗೌಪ್ಯತೆ, ಮರ್ಯಾದೆ ಪ್ರಶ್ನೆಗಳು ದೊಡ್ಡದೆಂದು ತಿಳಿಸುವುದು. ಜನನಿಬಿಡತೆ ಹೆಚ್ಚುತ್ತಿದ್ದು, ಅರಣ್ಯ ನಾಶವಾಗಿ ಜನ ವಸತಿಗಳು, ಕೃಷಿ ಭೂಮಿ ವಿಸ್ತರಣೆಯಾಗುತ್ತಿದ್ದು. ಖಾಲಿ ಜಾಗದ ಅಭಾವವಿರುವುದು ಕೂಡ ಶೌಚಾಲಯ ಹೊಂದಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಕಾಡು ಪ್ರಾಣಿಗಳು, ವಿಷಜಂತುಗಳ ಹಾವಳಿ, ಅಪಘಾತಗಳು, ಅನಾಹುತಗಳು ಇವೆಲ್ಲವುಗಳ ಸಾಧ್ಯತೆಯನ್ನು ತಿಳಿಸಿ, ಮನವೊಲಿಸಬೇಕಾದದ್ದು ಅನಿವಾರ್ಯವಾಗಿದೆ. ಅನಿವಾರ್ಯವೆಂದು ಬರೀ ಶೌಚಾಲಯ ನಿರ್ಮಾಣ ಮಾಡಿದರೆ ಉದ್ದೇಶ ಪೂರ್ಣಗೊಳ್ಳುವುದಿಲ್ಲ. ಆ ಕುಟುಂಬದ ಸದಸ್ಯರೆಲ್ಲರೂ ಬಳಸಿ, ಬಯಲಿಗೆ ಹೋಗುವ ಅಭ್ಯಾಸ ಅಂತ್ಯಗೊಳ್ಳಬೇಕು. ಮಕ್ಕಳಿಗೂ ಶೌಚಾಲಯದ ಬಳಕೆಯ ಬಗ್ಗೆ ಅಭ್ಯಾಸ ಮಾಡಿಸಬೇಕು.

ಸ್ವಚ್ಛ ಭಾರತ ಮಿಷನ್ ಕೇವಲ ಕಾರ್ಯಕ್ರಮವಾಗಿರದೆ ಇದೊಂದು ಜನಾಂದೋಲನವಾಗಿದೆ. ವೈಯಕ್ತಿಕ ಮನಸ್ಸಿನಲ್ಲಿ ಸ್ವಚ್ಛತೆಯ ಪರಿಕಲ್ಪನೆ ಮೂಡಿ, ಮನೆಯಲ್ಲಿ ಅನುಷ್ಠಾನವಾಗಿ, ಇಡೀ ಹಳ್ಳಿಗೆ ವಿಸ್ತಾರಗೊಳ್ಳಬೇಕಾಗಿದೆ. ಆದ್ದರಿಂದ ಇಲ್ಲಿ ಎಲ್ಲರೂ ಕೂಡ ಫಲಾನುಭವಿಗಳಾಗುವುದರ ಜೊತೆಗೆ ಪ್ರೇರೇಪಕರೂ ಆಗಬೇಕಾಗಿದೆ.

ಲೇಖನ

# ತುಮಕೂರು ಜಿಲ್ಲೆಯಲ್ಲಿ ಮಾಹಿತಿ ಶಿಕ್ಷಣ ಸಂವಹನ



ಉಮೇಶ್ ಹೆಚ್. ಸಿ.

ತೆಂಗು ಕಂಗುಗಳಿಂದ ಸದಾ ಕಂಗೊಳಿಸುತ್ತಿದ್ದ ತುಮಕೂರು ಜಿಲ್ಲೆ ಈಗ ಅಕ್ಷರಶ: ಬರದ ಬೀಡಾಗಿದೆ. ಇದಕ್ಕೆ ಕಾರಣಗಳು ಹಲವಾರು; ಅವುಗಳಲ್ಲಿ ಒಂದು ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ವಾಡಿಕೆಯ ಮಳೆ ಬೀಳುವ ಪ್ರಮಾಣದಲ್ಲಿ ಗಣನೀಯವಾಗಿ ಇಳಿಮುಖವಾಗಿರುವುದು. ಎರಡನೇಯದು ಅಭಿವೃದ್ಧಿಯ ಹೆಸರಿನಲ್ಲಿ ಮನುಷ್ಯನೆಂಬ ಮೃಗವು ಪ್ರಕೃತಿಯ ಮೇಲೆ ನಿರಂತರವಾಗಿ ನಡೆಸಿರುವ ದೌರ್ಜನ್ಯ. ಅಂದರೆ ಸಣ್ಣ-ಪುಟ್ಟ ಕಾರಣಗಳ ನೆಪದಲ್ಲಿ ಅರಣ್ಯ ಮರಗಳನ್ನು ನಾಶಪಡಿಸಿರುವುದು; ಹಾಗೂ ಮರಳು



ಕೂಲಿಕಾರರ ಹಕ್ಕು ಮತ್ತು ಕರ್ತವ್ಯಗಳನ್ನು ಸಂಕ್ಷಿಪ್ತವಾಗಿ ಬಹು ವರ್ಣದಲ್ಲಿ ರೋಜ್‌ಗಾರ್ ಸ್ಟಿಕ್ಕರ್ ಮುದ್ರಿಸಿ ಕೂಲಿ ಕಾರ್ಮಿಕರ ಮನೆಗೆ ಭೇಟಿ ನೀಡಿ ಪ್ರಚಾರ ಮಾಡಲಾಯಿತು.

ಗಣಿಗಾರಿಕೆ. ಲಾಭಖೋರರ ಸಂತೆಯಲ್ಲಿ ಒಬ್ಬಿಬ್ಬ ಪ್ರಮಾಣಿಕ ಅಧಿಕಾರಿಗಳು ಹಾಗೂ ಸಜ್ಜನ ಸಾರ್ವಜನಿಕರು ವ್ಯವಸ್ಥೆಯ ವಿರುದ್ದ ಸೊಲ್ಲೆತ್ತದೆ ಸುಮ್ಮನಾಗಿರುವುದು; ಇಂದಿನ ಪ್ರಸ್ತುತ ಅತ್ಯಂತ ಖೇಧಕರವಾದ ವಿಚಾರವಾಗಿದೆ.

ಗ್ರಾಮೀಣ ಪ್ರದೇಶದ ರೈತಾಪಿ ಜನರು, ಅಂತರ್ಜಲದ ಮೇಲೆ ಅವಲಂಬಿಸಿ ಬೆಳೆ ಬೆಳೆಯುವ ಸಾಹಸದಲ್ಲಿ ನಜ್ಜುಗುಜ್ಜಾಗಿ ಹೈರಾಣಾಗಿ ಹೋಗಿರುತ್ತಾರೆ; ಒಂದಾದ ಮೇಲೊಂದರಂತೆ ಕೊಳವೆಬಾವಿಗಳು ವಿಫಲವಾದಂತೆಲ್ಲಾ ಹೊಸದಾಗಿ ಕೊರೆಸುವ ಧಾವಂತದಲ್ಲಿ ಸಾಲವೆಂಬ ಶೂಲಕ್ಕೆ ಸಿಲುಕಿ ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ.

ಸರ್ಕಾರವು ಸಂಘ-ಸಂಸ್ಥೆಗಳ ನೆರವಿನೊಂದಿಗೆ ರೈತನನ್ನು ಉಳಿಸಿ ಎಂಬ ಸಾಮಾಜಿಕ ಬದ್ದತೆಯ ಕಾರ್ಯವನ್ನು ಹಮ್ಮಿಕೊಂಡು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ಆದಾಗ್ಯೂ ರೈತರ ಆತ್ಮಹತ್ಯೆಗಳೇನೂ ನಿಂತಿಲ್ಲ.

ಬರಗಾಲದ ಕಾರಣದಿಂದ ಗ್ರಾಮೀಣ ಪ್ರದೇಶದ ರೈತರಿಗೆ ಹಾಗೂ ಕೂಲಿಕಾರರಿಗೆ ಕೂಲಿ ಕೆಲಸ ದೊರಕದೆ ಅವರುಗಳು ಉದ್ಯೋಗವನ್ನು ಹುಡುಕಿ ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುವುದನ್ನು ತಪ್ಪಿಸಲು ಹಾಗೂ ಗ್ರಾಮೀಣ ಪ್ರದೇಶದಲ್ಲಿ ದೀರ್ಘ ಕಾಲ ಬಾಳಿಕೆ ಬರುವಂತಹ ಆಸ್ತಿಗಳನ್ನು ಸೃಜಿಸುವ

ಜಿಲ್ಲಾ ಐ.ಇ.ಸಿ ಸಂಯೋಜಕರು, ತುಮಕೂರು ಜಿಲ್ಲಾ ಪಂಚಾಯತ್



ಹಾಗೂ ಅವುಗಳನ್ನು ದಿನ ನಿತ್ಯದ ಜೀವನಾಧಾರ ವನ್ನಾಗಿ ಮಾಡುವ ಘನ ಉದ್ದೇಶದಿಂದ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸುತ್ತಲಿದೆ.

ಕೂಲಿ ದೊರಕದೆ ಪರದಾಡುತ್ತಿರುವ ಹೊತ್ತಿನಲ್ಲೂ ಕೂಡ, ಸದರಿ ಯೋಜನೆಯಲ್ಲಿರುವ ನಿಯಮಾವಳಿಗನುಗುಣವಾಗಿ ಉದ್ಯೋಗ ಪಡೆಯುವ ಹಾಗೂ ಕೆಲಸ ಮಾಡಿ ಹಣವನ್ನು ಪಡೆಯುವ ವ್ಯವಧಾನವು ಕೂಲಿಕಾರರಲ್ಲಿ ಇಲ್ಲದಿರುವುದು ಕಂಡುಬಂದಿತ್ತು. ಅಷ್ಟೆ ಅಲ್ಲದೆ ಗ್ರಾಮ ಪಂಚಾಯತಿಯವರು ಸರಿಯಾದ ಸಮಯಕ್ಕೆ ಕೂಲಿ ಕೆಲಸ ನೀಡುವುದಿಲ್ಲ, ಕೆಲಸ ಮಾಡಿದ ಮೇಲೆ ಕೂಲಿ ಹಣ ಪಾವತಿಗಾಗಿ ಬಹಳ ದಿನಗಳವರೆಗೂ ಕಾಯಬೇಕು, ಅಲ್ಲಿಯವರೆಗೂ ಜೀವನ ನಿರ್ವಹಣೆಗೆ ಕಷ್ಟವಾಗುತ್ತದೆ, ಖಾಸಗಿ ಕೆಲಸದಲ್ಲಿ ಕೂಲಿ ಹಣ ಬೇಗ ದೊರೆಯುತ್ತದೆ, ಕೂಲಿದರ ಇನ್ನೂ ಹೆಚ್ಚು ಸಿಗುತ್ತದೆ, ನಿಯಮಗಳನ್ನು ಪಾಲಿಸುವ, ನಮೂನೆಗಳನ್ನು ತುಂಬುವ ಹಾಗೂ ಬ್ಯಾಂಕ್‌ಗಳಿಗೆ ಅಲೆದಾಡುವ ರಗಳೆ ಇರುವುದಿಲ್ಲ ಎಂಬುವ ಅನೇಕ ಊಹಾ ಪೋಹಗಳು ಹಾಗೂ ತಪ್ಪು ಕಲ್ಪನೆಗಳು ಸಾರ್ವಜನಿಕರಲ್ಲಿ ಮನೆ ಮಾಡಿದ್ದವು.

ಈ ಧೋರಣೆಯನ್ನು ಜನಮಾನಸದಿಂದ ಹೋಗಲಾಡಿಸುವ ದೃಷ್ಟಿಯಿಂದ ಹಾಗೂ ಯೋಜನೆಯ ಬಗ್ಗೆ ಇರುವ ಉದಾಸೀನತೆಯನ್ನು ತೊಲಗಿಸಿ ಕೂಲಿಕಾರರನ್ನು ಸಂಘಟಿಸಿ ಹೆಚ್ಚು ಹೆಚ್ಚು ಕೂಲಿ ಬೇಡಿಕೆಯನ್ನು ಪಡೆಯುವ ದೃಷ್ಟಿಯಿಂದ ತುಮಕೂರು ಜಿಲ್ಲಾ ಪಂಚಾಯತಿಯ ಐ.ಇ.ಸಿ. ಘಟಕವು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ಅಧಿಕಾರಿಗಳನ್ನು ಪೇರೇಪಿಸಿ ಜಿಲ್ಲೆಯ ಎಲ್ಲ 331 ಗ್ರಾಮ ಪಂಚಾಯತಿಗಳಲ್ಲೂ ಕಳೆದ ಆಗಸ್ಟ್ ತಿಂಗಳಿನಲ್ಲಿ ಗ್ರಾಮ ಪಂಚಾಯತಿಯ ನೌಕರಿಯಿಂದ ಪತಿಯೊಂದು ಹಳ್ಳಿಯ ಪತಿ ಮನೆಗೂ ಭೇಟಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಐ.ಇ.ಸಿ. ಕಾರ್ಯಕಮದ ಮನೆ-ಮನೆ ಭೇಟಿ ಸಂದರ್ಭದಲ್ಲಿ ಮೊದಲನೆಯದಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕಮದಲ್ಲಿ ರೈತರು ಮತ್ತು ಕೂಲಿಕಾರರು ಹೇಗೆ ಪಾಲ್ಗೊಂಡು ಸದುಪಯೋಗಪಡಿಸಿಕೊಳ್ಳಬಹುದು ಎಂಬ ಬಗ್ಗೆ ಹಾಗೂ ರೈತರ ಮತ್ತು ಕೂಲಿಕಾರರ ಹಕ್ಕುಗಳ ಬಗ್ಗೆ, ಕರ್ತವ್ಯಗಳ ಬಗ್ಗೆ , ನಿಯಮಾವಳಿಗಳ ಬಗ್ಗೆ ಮಾಹಿತಿ ಕರಪತ್ರಗಳನ್ನು ಹಂಚಲಾಯಿತು.

ಇದರ ಪರಿಣಾಮವಾಗಿ ಗ್ರಾಮದ ಯುವಕರಲ್ಲಿ ಹಾಗೂ ಸಾರ್ವಜನಿಕರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಇನ್ನಷ್ಟು ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳುವ ಕುತೂಹಲ ಮೂಡಿರುತ್ತದೆ; ಗೂಡಂಗಡಿಗಳಲ್ಲಿ, ಮೇಧಾವಿಗಳ ಕಟ್ಟೆಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಅರಳಿಕಟ್ಟೆಗಳಲ್ಲಿ ಕುಳಿತ ಜನರು ತಮ್ಮ ತಮ್ಮಲ್ಲೇ ಚರ್ಚೆ ಮತ್ತು ಸಂವಾದಗಳನ್ನು ಮಾಡಿಕೊಳ್ಳುವಂತೆ ಪ್ರೇರೇಪಣೆಗೆ ಕಾರಣ ವಾಗಿರುತ್ತದೆ.



ಐ.ಇ.ಸಿ. ಕಾರ್ಯಕಮದ ಎರಡನೆಯ ಅಂಗವಾಗಿ ಕೂಲಿಕಾರರ ಹಕ್ಕು ಮತ್ತು ಕರ್ತವ್ಯಗಳನ್ನು ಸಂಕ್ಷಿಪ್ತವಾಗಿ ಬಹು ವರ್ಣದಲ್ಲಿ ರೋಜ್‌ಗಾರ್ ಸ್ಟಿಕ್ಕರ್ ಮುದಿಸಿ ಕೂಲಿ ಕಾರ್ಮಿಕರ ಮನೆಯ ಬಾಗಿಲುಗಳಿಗೆ ಅಂಟಿಸಲಾಯಿತು.

ಪತಿ ನಿತ್ಯವೂ ಕೂಲಿಕಾರರು, ರೈತರು ತಮ್ಮ ಗಮನವನ್ನು ಬಾಗಿಲಿನ ಕಡೆ ಹರಿಸಿದ ಪತಿ ಸಲವೂ ಉದ್ಯೋಗ ಖಾತರಿ ಕಾರ್ಯಕಮದ ಬಗ್ಗೆ ನೆನಪಿಸಿಕೊಳ್ಳುವಂತೆ ಮಾಡುತ್ತದೆ. ಕೂಡಲೇ ತನ್ನ ಹಕ್ಕನ್ನು ಪಡೆಯಲು ತಾನು ಮಾಡಬೇಕಾದ ಕರ್ತವ್ಯಗಳೇನು ಎಂಬುದರ ಬಗ್ಗೆ ಮನವರಿಕೆ



ಮಾಡಲು ಪಾರಂಭವಾಗುತ್ತದೆ. ಪತಿ ತಿಂಗಳಿನ 2ನೇ ಗುರುವಾರದ ರೋಜ್‌ಗಾರ್ ದಿವಸ ಆಚರಣೆಯ ಬಗ್ಗೆಯೂ ನೆನಪು ಮಾಡಿಕೊಡುತ್ತದೆ. ಜನರು ರೋಜ್‌ಗಾರ್ ದಿನದ ಬಗ್ಗೆ ಕೇಳಿ ತಿಳಿದು ಕೊಳ್ಳುವಂತಾಗಲು ಪೇರೇಪಿಸುತ್ತದೆ. ಇದರಿಂದ ಕುತೂಹಲಿಗಳಾದ ಕೂಲಿಕಾರ್ಮಿಕರು ಸಕಿಯವಾಗಿ ರೋಜ್‌ಗಾರ್ ದಿವಸ್ ಆಚರಣೆಯಲ್ಲಿ ತೊಡಗಿ ಕೊಳ್ಳಲು, ಮತ್ತಷ್ಟು ವಿಚಾರ ತಿಳಿದುಕೊಳ್ಳಲು ಕಾರಣವಾಗುತ್ತದೆ.

ಐ.ಇ.ಸಿ. ಕಾರ್ಯಕಮದ ಮೂರನೆಯ ಅಂಗವಾಗಿ ಪತಿಯೊಂದು ಮನೆಯ ರೋಜ್‌ಗಾರ್ ಹಿಮ್ಮಾಹಿತಿಯನ್ನು ನಮೂನೆಯಲ್ಲಿ ದಾಖಲು ಮಾಡಲಾಗುತ್ತಿದೆ. ನಮೂನೆಯಲ್ಲಿ ಕುಟುಂಬದ ಮುಖ್ಯಸ್ಥರ ಮಾಹಿತಿ, ಕುಟುಂಬದ ಸದಸ್ಯರ ಮಾಹಿತಿ, ಜಾಬ್ ಕಾರ್ಡ್ ಸಂಖ್ಯೆ, ಆಧಾರ್ ಕಾಡ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ದೂರವಾಣಿ ಸಂಖ್ಯೆ, ಜಾಬ್‌ಕಾರ್ಡ್ ಪಡೆದಿದ್ದಾರೆಯೇ? ಇಲ್ಲವೇ? ಮುಂತಾದ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಗಾಮ ಪಂಚಾಯತಿಯ ಗಣಕ ಯಂತದಲ್ಲಿ ರೋಜ್‌ಗಾರ್ ಡಾಟಾಬೇಸ್ ಸೃಷ್ಠಿ ಮಾಡಿ ಇಟ್ಟುಕೊಂಡರೆ ಪತಿಯೊಂದಕ್ಕೂ ಬೇಕಾದ ಮಾಹಿತಿ ಸಿದ್ಧವಾಗಿ ಇರುತ್ತದೆ. ಅದಕ್ಕಾಗಿ ನಮೂನೆ ಸಿದ್ಧಪಡಿಸಿಕೊಟ್ಟು ಮುದಿಸಿಕೊಂಡು ಬಳಸಲು ತಿಳಿಸಿದ್ದರಿಂದ ಸದರಿ ಮಾಹಿತಿಯನ್ನು ಅಗತ್ಯ ಬಿದ್ದಾಗ ತಾಳೆ ಹಾಕಿ ನೋಡಲು, ರೋಜ್‌ಗಾರರಿಗೆ ಗಾಮ ಪಂಚಾಯತಿಯವರು ದೂರವಾಣಿ ಮುಖಾಂತರ ಉದ್ಯೋಗಕ್ಕೆ ಬರುವಂತೆ ಮನವೊಲಿಸಲು ಅನುಪಾಲನೆ ಮಾಡಲು ಇನ್ನಾವುದೇ ಅಗತ್ಯವಾದ ಜರೂರುವಮಾಹಿತಿಯನ್ನು ತಿಳಿಸಲು ಮತ್ತು ಪಡೆಯಲು ಬಳಸಿಕೊಳ್ಳಬಹುದಾಗಿರುತ್ತದೆ.

ಕರಪತದಲ್ಲಿ ಮುದಿಸಿರುವ ಜಿಲ್ಲೆಯ ಓಂಬುಡ್ಸ್‌ಮನ್‌ರವರ ದೂರವಾಣಿ ಸಂಖ್ಯೆಗೆ ಅಪರಿಮಿತವಾದ ದೂರವಾಣಿ ಕರೆಗಳು ಬರುತ್ತಿವೆ; ಅವುಗಳಲ್ಲಿ ಕೆಲವು ಕರೆಗಳು ಗೊಂದಲಗಳನ್ನು ಪರಿಹರಿಸಿಕೊಳ್ಳಲು ಮತ್ತಷ್ಟು ಕರೆಗಳು ದೂರುಗಳನ್ನು ಕೊಡುವ ಸಂಬಂಧಿಸಿದವುಗಳಾಗಿವೆ; ಒಟ್ಟಾರೆಯಾಗಿ ಸಾರ್ವಜನಿಕರಲ್ಲಿ ಯೋಜನೆಯ ಬಗ್ಗೆ ಮಾಹಿತಿಯು Update ಆಗುತ್ತಿರುವುದು ಸಾಬೀತಾದಂತಾಗಿದೆ. ಅಷ್ಟೇ ಅಲ್ಲದೆ ಶಾಲಾ ಮಕ್ಕಳು, ಶಿಕ್ಷಕರು, ಸ್ವಸಹಾಯ



ಸಂಘಗಳ ಸದಸ್ಯರು, ಅಂಗನವಾಡಿ ಕಾರ್ಯಕರ್ತರು, ಚುನಾಯಿತ ಸದಸ್ಯರು, ವಿದ್ಯಾವಂತರು, ಯುವಕ–ಯುವತಿಯ ಮಂಡಳಿಗಳು ಹೀಗೆ ನಾಲ್ಕೂ ನಿಟ್ಟಿನಿಂದ ಮಾಹಿತಿಯು ಪ್ರವಹಿಸಲು ಪ್ರಾರಂಭವಾಗಿರುವುದು ವೇದ್ಯವಾಗಿದೆ.

ಮೇಲೆ ತಿಳಿಸಿದ ಎಲ್ಲ ಕಾರ್ಯಕ್ರಮಗಳ ಅನುಷ್ಠಾನದ ಫಲವಾಗಿ ಆಗಸ್ಟ್ ತಿಂಗಳಿನಲ್ಲಿ ಜರುಗಿದ ವಿಶೇಷ ಗ್ರಾಮ ಸಭೆ ಹಾಗೂ ಆಗಸ್ಟ್ 15ರಂದು ಜರುಗಿದ ಕ್ರಿಯಾ ಯೋಜನೆಯ ವಾರ್ಡ್‌ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಜನರು ಹೆಚ್ಚು ಹೆಚ್ಚಾಗಿ ಸಕ್ರಿಯವಾಗಿ ಪಾಲ್ಗೊಂಡಿರುವುದು ಕಂಡುಬಂದಿದೆ.

ಇದೀಗ ತಾನೇ ಮಾಹಿತಿ ಶಿಕ್ಷಣ ಸಂವಹನವನ್ನು ಪರಿಣಾಮಕಾರಿಯಾಗಿ ಮಾಡಲಾಗಿದೆ. ಫಲಿತಾಂಶ ಕ್ಕಾಗಿ ಕೆಲವು ದಿನ ಕಾಯಲೇಬೇಕಾಗಿರುತ್ತದೆ. ಜನರಲ್ಲಿ ದಿಢೀರನೆ ಯಾವುದೆ ಬದಲಾವಣೆ ತರಲು ಆಗದಿದ್ದರೂ ಕೂಡ ನಾವು ನಿರಾಶರಾಗಿರುವುದಿಲ್ಲ. ಧನಾತ್ಮಕ ಆಲೋಚನೆಯೊಂದಿಗೆ ಫಲಿತಾಂಶದ ನಿರೀಕ್ಷೆಯನ್ನಿಟ್ಟುಕೊಂಡು ನಿರಂತರ ಪಯುತ್ನ ಮಾಡುತ್ತಲೇ ಇರುತ್ತೇವೆ. ತಿಂಗಳಿನ ಅಂತ್ಯದೊಳಗೆ ಪಾಕೆಟ್ ಕ್ಯಾಲೆಂಡರ್ ಅಳತೆಯ ಉದ್ಯೋಗ ಕೈಪಿಡಿಯೊಂದನ್ನು ಚುನಾಯಿತ ಗ್ರಾಮಪಂಚಾಯತಿ ಸದಸ್ಯರಿಗೆಂದೆ ಮುದ್ರಿಸಿ ವಿತರಿಸಲು ಕ್ರಮ ವಹಿಸಲಾಗುತ್ತಿದೆ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

# ದೇವರನಾವದಗಿಯಲ್ಲೊಂದು ಮಾದರಿ ಗ್ರಾಮಸಭೆ ಲಾಟರಿ ಎತ್ತುವ ಮೂಲಕ ಫಲಾನುಭವಿಗಳ ಆಯ್ಕೆ



ಬಂಡೆಪ್ಪ ಜಿ. ತೇಲಿ

ಫಲಾನುಭವಿಗಳ ಆಯ್ಕೆಗೆ ಲಾಟರಿ ಎತ್ತುವ ಮೂಲಕ ಚಾಲನೆ ನೀಡಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಈ ಸಭೆಯನ್ನು ಮಾದರಿ ಗ್ರಾಮಸಭೆ ಯಾಗಿಸಿದರು.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಸರ್ಕಾರ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಗ್ರಾಮಾಭಿವೃದ್ಧಿಯಲ್ಲಿ ನಾಗರೀಕರಿಗೆ ನೇರವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುವುದೇ ಗ್ರಾಮಸಭೆಯ ಮೂಲ ಉದ್ದೇಶವಾಗಿದೆ. ಗ್ರಾಮೀಣ ಪರಿಸರದಲ್ಲಿ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗುರುತಿಸಿ ಅನುಷ್ಠಾನಕ್ಕೆ ತರುವುದರ ಮೂಲಕ




ಬಡವರಿಗೆ, ನಿರ್ಗತಿಕರಿಗೆ, ಕೂಲಿ ಕಾರ್ಮಿಕರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡುವಲ್ಲಿ ಗ್ರಾಮ ಸಭೆಗಳು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆಧಾರ ಸ್ಥಂಭಗಳಾಗಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಅದರಲ್ಲಿ ವಸತಿ ವ್ಯವಸ್ಥೆ ಒಂದಾಗಿದೆ. ಇಂದಿನ ದಿನಗಳಲ್ಲಿ ಸರ್ಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ಸಿಗುವುದು ಬಹಳ ವಿರಳ. ಇದಕ್ಕೊಂದು ನಿದರ್ಶನವೆಂಬಂತೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ದೇವರನಾವದಗಿ ಗ್ರಾಮ ಪಂಚಾಯತಿಯಲ್ಲಿ 2015–16ನೇ ಸಾಲಿನ ಇಂದಿರಾ ಅವಾಸ್ ಯೋಜನೆ ಅಡಿಯಲ್ಲಿ ಫಲಾನುಭವಿಗಳ ಆಯ್ಕೆ ಕುರಿತು ದಿನಾಂಕ 18–9–2015 ರಂದು ಗ್ರಾಮ ಸಭೆ

ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪ್ರಭಾರ), ಗ್ರಾಮ ಪಂಚಾಯತ ದೇವರನಾವದಗಿ,
ತಾ|| ಸಿಂದಗಿ ಜಿ|| ವಿಜಯಪುರ. ಮೊ. 9008845750



ಜರುಗಿತು. ಪಂಚಾಯಿತಿ ಪ್ರತಿನಿಧಿಗಳ ಹಾಗೂ ಗ್ರಾಮಸ್ಥರ ಪರಸ್ಪರ ಸಹಕಾರದೊಂದಿಗೆ ನಿಜವಾದ ವಸತಿ ರೈತರನ್ನು ಗುರುತಿಸುವಲ್ಲಿ ದೇವರನಾವದಗಿ ಗ್ರಾಮಸಭೆ ಇತರರಿಗೆ ಮಾದರಿಯಾಗಿದೆ.

ಪ್ರಸಕ್ತ ಸಾಲಿಗಾಗಿ ದೇವರನಾವದಗಿ ಗ್ರಾಮ ಪಂಚಾಯತಿಗೆ ಸರ್ಕಾರದಿಂದ ಇಂದಿರಾ ಆವಾಸ್ ವಸತಿ ಯೋಜನೆಯಡಿಯಲ್ಲಿ 21 ಮನೆಗಳು ಮಂಜೂರಾಗಿದ್ದವು. 12 ಪರಿಶಿಷ್ಟ ಜಾತಿ, 5 ಅಲ್ಪಸಂಖ್ಯಾತರ 4 ಸಾಮಾನ್ಯ ವರ್ಗಕ್ಕೆ ಸೇರಿದ ಒಟ್ಟು 21 ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿತ್ತು. ಗ್ರಾಮ ಸಭೆಯಲ್ಲಿ ಒಟ್ಟು 120 ಅರ್ಜಿಗಳು ಬಂದಿದ್ದವು. ಆಯ್ಕೆ ಮಾಡುವಲ್ಲಿ ಗ್ರಾಮಸ್ಥರ ಮತ್ತು ಪಂಚಾಯತಿ ಸದಸ್ಯರ ನಡುವೆ ಕೆಲಕಾಲ ತೀವ್ರ ಕಸರತ್ತು ನಡೆಯಿತು. ನಂತರ ಗ್ರಾಮ ಸಭೆಯಲ್ಲಿ ನಿಜವಾದ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಗ್ರಾಮಸ್ಥರು ಪಟ್ಟು ಹಿಡಿದರು. ಕೊನೆಗೆ ಸದಸ್ಯರ ಮತ್ತು ಗ್ರಾಮಸ್ಥರ ನಡುವೆ ಒಪ್ಪಂದ ಏರ್ಪಟ್ಟು ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ತೀರ್ಮಾನಿಸಿದರು.

ದೇವರ ನಾವದಗಿ ಗ್ರಾಮ ಪಂಚಾಯತಿಯ 3 ಗ್ರಾಮಗಳಲ್ಲಿ 7 ವಾರ್ಡುಗಳಿದ್ದು 22 ಜನ ಸದಸ್ಯರಿದ್ದಾರೆ. 21 ಮನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು ಪ್ರಕ್ರಿಯೆ ಪ್ರಾರಂಭಿಸಲಾಯಿತು. ದೇವರನಾವದಗಿ ಗ್ರಾಮಕ್ಕೆ 9, ಕುಮಸಗಿ ಗ್ರಾಮಕ್ಕೆ 8 ಮತ್ತು ಆಲಹಳ್ಳಿ ಗ್ರಾಮಕ್ಕೆ 4, ಹೀಗೆ ಸರ್ಕಾರದ ನಿಯಮಾವಳಿಗಳ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡಲು ಎಲ್ಲರೂ ಸರ್ವಾನುಮತದಿಂದ ಸೂಚಿಸಿದರು. ಅದರಂತೆ ಲಾಟರಿ ಪ್ರಕ್ರಿಯೆ ಪ್ರಾರಂಭಿಸಲಾಯಿತು. ಗ್ರಾಮ ಪಂಚಾಯತಿಯ ಅಧ್ಯಕ್ಷೆ ಶ್ರೀಮತಿ ಮಲ್ಲಮ್ಮ ಗುಗ್ಗರಿ ಫಲಾನುಭವಿಗಳ ಆಯ್ಕೆಗೆ ಲಾಟರಿ ಎತ್ತುವ ಮೂಲಕ ಚಾಲನೆ ನೀಡಿ ಮಾತನಾಡಿ ನಮ್ಮ ಗ್ರಾಮ ಪಂಚಾಯತಿಯಲ್ಲಿ ಎಲ್ಲರ ಸಹಮತದೊಂದಿಗೆ ಇದೊಂದು ಬಡವರಿಗೆ ದೊರೆತ ಮಾದರಿ ಗ್ರಾಮಸಭೆ ಎಂದು ಬಣ್ಣಿಸಿದರು.

ದೇವರನಾವದಗಿ ಗ್ರಾಮಕ್ಕೆ 2 ಸಾಮಾನ್ಯ, 5 ಪರಿಶಿಷ್ಟ ಜಾತಿ, 2 ಅಲ್ಪ ಸಂಖ್ಯಾತರ ಕುಮಸಗಿ ಗ್ರಾಮಕ್ಕೆ 1 ಸಾಮಾನ್ಯ 5 ಪರಿಶಿಷ್ಟ ಜಾತಿ 2 ಅಲ್ಪ ಸಂಖ್ಯಾತರ ಮತ್ತು ಅಲಹಳ್ಳಿ ಗ್ರಾಮಕ್ಕೆ 1 ಸಾಮಾನ್ಯ, 2 ಪರಿಶಿಷ್ಟ ಜಾತಿ, 1 ಅಲ್ಪಸಂಖ್ಯಾತರ ಹೀಗೆ



ಗ್ರಾಮವಾರು ಒಟ್ಟು 21 ಮನೆಗಳನ್ನು ಹಂಚಿಕೆ ಮಾಡಲಾಯಿತು. ಇದಕ್ಕೆ ಗ್ರಾಮಸಭೆಯಲ್ಲಿ ಭಾಗವಹಿಸಿದ ಎಲ್ಲರೂ ಫಲಾನುಭವಿಗಳ ಪಟ್ಟಿಗೆ ಒಪ್ಪಿಗೆ ಸೂಚಿಸಿ ಠರಾವು ಪಾಸ್ ಮಾಡಿದರು.

ನಂತರ ಸಭೆಯಲ್ಲಿ ಮಾರ್ಗದರ್ಶಿ ಅಧಿಕಾರಿಯಾಗಿ ಭಾಗವಹಿಸಿದ್ದ ಸಿಂದಗಿ ತಾಲ್ಲೂಕು ಪಂಚಾಯತಿಯ ನರೇಗಾ ಯೋಜನೆಯ ಸಹಾಯಕ ನಿರ್ದೇಶಕಿ ಭಾರತಿ ಚಲುವಯ್ಯ ಆಯ್ಕೆ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಿಕೊಟ್ಟರು. ಇನ್ನುಳಿದ ಪಂಚಾಯತಿ ಪ್ರತಿನಿಧಿಗಳು, ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದು ಸಮಾರಂಭವನ್ನು ಯಶಸ್ವಿಗೊಳಿಸಿದರು. ಇಂತಹ ಗ್ರಾಮ ಸಭೆಗಳು ಎಲ್ಲರಿಗೂ ಮಾದರಿಯಾಗಲೆಂದು ಹಾರೈಸಿದರು.

ಯಶೋಗಾಥೆ



ಗಿರೀಶ್ ಎಸ್. ಬೆನ್ನೂರ

# ಮೇವುಂಡಿ ಗ್ರಾಮ ಪಂಚಾಯತಿಯ ಯಶೊಗಾಥೆ

ಹಾವೇರಿ ಜಿಲ್ಲೆಯ ಮೇವುಂಡಿ ಗ್ರಾಮ ಪಂಚಾಯತಿಯಲ್ಲಿ ಬತ್ತಿಹೋಗಿದ್ದ ಕೊಳವೆ ಬಾವಿಯನ್ನು ಮರುಪೂರಣಗೊಳಿಸಿದ ನಂತರ ಸಮೃದ್ಧವಾಗಿ ನೀರು ದೊರೆಯುವಂತಾಗಿದೆ.

ಮೇವುಂಡಿ ಗ್ರಾಮ ಪಂಚಾಯತಿಯು ಹಾವೇರಿಯಿಂದ 46 ಕಿ. ಮೀ. ಅಂತರದಲ್ಲಿದ್ದು, ಈ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಮೇವುಂಡಿ, ತೆರೆದಹಳ್ಳಿ, ಗುಯಿಲಗುಂದಿ ಹಾಗೂ ಗಳಗನಾಥ ಎಂಬ ನಾಲ್ಕು ಗ್ರಾಮಗಳು ಬರುತ್ತವೆ. ಈ ನಾಲ್ಕು ಗ್ರಾಮಗಳ ಒಟ್ಟು ಜನಸಂಖ್ಯೆ : 6788 ಇದ್ದು, ಒಟ್ಟು ಕುಟುಂಬಗಳು : 1427 ಇರುತ್ತವೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 907 ಉದ್ಯೋಗ ಚೀಟಿಗಳನ್ನು ವಿತರಿಸಲಾಗಿದೆ.

ಗ್ರಾಮದ ವಸತಿ ನಿಲಯದಲ್ಲಿ ಸುಮಾರು ಒಂದು ವರ್ಷದಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿತು.



## ಜಿಲ್ಲಾ ಪಂಚಾಯತಿಯ ಮಾರ್ಗದರ್ಶನ:

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪಂಚಾಯತಿಯ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಕೆ.ಬಿ.ಅಂಜನಪ್ಪನವರು ಜಿಲ್ಲೆಯ ಎಲ್ಲಾ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳ, ಇಂಜನಿಯರುಗಳ ಒಂದು ದಿನದ ಕಾರ್ಯಾಗಾರವನ್ನು ಹಾವೇರಿಯ ಜಲತಜ್ಞ ಶ್ರೀ ಪಾಟೀಲರವರ ಮಾರ್ಗದರ್ಶನದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲ ಮರಪೂರಣ ಕಾರ್ಯ ಕೈಗೆತ್ತಿಕೊಳ್ಳುವಂತೆ ಆದೇಶಿಸಿ ತುರ್ತಾಗಿ ಕೆಲಸ ನಿರ್ವಹಿಸಲು ಪ್ರೇರೇಪಿಸಿದರು.

## ತಾಲ್ಲೂಕು ಪಂಚಾಯತಿಯ ನೇತೃತ್ವ :

ಜಿಲ್ಲಾ ಪಂಚಾಯತಿಯ ಆಶಯಕ್ಕೆ ತಕ್ಕಂತೆ ಹಾವೇರಿ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿ ವಿಳಂಬ ಮಾಡದೆ

ತಾಲ್ಲೂಕು ಐ.ಇ.ಸಿ ಸಂಯೋಜಕರು, ತಾಲ್ಲೂಕು ಪಂಚಾಯತ್ ಹಾವೇರಿ, ಜಿ|| ಹಾವೇರಿ.



ತಾಲ್ಲೂಕಿನಲ್ಲಿ ಕೊಳವೆ ಬಾವಿ ಮರುಪೂರಣ ಕಾರ್ಯ ಕೈಗೆತ್ತಿಕೊಂಡು, ನೀರಿನ ಸಮಸ್ಯೆ ಹೆಚ್ಚಾಗಿದ್ದ ಮೇವುಂಡಿ ಗ್ರಾಮವನ್ನೆ ಪ್ರಥಮವಾಗಿ ಆಯ್ಕೆ ಮಾಡಿಕೊಂಡು ತಾವೇ ಖುದ್ದಾಗಿ ಭೇಟಿ ನೀಡಿ ಗ್ರಾಮದ ವಿಧ್ಯಾರ್ಥಿ ವಸತಿ ನಿಲಯದ ಬಳಿ ಇರುವ ವಿಫಲವಾದ ಕೊಳವೆ ಬಾವಿಯನ್ನು ಮರುಪೂರಣ ಗೊಳಿಸಲು ಆಯ್ಕೆ ಮಾಡಿಕೊಂಡರು.

## ಗ್ರಾಮ ಪಂಚಾಯತಿಯಿಂದ ಕಾರ್ಯಾಚರಣೆ:

2013-14ನೇ ಸಾಲಿನಲ್ಲಿ ಕೊರೆಸಿದ್ದ 500 ಅಡಿ ಆಳದ ಕೊಳವೆ ಬಾವಿಯಲ್ಲಿ 2 ಇಂಚು ನೀರು ಬರುತ್ತಿತ್ತು. 20 ಅಡಿ ಕೆಸಿಂಗ್ ಪೈಪ್ ಬಿಡಲಾಗಿತ್ತು. ವಸತಿ ನಿಲಯದ ವಿಧ್ಯಾರ್ಥಿಗಳಿಗೆ ಕುಡಿಯುವ ನೀರಿಗೆ ಬೋರವೆಲ್ ಕೊರೆಸಿದಾಗ ಈ ನೀರನ್ನು ಕುಡಿಯುವುದಕ್ಕೆ ಬಳಸುತ್ತಿದ್ದರು. ವಿಧ್ಯಾರ್ಥಿ ವಸತಿ ನಿಲಯದ ಮಕ್ಕಳು ಊಟ ಮಾಡಿದ ಮೇಲೆ ದಾಹ ತೀರಿಸಿಕೊಳ್ಳುವುದಕ್ಕೆ ಈ ಬೋರವೆಲ್ಲಿನ ನೀರನ್ನೇ ಅವಲಂಬಿಸಿದ್ದರು. 8 ತಿಂಗಳಿನಿಂದ ನೀರಿನ ಲಭ್ಯತೆ ಕಡಿಮೆಯಾಗಿದ್ದು, ಕಳೆದ 3 ತಿಂಗಳಿನಿಂದ ನೀರು ಸಂಪೂರ್ಣ ಬತ್ತಿ ಹೊಗಿತ್ತು. ಕೋಳವೆ ಬಾವಿ ಸುತ್ತ 2-3 ಎಕರೆ ವ್ಯಾಪ್ತಿಯ ಮಳೆ ನೀರು ವ್ಯರ್ಥವಾಗಿ ಚರಂಡಿಯ ಪಾಲಾಗುತ್ತಿತ್ತು. ಕೂಲಿ ಕಾರ್ಮಿಕರನ್ನು ಬಳಸಿಕೊಂಡು ಗ್ರಾಮ ಪಂಚಾಯತಿಯು ದಿನಾಂಕ 01/08/2015 ರಿಂದ 15/08/2015ರವರೆಗೆ 91 ಮಾನವ ದಿನಗಳಿಗೆ ಎನ್.ಎಂ.ಆರ್ ಸೃಜಿಸಿ ಸಮರೊಪಾದಿಯಲ್ಲಿ ಕೆಲಸ ಪ್ರಾರಂಭಿಸಿ ಸುತ್ತಲೂ 15x6x12 ಆಳದ ಗುಂಡಿಯನ್ನು ತೆಗೆಯಲಾಗಿ ಕೆಸಿಂಗ್ ಪೈಪ್‌ಗೆ ನೀರು ಒಳ ಹೊಗಲು ಅನುವಾಗುವಂತೆ 2 ಇಂಚಿಗೊಂದರಂತೆ ರಂಧ್ರ ಕೊರೆದು ಸಿಲ್ಟ್ ಒಳಹೊಗದಂತೆ ಪರದೆ ಕಟ್ಟಲಾಯಿತು, ನಂತರ ಕಡು ಕಲ್ಲುಗಳನ್ನು ಸ್ವಲ್ಪ ಭಾಗದವರೆಗೆ ತುಂಬಿ ನಂತರ ಬೋಲ್ಡರ್ಸ್ ಹಾಕಲಾಯಿತು. ಅದರ ಮೇಲ್ಭಾಗದಲ್ಲಿ 40 ಎಂ.ಎಂ

## ಕಾಮಗಾರಿಯ ವಿವರ:

**ಕಾಮಗಾರಿಯ ಹೆಸರು:**
ಮೇವುಂಡಿ ಗ್ರಾಮ ಪಂಚಾಯತಿಯ ಮೇವುಂಡಿ ಗ್ರಾಮದ ಸರಕಾರಿ ವಸತಿ ನಿಲಯದ ಹತ್ತಿರ ಇರುವ ಕುಡಿಯುವ ನೀರಿನ ಕೊಳವೆ ಬಾವಿಗೆ ಇಂಗುಗುಂಡಿ ನಿರ್ಮಾಣ

**ಕಾಮಾಗಾರಿಯ ಸಂಕೇತ :**
1517003025/WC/11020050920624251

**ತಾಂತ್ರಿಕ ಮಂಜೂರಾತಿ ಸಂಖ್ಯೆ :**
116/PRED/2015-16

**ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ :**
64/MVD/2015-16

**ಕಾಮಗಾರಿ ಪ್ರಾರಂಭ ದಿನಾಂಕ :** 01/08/2015

**ಕಾಮಗಾರಿ ಆದೇಶ ನೀಡಿದ ದಿನಾಂಕ:** 28/07/2015

**ಖರ್ಚಾದ ಮೊತ್ತ :-**

**ಕೂಲಿ ಮೊತ್ತ ರೂ.:** 0.18564ಲಕ್ಷಗಳು

**ಸಾಮಗ್ರಿ ಮೊತ್ತ ರೂ.:** 21436 ಲಕ್ಷಗಳು

**ಉತ್ಪಾದಿಸಲಾದ ಮಾನವ ದಿನಗಳು :** 91

ಜಲ್ಲಿಯನ್ನು ಹರಡಲಾಯಿತು. ನಂತರ 20 ಎಂ ಎಂ ಜಲ್ಲಿಯನ್ನು ಹಾಕಲಾಯಿತು. ನೀರಿನ ಶುದ್ಧೀಕರಣ ಕ್ಕಾಗಿ ಇದ್ದಿಲನ್ನು ಹಾಕಲಾಗಿ, ಅದರ ಮೇಲೆ ಮತ್ತೊಮ್ಮೆ ಪರದೆಯನ್ನು ಹರಡಿ ಉತ್ತಮ ಗುಣಮಟ್ಟದ 2 ಟ್ರಾಕ್ಟರ್ ಮರಳನ್ನು ಹರಡಲಾಯಿತು. ಮರು ಪೂರ್ಣದ ಸುತ್ತ ಪ್ಯಾರಾಪಿಟ್ ನಿರ್ಮಿಸಿ ಅದಕ್ಕೆ 2 ಇನ್‌ಲೆಟ್, 1 ಔಟ್‌ಲೆಟ್ ಒಳಗೊಂಡ ಮರುಪೂರಣ ಘಟಕ ನಿರ್ಮಾಣ ಮಾಡಲಾಯಿತು. ಈ ಘಟಕಕ್ಕೆ ಕೂಲಿ ಮೊತ್ತ ರೂ. 18564=00 ಸಾಮಾಗ್ರಿ ಮೊತ್ತ 21436=00 ಗಳನ್ನ ವೆಚ್ಚ ಮಾಡಲಾಯಿತು.

## ಫಲ ನೀಡಿದ ಕಾರ್ಯಕ್ರಮ:

ಜುಲೈ 2015ರ ಮಾಹೆಯಲ್ಲಿ ಸುರಿದ ಮಳೆಯಿಂದಾಗಿ ಈ ಮರುಪೂರಣ ಘಟಕಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಬಂದು ಕೊಳವೆ ಬಾವಿಗೆ ಸೇರಿದೆ. ಮುಂದಿನ ದಿನಗಳಲ್ಲಿ ಈ ಕೊಳವೆಬಾವಿಯಿಂದ ಸಮೃದ್ಧ ನೀರು ಬರಲಿದ್ದು ವಿದ್ಯಾರ್ಥಿ ನಿಲಯದ ಮಕ್ಕಳಿಗೆ ದಾಹ ನೀಗಿಸಲಿದೆ ಎಂಬ ಆಶಯ ಇಲ್ಲಿಯವರದ್ದಾಗಿದೆ.

ಕವಿಯ(ಕ್ಷ) ಪ್ರಶ್ನೆ?

# ಕನ್ನಡಕ್ಕಿರಲಿ ಆದ್ಯತೆ

ಕನ್ನಡಕ್ಕಿರಲಿ ಆದ್ಯತೆ ಎಂದು ಕೇಳುತ್ತಿಹಳು ನಮ್ಮ ತಾಯಿ ಕನ್ನಡತಿ

ಇದೇನಾ ಸಭ್ಯತೆ? ಇದೇನಾ ಸಂಸ್ಕೃತಿ?

ಇದೇನಾ ಇಂದು ಸತ್ಯತೆ? ಇದೇನಾ ನಮ್ಮ ಜಾಗೃತಿ

ಈ ಕನ್ನಡ ನಾಡಿನಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಾನಮಾನ ಎಷ್ಟಿದೆ ಎಂದು ಚಿಂತಿಸುವ ಕಾಲ ಬಂದೊದಗಿದೆ. ನಮ್ಮ ನಾಡಿನ ಜನರು ಕೇವಲ ಉದ್ಯೋಗ, ಹಣ ಗಿಟ್ಟಿಸಲು ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿ ಪರಭಾಷೆ ಕಲಿತು ಅದನ್ನು ನಮ್ಮ ಭಾಷೆಯ ಮಧ್ಯೆ ಸೇರಿಸಿ ಕನ್ನಡಕ್ಕೆ ತೇಪೆ ಹಾಕುವ ನಮ್ಮ ವಿದ್ಯಾವಂತ ಕನ್ನಡಿಗರಿಗೆ ಕನ್ನಡಾಭಿಮಾನವನ್ನು ತಿಳಿಸಕೊಡಬೇಕಾಗಿದೆ. ಕನ್ನಡಾಭಿಮಾನಿಗಳು "ಕನ್ನಡ ಉಳಿಸಿ ಕನ್ನಡ ಬೆಳೆಸಿ" ಎಂದು ಕರ್ನಾಟಕದ ಎಲ್ಲಾ 5 ಕೋಟಿ ಜನತೆಗೆ ತಿಳಿಸೋಣ ಬನ್ನಿ. ನಮ್ಮಂತಹ ವಿದ್ಯಾವಂತರು ಪರಭಾಷೆಗೆ ಮಾರು ಹೋಗುವ ಸ್ಥಿತಿ ಬಂದಿರುವ ಈ ಸಂದರ್ಭದಲ್ಲಿ ಕನ್ನಡಿಗರು ಎಚ್ಚೆತ್ತುಕೊಂಡು ಭಾಷಾಭಿಮಾನ ಮೆರೆಯಬೇಕಾದ ಅನಿವಾರ್ಯತೆ ಉಂಟಾಗಿದೆ.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1. ಕನ್ನಡಕ್ಕೆ ಮಾನ್ಯತೆ ನೀಡಿ ಎಂದು ಕನ್ನಡಿಗರೇ ಮುಷ್ಕರ ಮಾಡುವಂತಹ ಪರಿಸ್ಥಿತಿ ಮಾಡಿಕೊಂಡಿರುವ ನಾವು ನಿಜವಾದ ಕನ್ನಡಿಗರೇ?
2. ಕನ್ನಡ ಭಾಷೆಯನ್ನು ಉಳಿಸಲು ಜಿ.ಪಿ. ರಾಜರತ್ನಂ, ಬೇಂದ್ರೆ, ಕುವೆಂಪು ಮುಂತಾದ ದಿಗ್ಗಜರು ಮತ್ತೆ ಕನ್ನಡಕ್ಕಾಗಿ ಹುಟ್ಟಿ ಬರಬೇಕೇ?
3. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಪರಭಾಷೆ ಕಲಿತವರಿಗೆ ಮಾತ್ರ ಉದ್ಯೋಗವೇ?
4. ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವುದು ಕನ್ನಡಿಗರಾದ ನಮ್ಮೆಲ್ಲರ ಆದ್ಯ ಕರ್ತವ್ಯವಲ್ಲವೇ?

**ಸೋಮಶೇಖರ**

S/o. ನಾರಾಯಣ ಗೌಡ

ಕನುಗನಹಳ್ಳಿ, ತಿಪ್ಪೂರು ಪೋಸ್ಟ್,

ಕೆ. ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ

## ಕಾವ್ಯ ವಿಕಾಸ



ಶ್ರೀಕಾಂತ. ಹಾ.
ಬಾಲೇಹೊಸೂರ

# ಕನಸು ನನಸು

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಕನಸು
ನನಸು ಮಾಡುವೆವು ನಾವು
ಪಣ ತೊಡುವೆವು ಜೊತೆಯಾಗಿ ಇಂದು
ಒಗ್ಗಟ್ಟಿನಲಿ ಬಲವಿದೆ ಜಯವಿದೆ ಎಂದು
ಕನಸು ನನಸಾಗಿಸಲು ಇಂದು ಮುಂದೆಂದು

ಹಳ್ಳಿಯ ಅಭಿವೃದ್ಧಿ ಪಂಚಾಯತ್ ರಾಜ್ ಗುರಿ
ಹಗಲಿರುಳು ಶ್ರಮಿಸುತಿದೆ ಶ್ರಮಮೀರಿ
ಉದ್ಯೋಗದಾತ ನರೇಗಾ ಯೋಜನೆ
ಸ್ವಚ್ಛ ಭಾರತ ಆಂದೋಲನದ ಜೊತೆ ಸ್ವಚ್ಛ ಮನದಿ
ಕನಸು ನನಸಾಗಿಸಲು ಇಂದು ಮುಂದೆಂದು

ಸತ್ಯ ಅಹಿಂಸೆ ಸಹಕಾರಕೆ ಹೆಗಲಾಗಿ
ಗಾಂಧಿ ಸಾಕ್ಷಿ ಕಾಯಕ ಪರೀಕ್ಷೆಗಾಗಿ
ಗ್ರಾಮ ಸ್ವರಾಜ್ಯ ಪರಮ ಗುರಿಯೆಂದು
ಅಧಿಕಾರ ವಿಕೇಂದ್ರೀಕರಣದ ಮುನ್ನುಡಿಯಾಗಿ
ಕನಸು ನನಸಾಗಿಸೋಣ ಇಂದು ಮುಂದೆಂದು

ಹಳ್ಳಿಯ ಏಳ್ಗೆ ದೇಶದ ಏಳ್ಗೆಯೆಂದ
ಮಹಾತ್ಮರ ಸಂದೇಶಗಳ ಮಾರ್ಗದರ್ಶನದಿ
ಸಮಾನತೆ, ಸ್ವಾವಲಂಬನೆ, ಸಹಕಾರದ ಹಾದಿಗೆ
ಪ್ರಜಾಭುತ್ವದ ಬುನಾದಿ ಗಟ್ಟಿಗೊಳಿಸೋಣ
ಕನಸು ನನಸಾಗಿಸೋಣ ಇಂದು ಮುಂದೆಂದು

ಶಿಕ್ಷಣ, ಆರೋಗ್ಯ, ನೀರು, ದಾರಿ
ಮೂಲಭೂತ ಸೌಕರ್ಯಗಳ ರಹದಾರಿ
ಆಶ್ರಯ ಬೆಳಕಿನಲಿ ಅಂದಗೊಳಿಸೋಣ
ಹಳ್ಳಿಯ ಸ್ವಚ್ಛ ಸುಂದರ ತೋಟವಾಗಿಸೋಣ
ಕನಸು ನನಸಾಗಿಸೋಣ ಇಂದು ಮುಂದೆಂದು.

ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಗ್ರಾಮ ಪಂಚಾಯತಿ, ಬನ್ನಿಕಲ್ಲು, ಹಗರಿಬೊಮ್ಮನಹಳ್ಳಿ ತಾಲೂಕು,
ಬಳ್ಳಾರಿ ಜಿಲ್ಲೆ, ಪಿನ್-583214, ಮೊಬೈಲ್ ನಂ.9901275477

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 29-10-2015 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2012-13 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2013-14 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 230 | 89 | 89 | 74 | 29 | 86 | 86 | 83 | 76 | 1 |
| ಉಡುಪಿ | 158 | 90 | 90 | 54 | 50 | 76 | 89 | 79 | 75 | 2 |
| ಬೆಂಗಳೂರು (ಗ್ರಾ) | 105 | 93 | 92 | 15 | 76 | 77 | 88 | 89 | 75 | 3 |
| ರಾಮನಗರ | 126 | 100 | 99 | 0 | 83 | 97 | 70 | 71 | 74 | 4 |
| ದಕ್ಷಿಣ ಕನ್ನಡ | 230 | 87 | 87 | 80 | 13 | 66 | 86 | 80 | 71 | 5 |
| ಕೋಲಾರ | 156 | 100 | 99 | 0 | 100 | 94 | 38 | 59 | 70 | 6 |
| ಕೊಡಗು | 104 | 94 | 94 | 48 | 2 | 73 | 87 | 80 | 68 | 7 |
| ಬಾಗಲಕೋಟೆ | 198 | 79 | 79 | 5 | 70 | 86 | 90 | 70 | 68 | 8 |
| ತುಮಕೂರು | 331 | 96 | 96 | 1 | 79 | 75 | 70 | 53 | 67 | 9 |
| ಮಂಡ್ಯ | 234 | 99 | 99 | 1 | 49 | 94 | 64 | 58 | 66 | 10 |
| ಬೀದರ್ | 186 | 94 | 94 | 0 | 61 | 70 | 74 | 72 | 66 | 11 |
| ಶಿವಮೊಗ್ಗ | 271 | 95 | 95 | 21 | 38 | 87 | 78 | 53 | 66 | 12 |
| ಚಿಕ್ಕಮಗಳೂರು | 227 | 99 | 99 | 22 | 19 | 61 | 87 | 72 | 65 | 13 |
| ಚಿಕ್ಕಬಳ್ಳಾಪುರ | 157 | 96 | 96 | 3 | 77 | 84 | 52 | 52 | 65 | 14 |
| ದಾವಣಗೆರೆ | 233 | 97 | 97 | 1 | 56 | 94 | 73 | 39 | 65 | 15 |
| ಮೈಸೂರು | 266 | 87 | 87 | 0 | 54 | 80 | 74 | 53 | 62 | 16 |
| ಹಾಸನ | 266 | 96 | 96 | 7 | 39 | 55 | 85 | 61 | 62 | 17 |
| ಚಾಮರಾಜನಗರ | 130 | 91 | 89 | 0 | 36 | 76 | 58 | 82 | 61 | 18 |
| ಧಾರವಾಡ | 143 | 88 | 88 | 4 | 60 | 88 | 57 | 39 | 60 | 19 |
| ಹಾವೇರಿ | 222 | 93 | 93 | 0 | 56 | 76 | 63 | 42 | 60 | 20 |
| ಚಿತ್ರದುರ್ಗ | 189 | 97 | 97 | 0 | 64 | 78 | 58 | 23 | 59 | 21 |
| ಗದಗ | 120 | 88 | 88 | 0 | 61 | 81 | 46 | 29 | 56 | 22 |
| ಬೆಂಗಳೂರು (ನ) | 96 | 84 | 84 | 31 | 48 | 15 | 62 | 63 | 55 | 23 |
| ವಿಜಯಪುರ | 213 | 90 | 90 | 0 | 48 | 47 | 55 | 30 | 51 | 24 |
| ಬಳ್ಳಾರಿ | 198 | 91 | 91 | 1 | 6 | 47 | 76 | 43 | 50 | 25 |
| ಕೊಪ್ಪಳ | 152 | 84 | 84 | 0 | 17 | 53 | 77 | 21 | 48 | 26 |
| ಬೆಳಗಾವಿ | 498 | 93 | 90 | 0 | 22 | 57 | 35 | 35 | 47 | 27 |
| ರಾಯಚೂರು | 180 | 88 | 87 | 1 | 36 | 40 | 52 | 21 | 46 | 28 |
| ಯಾದಗಿರಿ | 123 | 93 | 93 | 8 | 0 | 28 | 41 | 6 | 38 | 29 |
| ಕಲಬುರಗಿ | 264 | 83 | 78 | 0 | 23 | 42 | 18 | 7 | 35 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಅಕ್ಟೋಬರ್ 2015)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಕೋಲಾರ | 20558 | 20450 | 0.8 | 9 | 1370 | 1 | 1 |
| ಬಾಗಲಕೋಟೆ | 12823 | 13073 | 0.1 | 2 | 712 | 4 | 2 |
| ಬೆಂಗಳೂರು (ಗ್ರಾ) | 11182 | 11099 | 1 | 11 | 1242 | 2 | 3 |
| ಉಡುಪಿ | 7152 | 7142 | 0.3 | 7 | 650 | 5 | 4 |
| ಶಿವಮೊಗ್ಗ | 3995 | 3916 | 0.1 | 2 | 235 | 9 | 5 |
| ಚಿಕ್ಕಬಳ್ಳಾಪುರ | 8991 | 9025 | 2.2 | 18 | 749 | 3 | 6 |
| ಚಿಕ್ಕಮಗಳೂರು | 3286 | 3114 | 1.6 | 15 | 298 | 7 | 7 |
| ತುಮಕೂರು | 11306 | 11242 | 3.4 | 21 | 434 | 6 | 8 |
| ಉತ್ತರ ಕನ್ನಡ | 2101 | 1773 | 0 | 1 | 150 | 15 | 9 |
| ವಿಜಯಪುರ | 5142 | 5303 | 5.1 | 24 | 244 | 8 | 10 |
| ಚಿತ್ರದುರ್ಗ | 3190 | 3331 | 2.9 | 20 | 199 | 10 | 11 |
| ಕೊಪ್ಪಳ | 2041 | 2075 | 1.5 | 13 | 157 | 13 | 12 |
| ದಾವಣಗೆರೆ | 2593 | 2519 | 0.2 | 4 | 136 | 17 | 13 |
| ಹಾವೇರಿ | 2709 | 2793 | 1.8 | 17 | 180 | 12 | 14 |
| ರಾಯಚೂರು | 3789 | 3596 | 7 | 26 | 199 | 10 | 15 |
| ರಾಮನಗರ | 1471 | 1791 | 1.5 | 13 | 147 | 16 | 16 |
| ಮಂಡ್ಯ | 2017 | 1820 | 0.6 | 8 | 112 | 20 | 17 |
| ಬೀದರ್ | 2649 | 3083 | 8.8 | 27 | 155 | 14 | 18 |
| ಗದಗ | 1181 | 1165 | 2.2 | 18 | 118 | 18 | 19 |
| ಚಾಮರಾಜನಗರ | 1136 | 998 | 1.7 | 16 | 113 | 19 | 20 |
| ಮೈಸೂರು | 2465 | 2425 | 1 | 11 | 85 | 22 | 21 |
| ದಕ್ಷಿಣ ಕನ್ನಡ | 1077 | 1092 | 0.2 | 4 | 53 | 25 | 22 |
| ಧಾರವಾಡ | 459 | 452 | 0.2 | 4 | 25 | 26 | 23 |
| ಬೆಳಗಾವಿ | 2589 | 2885 | 0.8 | 9 | 55 | 24 | 24 |
| ಹಾಸನ | 1706 | 1851 | 5.1 | 24 | 100 | 21 | 25 |
| ಕೊಡಗು | 314 | 320 | 4.1 | 23 | 62 | 23 | 26 |
| ಬಳ್ಳಾರಿ | 456 | 475 | 4 | 22 | 18 | 27 | 27 |
| ಬೆಂಗಳೂರು (ನ) | 1480 | 2182 | 29.4 | 29 | 15 | 28 | 28 |
| ಕಲಬುರಗಿ | 346 | 329 | 21.6 | 28 | 13 | 29 | 29 |
| ಯಾದಗಿರಿ | 84 | 90 | 57.8 | 30 | 7 | 30 | 30 |

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ,
ಬೆಂಗಳೂರು-1. ದೂ. 080-22372738
E-mail: nregs-ka@nic.in
ದಿನಾಂಕ: 29-9-2015

ಕ್ರ.ಸಂ.ಗ್ರಾಅಪ/415/ಉಖಾಯೋ/2015

# ಸುತ್ತೋಲೆ

## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನ ಕಾರ್ಯ ವ್ಯವಸ್ಥೆ ಕುರಿತಾದ ಟಿಪ್ಪಣಿ

ಕರ್ನಾಟಕದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನವನ್ನು ಪುನಃಚೇತನಗೊಳಿಸುವ ದೃಷ್ಟಿಯಿಂದ ನೆರೆಹೊರೆಯ ರಾಜ್ಯಗಳಲ್ಲಿ ಯೋಜನೆಯ ಅನುಷ್ಠಾನದ ಕಾರ್ಯರಚನೆ / ಕಾರ್ಯವ್ಯವಸ್ಥೆಗಳನ್ನು ಅಧ್ಯಯನಮಾಡಿ ಸುದೀರ್ಘವಾಗಿ ಚರ್ಚೆಕೈಗೊಳ್ಳಲಾಗಿದೆ. ಈ ಟಿಪ್ಪಣಿಯ ಮೂಲಕ ಉದ್ದೇಶಿತ ಬದಲಾವಣೆ ಅಂಶಗಳನ್ನು ಕ್ರೋಢೀಕರಿಸುವ ಪ್ರಯತ್ನಮಾಡಲಾಗಿದೆ.

1. ಯೋಜನೆಯ ಪುನಃಶ್ಚೇತನ ಅನುಷ್ಠಾನಕ್ಕೆಗೊಳಿಸುವ ಪ್ರಮುಖ ವಿಧಾನಗಳನ್ನು **ಪ್ರತಿದಿನದ ಪರಿವೀಕ್ಷಣಾ - ವ್ಯವಸ್ಥೆ ಪರಿಚಯಿಸಬಯಸಿದೆ.**

2. ದೈನಂದಿನ ಪರಿವೀಕ್ಷಣಾ ವ್ಯವಸ್ಥೆಯನ್ನು ಪ್ರಾರಂಭಿಸಲು, ಕೆಲಸ ಮಾಡಲು, ಸುವ್ಯವಸ್ಥೆಗೊಳಿಸುವುದಕ್ಕೆ (i) ರಾಜ್ಯ (ii) ಜಿಲ್ಲೆ (iii) ತಾಲ್ಲೂಕು (iv) ಗ್ರಾಮ ಪಂಚಾಯತಿ (v) ಕ್ಷೇತ್ರ ಮತ್ತು (vi) ಕಾಮಗಾರಿ ಸ್ಥಳದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಸಮರ್ಪಣಾ ಮನೋಭಾವದಿಂದ ಹಾಗೂ ವೈಯಕ್ತಿಕವಾಗಿ ನಿಗಾ ವಹಿಸುವ / ಮೇಲ್ವಿಚಾರಣೆ ಕೈಗೊಳ್ಳುವ ಸಿಬ್ಬಂದಿಯ ಅಗತ್ಯತೆ ಇರುತ್ತದೆ.

3. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಪ್ರತಿಯೊಬ್ಬ ಜವಾಬ್ದಾರಿಯುತ ಅಧಿಕಾರಿ/ಸಿಬ್ಬಂದಿ/ಬಾದ್ಯಸ್ಥರೆ ಈ ಕೆಳಕಂಡ ಕರ್ತವ್ಯಗಳು.

   (i) ನಿರ್ದಿಷ್ಟವಾಗಿರುವುದು (ಒಬ್ಬ ವ್ಯಕ್ತಿಗಾಗಿದ್ದು ಗುಂಪು ಅಥವ ಹಲವು ವ್ಯಕ್ತಿಗಳಿಗಲ್ಲ). (specific)

   (ii) ನಿಸ್ಸಂಶಯವಾಗಿರುವುದು. (un-ambiguous)

   (iii) ಪರಿಮಾಣೀಕರಣಕ್ಕೆ ಒಳಪಟ್ಟಿರುವುದು (ಸತತವಾಗಿ ಅಥವಾ ಪ್ರತಿದಿನ/ಪ್ರತಿವಾರ). (Measurable)

   (iv) ಜವಾಬ್ದಾರಿ ಪರಭಾರೆಯಾಗದಿರುವುದು (ಕರ್ತವ್ಯ ನಿರ್ವಹಣೆ ದೃಷ್ಟಿಯಿಂದ).(Non-transferable)

   (v) ವೈಯಕ್ತಿಕವಾಗಿಯೇ ಕರ್ತವ್ಯ ನಿರ್ವಹಣೆಯ ನಿಯಂತ್ರಣ ಹೊಂದಿರುವುದು.

4 ಕಾರ್ಯ ವಿಧಾನವು ಕೂಲಿ ಕಾರ್ಮಿಕನಿಂದ ಪ್ರಾರಂಭವಾಗಿ ಮೇಲ್ಮುಖವಾಗಿ ಚಾಲನೆಗೊಳ್ಳುವುದು.

### (i) ಕೂಲಿಕಾರ್ಮಿಕರು, ಕಾರ್ಮಿಕರಗುಂಪುಗಳು ಮತ್ತು ಕಾಯಕಬಂಧುಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿ:

(a) 10 ರಿಂದ 20 ಕಾರ್ಮಿಕರನ್ನು ಸಂಘಟಿಸಿ ಕಾಯಕ ಸಂಘಗಳೆಂದು ಹೆಸರಿಸುವುದು. ಪ್ರತಿ **ಕಾಯಕ ಸಂಘವು** ಒಬ್ಬ ಕೂಲಿಕಾರ / ಕಾರ್ಮಿಕನು ಅವರ ಗುಂಪಿನ ಮುಖ್ಯಸ್ಥನಾಗಿದ್ದು, ಅವನನ್ನು **ಕಾಯಕಬಂಧು** ಎಂದು ಹೆಸರಿಸುವುದು.

(b) ಒಂದು ಲಕ್ಷಕ್ಕಿಂತ ಹೆಚ್ಚು ಕಾಯಕಸಂಘಗಳನ್ನು ರಚಿಸಲಾಗಿರುತ್ತದೆ. ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯು ಅದನ್ನನುಸರಿ ಅವುಗಳಲ್ಲಿ ನೈಜವಾದ **ಕಾಯಕಬಂಧುಗಳನ್ನು** ಗುರ್ತಿಸಬೇಕು.

ತಾಲ್ಲೂಕುಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿ ಯನ್ನೊಳಗೊಂಡ ತಂಡವು ಕಾಯಕ ಬಂಧುಗಳೆಂದು ಹೇಳಿಕೊಳ್ಳುವ ಗುತ್ತಿಗೆದಾರರನ್ನು ಹೊರಹಾಕುವ ಏಕೈಕ ಉದ್ದೇಶದಿಂದ ಕಾಯಕಬಂಧುಗಳನ್ನು ಸಂದರ್ಶನ ನಡೆಸಿ ನಿಜವಾದ ಕಾರ್ಮಿಕರ ನ್ನು ಗುರ್ತಿಸತಕ್ಕದ್ದು. (ಈ ಉದ್ದೇಶಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಅದನ್ನು ಪರಿಶೀಲಿಸಿ ಪರಿಷ್ಕರಿಸತಕ್ಕದ್ದು) ಇದರ ಉದ್ದೇಶವು ಪ್ರತಿ ಗ್ರಾಮ ಪಂಚಾಯತಿಯಲ್ಲಿ **ಕಡೇಪಕ್ಷ ಒಬ್ಬ ನಿಜವಾದ ಕಾಯಕಬಂಧುವನ್ನು** ತಿಂಗಳ ಮಧ್ಯಾವಧಿಯೊಳಗೆ ಗುರ್ತಿಸಿ ನಂತರದಲ್ಲಿ ಅವರ ಸಂಖ್ಯೆ ಹೆಚ್ಚಿಸುವುದು.

(c) ಜಿಲ್ಲಾಪಂಚಾಯತಿಯ ಮುಖ್ಯಕಾರ್ಯನಿರ್ವಹಣೆ ಅಧಿಕಾರಿಯ ಕಾರ್ಯಕ್ರಮ ವೇಳಾಪಟ್ಟಿಯನ್ವಯ ಪ್ರತಿಯೊಂದು ಗ್ರಾಮಪಂಚಾಯತಿಯ ಪಂಚಾ ಯತ್ ಅಭಿವೃದ್ಧಿ ಅಧಿಕಾರಿಯು ಕಾಯಕಬಂಧುಗಳು, ಗ್ರಾಮಕೂಲಿ ಸಹಾ ಯಕರು(**ಇವರು ಕಾಯಕಬಂಧುಗಳಿಗಿಂತ ಭಿನ್ನವಾಗಿದ್ದು,** ಕಾಯಕ ಬಂಧು ಮತ್ತು ಗ್ರಾಮ ಪಂಚಾಯತಿಗಳ ನಡುವಿನ ಕೊಂಡಿಯಾಗಿರುವರು) ಜೊತೆ ಗೂಡಿ ಸಪ್ತಾಹಿಕಸಭೆಯನ್ನು ನಡೆಸತಕ್ಕದ್ದು, ಕೆಲಸಕ್ಕೆ ಬೇಡಿಕೆಯನ್ನುಉಂಟು ಮಾಡುವುದು ಮತ್ತು ಕೆಲಸಗಾರರು ಕೋರಿದಲ್ಲಿ ಕೆಲಸವನ್ನು ಪ್ರಾರಂಭಿಸು ವುದು ಮತ್ತು e-NMR ಹೊರಡಿಸುವುದು ಮತ್ತು ಕಾಮಗಾರಿ ಬಿಲ್ಲು ತಯಾರಿಸುವುದು.

(d) ಹೊರಗುತ್ತಿಗೆ ಇಂಜನಿಯರುಗಳು ಗ್ರಾಮಪಂಚಾಯತಿ ಸಭೆಯಲ್ಲಿ ಸಾಪ್ತಾಹಿಕ ಸಭೆಯಲ್ಲಿ ಹಾಜರಿದ್ದು ಪ್ರತಿವಾರದ ಕೆಲಸ/ಕೂಲಿಮಜೂರಿ ಬಿಲ್ಲುಗಳು ತಯಾರಿಕೆ ಮತ್ತು ಹೊಸಕಾಮಗಾರಿಗಳನ್ನು ಪ್ರಾರಂಭಿಸುವುದು ಖಚಿತಪಡಿಸಿಕೊಳ್ಳತಕ್ಕದ್ದು.

(e) ಪ್ರತಿಯೊಬ್ಬ ಬಾಧ್ಯಸ್ಥ ವ್ಯಕ್ತಿಯ ಜವಾಬ್ದಾರಿಗಳು ಮತ್ತು ಕೆಲಸ ಪೂರ್ಣಗೊಳಿಸುವ ಸಾಮರ್ಥ್ಯಗಳು.

### (A) ಪಂಚಾಯತಿ ಅಭಿವೃದ್ಧಿ ಅಧಿಕಾರಿ:

1. ಪ್ರತಿವಾರವು ಸಭೆ ನಡೆಸಿ ಮೇಲಿನ (ಸಿ) ಕ್ರಮಾಂಕದ ಕಾರ್ಯಾಂಶಗಳ ನಿರ್ವಹಣೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.
2. ಇಂಜನಿಯರ್ ಸಲ್ಲಿಸುವ ಕೂಲಿ ಮಜೂರಿ/ಕಾಮಗಾರಿ/ಸಾಮಗ್ರಿಗಳ ಬಿಲ್ಲುಗಳಿಗೆ ಹಣ ವರ್ಗಾವಣೆ ಆದೇಶ (FTO) ಗಳನ್ನು ಚಾಲನೆ ಕ್ರಿಯೆ ನೀಡುವುದು.
3. ಇಂಜನಿಯರ್ ಗೈರುಹಾಜರಾದಲ್ಲಿ ಅಥವಾ ಕಾಮಗಾರಿಯ ಬಿಲ್ ತಯಾರಿಸುವಲ್ಲಿ ವಿಫಲ ವಾದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ವರದಿ ಮಾಡುವುದು.
4. ಗ್ರಾಮಕೂಲಿ ಸಹಾಯಕರ ಮೂಲಕ ಬರುವ ಎಲ್ಲಾ ಕೆಲಸಗಳ ಬೇಡಿಕೆಗೆ e-NMR ಹೊರಡಿಸುವುದು ಮತ್ತು ವಾರದ ಸಭೆಯಲ್ಲಿ ಗ್ರಾಮ ಕೂಲಿ ಸಹಾಯಕರಗೆ ನೀಡುವುದು.
5. ಗ್ರಾಮಕೂಲಿ ಸಹಾಯಕರಿಂದ ಭರ್ತಿಮಾಡಿದ e-NMRಗಳನ್ನು NREGAsoftಗೆ ಅಳವಡಿಸಿಕೊಳ್ಳುವುದು ಮತ್ತು ಇಂಜನಿಯರುಗಳ ಅಳತೆ ಅನುಸರಿಸಿ ಹಣ ವರ್ಗಾವಣೆ ಆದೇಶ (FTO)ಗಳನ್ನು ಚಾಲನೆ ಕ್ರಿಯೆ ನೀಡುವುದು.
6. ಪ್ರತಿದಿನವೂ ಪ್ರತಿ ಸಮುದಾಯ ಕಾಮಗಾರಿ ಪ್ರಗತಿಯನ್ನು ಮೊಬೈಲ್ಆಪ್‌ದಲ್ಲಿ ದಾಖಲಿಸುವುದು. ಪ್ರತಿದಿನವೂ ಸಮುದಾಯದ ಕಾಮಗಾರಿಯ ಫೋಟೋಗಳನ್ನು ತೆಗೆಯುವುದನ್ನು ಖಚಿತಪಡಿಸಿಕೊಳ್ಳುವುದು.

### (B) ಗ್ರಾಮ ಕೂಲಿ ಸಹಾಯಕ:

1. ಕಾರ್ಮಿಕ ಗುಂಪುಗಳು / ಕಾಯಕ ಬಂಧುಗಳೊಂದಿಗೆ ಪರಸ್ಪರ ಸ್ಪಂದಿಸುವುದು ಮತ್ತು ಪ್ರತಿವಾರವೂ ಪ್ರತಿ ಗುಂಪಿನಿಂದ ಸಂಗ್ರಹಿಸಿದ ಕೆಲಸದ ಬೇಡಿಕೆಯ (ಫಾರಂ–6) ಕಾಯಕ ಸಂಘಗಳಿಂದ ಪಡೆದ್ದು ಗ್ರಾಮಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ವಾರದ ಸಭೆಗೆ ಹಾಜರುಪಡಿಸಬೇಕು.
2. ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ವಾರದ ಸಭೆಯಲ್ಲಿ ಖಾಲಿ ಮಸ್ಟರ್ ರೋಲ್‌ನ ಪ್ರತಿಗಳನ್ನು ಸಂಗ್ರಹಿಸಿಕೊಳ್ಳುವುದು ಮತ್ತು ಅವುಗಳನ್ನು ಕೂಲಿಕಾರರಿಗೆ/ಕಾಯಕ ಸಂಘಗಳಿಗೆ ನೀಡುವುದು. ಹಾಗೂ ಅವರನ್ನು ಕಾಮಗಾರಿ ಸ್ಥಳದಲ್ಲಿ ಕೆಲಸಕ್ಕೆ ಹಾಜರಾಗಲು ಸೂಚಿಸುವುದು.

3. ಭರ್ತಿಮಾಡಿದ ಮಸ್ಟರ್‌ರೋಲ್ (e-NMR) (ಹಿಂದಿನ ವಾರದ ಗ್ರಾಮಸಭೆಯಿಂದ ತಂದದ್ದು) ಗಳನ್ನು ಗ್ರಾಮಪಂಚಾಯತಿಗೆ ತರುವುದು. ಈ ಮಸ್ಟರ್ ರೋಲ್‌ಗಳಲ್ಲಿ ಕಾರ್ಮಿಕರ ಹಾಜರಾತಿ ತುಂಬುವುದು. ಭರ್ತಿಮಾಡಿದ e-NMR ನ್ನು ಸಂಬಂಧಪಟ್ಟ ಕಾರ್ಮಿಕ ಗುಂಪುಗಳ ಕಾಯಕ ಬಂಧುಗಳು/ಮೇಟ್‌ಗಳ ಮೂಲಕ ಗ್ರಾಮ ಕೂಲಿಸಹಾಯಕರಿಗೆ ನೀಡುವುದು.
4. ಗ್ರಾಮ ಪಂಚಾಯತಿಯಿಂದ ಪ್ರತಿವಾರವು ಕೂಲಿಬಿಲ್ಲುಗಳನ್ನು ತಯಾರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇಂಜಿನಿಯರ್‌ರವರು ಯಾವ ಕಾಮಗಾರಿಸ್ಥಳಕ್ಕೆ ಭೇಟಿಮಾಡಿದ್ದಾರೆ/ ಅಥವಾ ಮಾಡಿಲ್ಲ ಎನ್ನುವ ಮಾಹಿತಿಯನ್ನು ಪಡೆದು ಸಲ್ಲಿಸುವುದು.
5. ಪ್ರತಿದಿನವೂ ಪ್ರತಿ ಕಾಮಗಾರಿ ನಡೆಯುವ ಸ್ಥಳದ ಕಾಮಗಾರಿಯ ಜಿಪಿಎಸ್ ಫೋಟೋಗಳನ್ನು ತೆಗೆಯುವುದು.

**(C) ಕಾಯಕ ಬಂಧುಗಳು/ಕಾರ್ಮಿಕ ನಾಯಕರು:**

1. ಗ್ರಾಮಕೂಲಿ ಸಹಾಯಕರ ಜೊತೆಯಲ್ಲಿ ಗ್ರಾಮ ಪಂಚಾಯತಿಯಲ್ಲಿ ನಡೆಯುವ ವಾರದ ಸಭೆಗೆ ಹಾಜರಾಗುವುದು.
2. ಪ್ರತಿವಾರವು ಗ್ರಾಮಕೂಲಿ ಸಹಾಯಕರು /ಗ್ರಾಮ ಪಂಚಾಯಿತಿ ವತಿಯಿಂದ e-NMR (ಖಾಲಿ) ಗಳನ್ನು ಪಡೆಯುವುದು ಹಾಗೂ ತನ್ನ ಗುಂಪನ್ನು ಕಾಮಗಾರಿಸ್ಥಳಕ್ಕೆ ಕರೆತರುವುದು.
3. ಕಾಮಗಾರಿ ಸ್ಥಳದಲ್ಲಿ ಅವನ/ಅವಳ ಗುಂಪಿನ ಹಾಜರಾತಿಯನ್ನು ದಾಖಲಿಸುವುದು ಹಾಗೂ ಕಾಮಗಾರಿ ಸ್ಥಳದಲ್ಲಿಯೇ ಖಾಲಿ e-NMR ಗಳನ್ನು ಭರ್ತಿಮಾಡುವುದು.
4. ವಾರದ ಸಭೆಗೆ ಭರ್ತಿಮಾಡಿದ e-NMR ಗಳನ್ನು ತರುವುದು ಅಥವಾ ಅವುಗಳನ್ನು ಗ್ರಾಮ ಪಂಚಾಯಿತಿಯ ವಾರದ ಸಭೆಗೆ ತರುವ ಸಲುವಾಗಿ ಗ್ರಾಮ ಕೂಲಿ ಸಹಾಯಕರಿಗೆ ನೀಡುವುದು.
5. ಪ್ರತಿವಾರವು ಗ್ರಾಮ ಕೂಲಿ ಸಹಾಯಕರು ಗ್ರಾಮಪಂಚಾಯಿತಿಗೆ ಅವನ/ಅವಳ ಕಾರ್ಮಿಕರ ಗುಂಪಿನ ಕೆಲಸದ ಬೇಡಿಕೆಯನ್ನು ನೀಡುವುದು.
6. ವೆಬ್‌ಸೈಟ್‌ನಲ್ಲಿರುವ "Mobile App-M-NREGA DAILY" ಬಳಸಿ ಪ್ರತಿದಿನವು ಕಾಮಗಾರಿ GPS ಫೋಟೋಗಳನ್ನು ತೆಗೆಯಲು ಗ್ರಾಮಕೂಲಿ ಸಹಾಯಕರಿಗೆ ಸಹಾಯಮಾಡುವುದು.

**D) ಇಂಜನೀಯರ್/ಕೃಷಿ ಪದವೀಧರರು:**

1. ಗ್ರಾಮ ಪಂಚಾಯತಿಯ ವಾರದ ಸಭೆಗೆ ಹಾಜರಾಗುವುದು ಮತ್ತು ಕಾಮಗಾರಿ ಬಿಲ್ಲುಗಳನ್ನು ಸಲ್ಲಿಸುವುದು.
2. ಪ್ರತಿವಾರವೂ ಪ್ರತಿ ಸಮುದಾಯದ ಸಮೂದಾಯಿಕ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡುವುದು ಹಾಗೂ ಅದರ ಅಳತೆ ತೆಗೆದುಕೊಳ್ಳುವುದು. ವಾರಾಂತ್ಯಕ್ಕೆ ಮಸ್ಟರ್ ರೋಲ್‌ಗಳನ್ನು ಮುಕ್ತಾಯಗೊಳಿಸಿ ಅದು ಮುಕ್ತಾಯಗೊಂಡ ವಾರದೊಳಗೆ ಕೂಲಿ ಸಂದಾಯ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.
3. ಗ್ರಾಮ ಪಂಚಾಯತಿಯು ಕಾಮಗಾರಿಯನ್ನು ಪ್ರಾರಂಭಿಸಲು ಅನುವಾಗುವಂತೆ ಕಾಮಗಾರಿ ಅಂದಾಜನ್ನು ನೀಡುವುದು.
4. ಎಲ್ಲೆಲ್ಲಿ ಗ್ರಾಮಪಂಚಾಯಿತಿಯೂ ಹೊಸ ಸಾಮೂದಾಯಿಕ ಕೆಲಸಗಳಿಗೆ ಕಾಮಗಾರಿ ಚಾಲನ ಆದೇಶವನ್ನು ಹೊರಡಿಸುವುದೋ (ಕೆಲಸದ ಬೇಡಿಕೆಯನ್ನು ಪೂರೈಸುವ ಸಲು ವಾಗಿ) ಅಂತಹ ಕಾಮಗಾರಿ ಸ್ಥಳದಲ್ಲಿ ಅಗತ್ಯ ಗುರುತುಗಳನ್ನು ಮಾಡುವುದು.
5. ಪ್ರತಿಕಾಮಗಾರಿ ಸ್ಥಳಭೇಟಿ ಸಂದರ್ಭದಲ್ಲಿ "MobileApp-M-NREGA DAILY" ಅನ್ನು ಬಳಸಿಕೊಂಡು ಕಾಮಗಾರಿಯ ಸ್ಥಳದ GPS ಫೋಟೋಗಳನ್ನು ತೆಗೆಯುವುದು.
6. E-estimate ಉಪಯೋಗಿಸಿ end2end and e-measurement ನಿಂದ E-estimate ಪಡೆಯುವುದು.

### (ii) ಗ್ರಾಮ ಪಂಚಾಯತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ:

(a) ಗ್ರಾಮ ಪಂಚಾಯಿತಿಯು ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನದ ಪ್ರಥಮ ಘಟಕವಾಗಿರುತ್ತದೆ.

(b) ಗ್ರಾಮಪಂಚಾಯತಿಯು ಆ ಗ್ರಾಮದ ಸಾಮಾನ್ಯನಿವಾಸಿಗಳಿಗೆ ಕುಟುಂಬವಾರು ಜಾಬ್ ಕಾರ್ಡ್‌ಗಳನ್ನು ಹೊರಡಿಸುತ್ತದೆ (ಸಾಮಾನ್ಯವಾಗಿ ಒಂದುಪ್ರದೇಶದ ಮತದಾರರಿಗೆ ಅನ್ವ ಯಿಸುವ ಮಾನದಂಡವೇ ಇಲ್ಲಿಯೂ ಅನ್ವಯಿಸುತ್ತದೆ).

(c) ಕಾಮಗಾರಿಗಳನ್ನು ಆಯ್ಕೆಮಾಡಲು ಗ್ರಾಮಸಭೆ ಮತ್ತು ವಾರ್ಡ್‌ಸಭೆ ನಡೆಸುವುದು. ಗ್ರಾಮ ಪಂಚಾಯಿತಿಯು ಗ್ರಾಮಸಭೆ ಮತ್ತು ವಾರ್ಡ್‌ಸಭೆಗಳಿಂದ ಅನುಮೋದಿಸಲ್ಪಟ್ಟ ಕಾಮಗಾರಿ ಗಳನ್ನು ಮಾತ್ರ ಪ್ರಾರಂಭಿಸುವುದು. ಆದರೆ ಆ ಕಾಮಗಾರಿಗಳು ಮಹಾತ್ಮಗಾಂಧಿ ನರೇಗಾ ಯೋಜನೆ ಮಾರ್ಗಸೂಚಿಗಳು/ಅಧಿನಿಯಮದಲ್ಲಿ ಅನುಮತಿಸಿದವುಗಳಾಗಿರಬೇಕು.

(d) ಗ್ರಾಮಸಭೆ/ವಾರ್ಡ್ ಸಭೆಗಳಿಂದ ಅನುಮೋದಿಸಲ್ಪಟ್ಟು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಅನುಮೋದಿಸಲ್ಪಟ್ಟು ಕಾಮಗಾರಿ ಗುಂಜದಲ್ಲಿ ಸೇರಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾನೆ. (ತಾಲ್ಲೂಕುಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಜಿಲ್ಲಾಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಕ್ಷಣವೇ ಅನುಮೋದನೆ ನೀಡತಕ್ಕದ್ದು. ಟಿಪ್ಪಣಿ:ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿಯು 15 ದಿನಗಳ ಒಳಗಾಗಿ ಕಾಮಗಾರಿ ಪಟ್ಟಿಗೆ ಅನುಮೋದನೆ ನೀಡದಿದ್ದಲ್ಲಿ, ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿಗೆ ಸಲ್ಲಿಸಿದ ಕಾಮಗಾರಿಗಳು ಅನುಮೋದನೆಯಾಗಿವೆ ಎಂದು ಪರಿಭಾವಿಸತಕ್ಕದ್ದು.

(e) ಪಂಚಾಯತ್ ಅಭಿವೃದ್ಧಿಅಧಿಕಾರಿಯ ಇತರ ಕರ್ತವ್ಯ/ಜವಾಬ್ದಾರಿಗಳು ಮೇಲೆ ಈಗಾಗಲೇ ವಿವರಿಸಿದೆ.

(f) ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಗ್ರಾಮಪಂಚಾಯಿತಿಯು ಒಪ್ಪಿಗೆಗೆ ಸಲ್ಲಿಸುವುದು; ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು 15 ದಿನಗಳೊಳಗೆ ಕ್ರಿಯಾಯೋಜನೆಗೆ ಒಪ್ಪಿಗೆ ನೀಡದಿದ್ದಲ್ಲಿ, ಅದು ತಂತಾನೆ ಅನುಮೋದಿಸಲ್ಪಟ್ಟಿದೆ ಎಂದು ಪರಿಗಣಿಸತಕ್ಕದ್ದು.

**ಟಿಪ್ಪಣಿ:** ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯು 15 ದಿನಗಳ ನಂತರವೂ ಕ್ರಿಯಾ ಯೋಜನೆಯನ್ನು ಅನುಮೋದಿಸಲು ವಿಫಲವಾದಲ್ಲಿ ಗ್ರಾಮ ಪಂಚಾಯತಿಯು ಗ್ರಾಮಸಭೆ/ ವಾರ್ಡ್‌ಸಭೆಯಲ್ಲಿನ ಒಪ್ಪಿಗೆಯ ಕಾಮಗಾರಿಗಳ ಮೇಲೆ ಕ್ರಮವಹಿಸುವುದು.

### (iii) ಹೊರಗುತ್ತಿಗೆಯ ಇಂಜಿನಿಯರು/ಕೃಷಿ/ತೋಟಗಾರಿಕೆ/ಅರಣ್ಯ ಪದವೀಧರರು:

(a) ಅವರ ಕೆಲವೊಂದು ಕರ್ತವ್ಯಗಳನ್ನು (ಹೆಚ್ಚಿನ ಭಾಗ) ಮೇಲೆ ವಿವರಿಸಲಾಗಿದೆ.

(b) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ವಾರದ ಪರಿಶೀಲನಾ ಸಭೆಗೆ ಹಾಜರಾಗುವುದು ಹಾಗೂ ಕಾಲೋಚಿತ ಮಾಹಿತಿಯನ್ನು ನೀಡುವುದು.

(c) end2end ತಂತ್ರಾಂಶದಲ್ಲಿ ಅವರ ಸ್ವಯಂ-ಮೌಲ್ಯಮಾಪನದ ಫಾರಂ ಭರ್ತಿಮಾಡುವುದು ಏಕೆಂದರೆ ಅದು ಅವರ ಸಾಧನೆಯ ಸಾಧನೆಯ ವಿವರವನ್ನು ಒದಗಿಸುತ್ತದೆ.

(d) ಮಸ್ಟರ್ ರೋಲ್‌ಗಳ ಬಗ್ಗೆ ಮೇಲ್ವಿಚಾರಣೆ ವಹಿಸುವುದು ಮತ್ತು ಬಾಕಿ ಉಳಿದಿರುವ ಬಿಲ್ಲುಗಳನ್ನು ಸರಿಪಡಿಸುವುದು.

### (iv) ತಾಲ್ಲೂಕು ಸಹಾಯಕ ನಿರ್ದೇಶಕರು:

(a) ಕನಿಷ್ಠ 18 ದಿನಗಳ ಕ್ಷೇತ್ರ ಪ್ರವಾಸ ಕೈಗೊಂಡು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ

ಯೋಜನೆಯ ಅನುಷ್ಠಾನದ ಪೂರ್ಣಾವಧಿಯ ಪರಿಶೀಲನೆ ಕೈಗೊಳ್ಳತಕ್ಕದ್ದು. (ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ವಾಹನವನ್ನು ಒದಗಿಸಲಾಗಿರುತ್ತದೆ.)

(b) ತಾಲ್ಲೂಕು ಸಹಾಯಕ ನಿರ್ದೇಶಕರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಾಗಿ ಕಾರ್ಯನಿರ್ವಹಿಸುವರು.

(c) ತಾಲ್ಲೂಕು ತಾಂತ್ರಿಕ ಸಮನ್ವಯಾಧಿಕಾರಿಯೊಂದಿಗೆ (ಹೊರಗುತ್ತಿಗೆ)ರ ಕಾಮಗಾರಿಯ ಅಳತೆ ಪ್ರಮಾಣ (ವಿಶೇಷವಾಗಿ ಸಮುದಾಯದ ಕಾಮಗಾರಿ) ಮಾಡುವುದು. ಅದರಿಂದಾಗಿ ಪ್ರತಿಯೊಂದು ಕಾಮಗಾರಿಯ ಬಿಲ್ಲುಗಳನ್ನು ಪ್ರತಿವಾರವೇ ತಯಾರಿಸಿ ಕೂಲಿಸಂದಾಯವಾಗುವುದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ.

(d) ಮಸ್ಟರ್‌ರೋಲ್‌ಗಳ ತಯಾರಿಕೆಯ ಮೇಲೆ ನಿಗಾ ಇಡುವುದು ಹಾಗೂ ವಾರದಲ್ಲಿ ಕೂಲಿ ಸಂದಾಯ ವಾಗುವುದನ್ನು ಖಚಿತಪಡಿಸಿಕೊಳ್ಳುವುದು.

(e) ವಾರಕೊಮ್ಮೆ ಗ್ರಾಮಪಂಚಾಯತಿಯಲ್ಲಿ ಕೂಲಿದಿವಸ ಸಭೆನಡೆಸುವಲ್ಲಿ ವಿಫಲರಾಗುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕುರಿತು ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿಯವರಿಗೆ (ನರೇಗಾ ಉಸ್ತುವಾರಿ) ವರದಿ ಮಾಡುವುದು.

| | | |
|---|---|---|
| (f) | ಪ್ರತಿ : ತಿಂಗಳ ಗುರಿ | ಸಹಾಯಕ ನಿರ್ದೇಶಕರು ಕನಿಷ್ಠ 10 ಗ್ರಾಮಪಂಚಾಯತಿಗಳನ್ನು ಭೇಟಿಮಾಡಬೇಕು. ಮಹಾತ್ಮಗಾಂಧಿ ನರೇಗಾ ಯೋಜನೆಗೆ ಸಂಬಂಧಿಸಿದಂತೆ, ಎಲ್ಲಾ ಸಮುದಾಯದ ಕಾಮಗಾರಿ ಕಡತಗಳನ್ನು ಹಾಗೂ ವೈಯಕ್ತಿಕ ಕಾಮಗಾರಿಗಳ ಕಡತಗಳನ್ನು ಪರಿಶೀಲಿಸತಕ್ಕದ್ದು. ಗ್ರಾಮ ಪಂಚಾಯತಿಯ ಭೇಟಿಸಮಯದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಪ್ರತಿ ಕೆಲಸದ ಕಡತ "Mobile App" ಉಪಯೋಗಿಸಿಕೊಂಡು ಜಿಯೋ ಸ್ಟಾಂಪ್ ಫೋಟೋವನ್ನು ಅಪ್‌ಲೋಡ್ ಮಾಡಬೇಕು. ಪ್ರತಿ e-NMRಗೆ ಸಹಾಯಕ ನಿರ್ದೇಶಕರು ಕೌಂಟರ್ ಸಹಿ ಮಾಡಬೇಕು. |

## (v) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯಕ್ರಮ ಅಧಿಕಾರಿ:

(a) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಸೆಕ್ಷನ್ 15 ರನ್ವಯ ಮಹಾತ್ಮ ಗಾಂದಿ ನರೇಗಾ ಯೋಜನೆಯು ಅಧಿನಿಯಮ, ನಿಯಮಗಳು ಮತ್ತು ಮಾರ್ಗಸೂಚಿ ಗಳನ್ವಯ ಅನುಷ್ಠಾನಗೊಳಿಸುವುದು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯ ಶಾಸನಬದ್ಧ ಕರ್ತವ್ಯವಾಗಿರುತ್ತದೆ.

(b) ಸಕಾಲದಲ್ಲಿ ಹಾಗೂ ವಾರಕ್ಕೊಮ್ಮೆ ಕೂಲಿ ಸಂದಾಯವಾಗುವುದನ್ನು ಖಚಿತಪಡಿಸಿಕೊಳ್ಳುವುದು.

(c) ಸಾಮಗ್ರಿಗಳ ಪಾವತಿಯನ್ನು ವಿಶ್ಲೇಷಿಸುವುದು ಹಾಗೂ ಒಂದು ವೇಳೆ ಏನಾದರೂ ತಪ್ಪಾಗಿದ್ದಲ್ಲಿ ಅದನ್ನು ಸರಿಪಡಿಸಲು ಕ್ರಮವಹಿಸುವುದು. ವರ್ಷದಲ್ಲಿ ಸರಬರಾಜುದಾರರಿಗೆ ರೂ. 17 ಲಕ್ಷಗಳಿಗಿಂತ ಹೆಚ್ಚಿನ ಮೊತ್ತದ ಎಲ್ಲಾ ಪಾವತಿಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಅನುಮೋದನೆಯೊಂದಿಗೆ ಮಾಡತಕ್ಕದ್ದು (ಇದನ್ನು e-FMS ಬೆಂಬಲಿಸುತ್ತದೆ.)

(d) ಪಂಚಾಯತ್ ಅಭಿವೃದ್ಧಿ ಅಧಿಕಾರಿ+ ಇಂಜನಿಯರ್ಸ್+ ಗ್ರಾಮ ಕೂಲಿಸಹಾಯಕರು + ಎಂಐಎಸ್ ಕೋ ಆರ್ಡಿನೇಟರ್+ತಾಲ್ಲೂಕು ಸಹಾಯಕ ನಿರ್ದೇಶಕರು + ನರೇಗಾ ನೋಡಲ್‌ಸಿಬ್ಬಂದಿಯೊಂದಿಗೆ ವಾರದ ಪರಿಶೀಲನಾ ಸಭೆಯನ್ನು ನಡೆಸುವುದು. ಮತ್ತು ನಡವಳಿಗಳನ್ನು ಹೊರಡಿಸುವುದು ಹಾಗೂ ಈ ಕೆಳಕಂಡ ಕ್ರಿಯೆಗಳಲ್ಲಿ ಲೋಪ / ತಪ್ಪುಗಳನ್ನು ಎಸಗುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದು:–

❖ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸಕಾಲದಲ್ಲಿ ಕೂಲಿ ಪಾವತಿ (ಪ್ರತಿವಾರ) ಮಾಡುವುದು.

❖ ಇಂಜನೀಯರುಗಳು ಕಾಮಗಾರಿ ಅಂದಾಜುಗಳು ಮತ್ತು ಕಾಮಗಾರಿ ಸ್ಥಳದ ಕೆಲಸದ ಮಾರ್ಕ್ ಔಟ್

ಗಳನ್ನು ನೀಡಬೇಕು.

- ❖ ಇಂಜನೀಯರುಗಳು ಮತ್ತು ತಾಂತ್ರಿಕ ಸಹಾಯಕರಿಂದ ವಾರಕ್ಕೊಮ್ಮೆ ಬಿಲ್ಲುಗಳನ್ನು ಪಡೆಯುವುದು.
- ❖ ಗ್ರಾಮ ಕೂಲಿಸಹಾಯಕರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಮಸ್ಟರ್ –ರೋಲ್‌ಗಳನ್ನು ಪಡೆಯುವುದು.
- ❖ ಪ್ರತಿದಿನವು ಕಾಮಗಾರಿ ಪ್ರಗತಿಯನ್ನು "Mobile App" ನಲ್ಲಿ ನಮೂದಿಸುವುದು.
- ❖ ಶೂನ್ಯ ಮಾನವದಿನಗಳ ಸೃಜಿಸುವ ಗ್ರಾಮಪಂಚಾಯತಿಗಳ ಮೇಲೆ ನಿಗಾ ಇಡುವುದು.

(e) ಪ್ರತಿದಿನವೂ "Mobile App" ದಾಖಲಾಗಿರುವುದನ್ನು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಸಲ್ಲಿಕೆಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸುವುದು.

(f) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿತಿಂಗಳಲ್ಲಿ ಕನಿಷ್ಠ 10 ಗ್ರಾಮ ಪಂಚಾಯತಿಗಳನ್ನು ಭೇಟಿಮಾಡುವುದು. ಗ್ರಾಮಪಂಚಾಯತಿಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸುವುದು ಅವುಗಳು ಯಾವುವೆಂದರೆ;

- ❖ ಮಸ್ಟರ್ ರೋಲ್ ದೃಢೀಕರಿಸುವುದು, ಭರ್ತಿಮಾಡುವುದು, ಹಿಂತಿರುಗಿಸುವುದು, ಹಣ ಪಾವತಿ (ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯು ಪರಿಶೀಲಿಸುವ ಪ್ರತಿಯೊಂದು e-NMR ಪುಟಕ್ಕೆ ಕೌಂಟರ್ ಸಹಿ ಹಾಕುವುದು.)
- ❖ ಸಾಮಗ್ರಿಗಳ ಸಂಗ್ರಹಣೆ ಮತ್ತು ಪಾವತಿಯು ಕ್ರಮಾನುಸಾರ ಆಗಿರುವುದನ್ನು– ವೋಚರ್‌ಗಳು, ಸಂದಾಯಗಳನ್ನು ಕ್ರಾಸ್ ಮಾಡಿರುವುದು ಇತ್ಯಾದಿ.

❖ ಈ 10 ಗ್ರಾಮ ಪಂಚಾಯತಿಗಳು ತಾಲ್ಲೂಕು ಪಂಚಾಯತಿಯ ಸಹಾಯಕ ನಿರ್ದೇಶಕರು ಭೇಟಿ ನೀಡಿರುವ 10 ಗ್ರಾಮಪಂಚಾಯತಿಗಳಿಂದ ಬೇರೆಯವು ಆಗಿರಬೇಕು.

| |
|---|
| ಅಂತಹ ಗ್ರಾಮಗಳ ಭೇಟಿ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಇವರು "Mobile App" ಬಳಸಿಕೊಂಡು ಜಿಯೋ ಸ್ಟಾಂಪ್ಡ್ ಫೋಟೋವನ್ನು ತೆಗೆದುಕೊಳ್ಳತಕ್ಕದ್ದು. |

(g) **ಟಿಪ್ಪಣಿ:** ಮಹಾತ್ಮಗಾಂಧಿ ನರೇಗಾ ಯೋಜನೆ ಮಾರ್ಗಸೂಚಿಗಳು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು 100% ಕಾಮಗಾರಿಗಳನ್ನು ತನಿಖೆಮಾಡಲು ನಿಗದಿಪಡಿಸಿರುತ್ತದೆ. ಅವರು ಈ ತನಿಖೆಗಾಗಿ ವ್ಯವಸ್ಥೆಮಾಡುವುದು. ಅವರಿಂದಲೇ ತಿಂಗಳಿಗೆ ಕನಿಷ್ಠ 30 ಕಾಮಗಾರಿಗಳ ಪರಿಶೀಲಿಸಬೇಕು.

(h) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಇವರು ಗ್ರಾಮಪಂಚಾಯತಿಯಲ್ಲಿನ ಪ್ರಗತಿಯನ್ನು ಈ ಕೆಳಕಂಡ ಅಂಶಗಳ ಮೇಲೆ ಪ್ರತಿ ದಿನವೂ ಪರಿಶೀಲಿಸತಕ್ಕದ್ದು.

* ವಾರದ ಕೂಲಿದಿವಸವನ್ನು ಆಚರಿಸುವುದು–> ತಪ್ಪಿತಸ್ಥ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿರುದ್ಧಕ್ರಮ ಕೈಗೊಳ್ಳುವುದು.

* ಸರಿಯಿರುವ ಮಸ್ಟರ್ ರೋಲ್‌ಗಳ ಮೇಲೆ ಕೂಲಿ ಪಾವತಿಮಾಡುವುದು.

* ಪ್ರತಿವಾರವು ಮಸ್ಟರ್ ರೋಲ್‌ಗಳನ್ನು ಗ್ರಾಮ ಪಂಚಾಯತಿಗೆ ಹಿಂತಿರುಗಿಸುವುದು.

| |
|---|
| ಪ್ರತಿ ಗ್ರಾಮಪಂಚಾಯತಿಯಿಂದ ಪ್ರತಿ ಕಾಮಗಾರಿಗೆ ಪ್ರತಿವಾರವು NREGAsoftನಲ್ಲಿ ಹಾಜರಾತಿಯನ್ನು ಮಸ್ಟರ್ ರೋಲ್‌ನಲ್ಲಿ ದಾಖಲಿಸುವುದು. "ಸಮುದಾಯದ ಕಾಮಗಾರಿಗಳಿಗೆ ಇದು ಬಹಳ ಪ್ರಾಮುಖ್ಯದ ವಿಷಯವಾಗಿದೆ." |

* ಪರಿಶೀಲನೆಯ ದಿನದಂದು ಯಾವ ಗ್ರಾಮ ಪಂಚಾಯತಿಯಲ್ಲಿ "ಶೂನ್ಯ" ಪ್ರಗತಿ ಇದೆ– ಏಕೆ ಅನುಸರಣೆಯನ್ನು ಸಹಾಯಕ ನಿರ್ದೇಶಕರು/ನೋಡಲ್ ಅಧಿಕಾರಿಗೆ ಕಳುಹಿಸುವುದು.

### (vi) ತಾಲ್ಲೂಕು ಎಂಐಎಸ್ ಕೋ ಆರ್ಡಿನೇಟರ್:

(a) ಡಿ.ಎಸ್.ಸಿ ಡಾಂಗಲ್ಸ್‌ಗಳ ಅವಧಿ ಮೀರುವ ಎರಡು ತಿಂಗಳ ಮುಂಚಿತವಾಗಿಯೇ ಮಂಡಿಸುವುದು. ಆದ್ದರಿಂದ ಡಿ.ಎಸ್.ಸಿ ಡಾಂಗಲ್ಸ್‌ಗಳ ಸ್ಥಿತಿಗತಿಗಳ ಕುರಿತು ಪ್ರತಿದಿನ ನಿಗಾ ಇಡುವುದು. ತಾಲ್ಲೂಕಿನಲ್ಲಿ ಲಭ್ಯ ಮಾಡಿರುವ ಪ್ರತಿ ಡಿ.ಎಸ್.ಸಿ ಡಾಂಗಲ್ಸ್‌ಗಳ ಸ್ಥಿತಿಗತಿ ಪರಿಶೀಲಿಸುವುದು.

(b) ಹೊಸದಾಗಿ ಚುನಾಯಿತರಾಗುವ ಗ್ರಾಮ ಪಂಚಾಯತಿ ಅಧ್ಯಕ್ಷರ ಅಥವಾ ಇನ್ನಾವುದೇ ಬದಲಾವಣೆಯ ಸಂದರ್ಭದಿಂದಾಗಿ ಅನಿರೀಕ್ಷಿತವಾಗಿ ಡಿ.ಎಸ್.ಸಿ ಡಾಂಗಲ್ಸ್‌ಗಳ ಅಗತ್ಯತೆ ಉಂಟಾದಾಗ (ಹೊಸ ಕಾರ್ಯನಿರ್ವಾಹಕ ಅಧಿಕಾರಿ ಇತ್ಯಾದಿ) ಅಂತಹ ಸಂದರ್ಭ ಒದಗಿ ಬಂದ ಅಥವಾ ಹೊಸ ಅಧ್ಯಕ್ಷರ ಆಯ್ಕೆಯಾದ 48 ಗಂಟೆಗಳೊಳಗೆ ಡಿ.ಎಸ್.ಸಿ. ಅರ್ಜಿಯನ್ನು ತುಂಬಿ ಸಲ್ಲಿಸುವುದು.

(c) NREGA soft, end2end ಮತ್ತು Mobile App ಗಳ ಮೂಲಕ ಪ್ರತಿಯೊಂದು ಗ್ರಾಮ ಪಂಚಾಯತಿಯ ಪ್ರಗತಿಯನ್ನು ಪರಿಶೀಲಿಸುವುದು.

(d) ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಪ್ರತಿದಿನ ವರದಿಗಳ ವೀಕ್ಷಣೆ ಕೈಗೊಳ್ಳುವುದು.

❖ ಅವಧಿ ಮೀರಿರುವ ಮಸ್ಟರ್ ರೋಲ್‌ಗಳು–ತಕ್ಷಣವೇ ಕ್ರಮಕೈಗೊಳ್ಳುವುದು.

❖ ಬಾಕಿ ಇರುವ ಕೂಲಿ ಪಾವತಿಗಳು– ಗ್ರಾಮಪಂಚಾಯತಿವಾರು ಹಾಗೂ ಕಾಮಗಾರಿವಾರು.

❖ ಬಾಕಿ ಇರುವ ಸಾಮಗ್ರಿಗಳ ಪಾವತಿಗಳು– ಗ್ರಾಮಪಂಚಾಯತಿವಾರು ಹಾಗೂ ಕಾಮಗಾರಿವಾರು.

❖ ಕ್ರಮಬದ್ದವಾಗಿಲ್ಲದ ಸಾಮಗ್ರಿಗಳ ಸಂದಾಯ– ಸಾಮಗ್ರಿಗಳ ಸಂದಾಯದ ವರದಿಗಳು ಹೊರತುಪಡಿಸಿ.

❖ ಸಾಮಾಗ್ರಿಗಳ ಸರಬರಾಜು ಸಂಬಂಧದಲ್ಲಿ ಒಬ್ಬ ಸರಬರಾಜುದಾರನು ರೂ.1.00 ಲಕ್ಷಕ್ಕಿಂತ ಹೆಚ್ಚು ಸಂದಾಯ ಪಡೆದಿರುವುದು. –> ಪಟ್ಟಿ ತಯಾರಿಸುವುದು

(e) ಎಲ್ಲಾ ತಾಂತ್ರಿಕ ಸಮಸ್ಯೆಗಳು– ಡಿಎಂಐಎಸ್/ಕೇಂದ್ರ ಕಛೇರಿಯೊಂದಿಗೆ ಸಮನ್ವಯತೆ ಸಾಧಿಸುವುದು.

(f) ಬಾಕಿ ಇರುವ ನಿಧಿ ವರ್ಗಾವಣೆ ಆದೇಶಗಳ (ಎಫ್‌ಟಿಒ) ಮೇಲೆ ನಿಗಾ ಇಡುವುದು – ಎಲ್ಲಾ ಹಂತಗಳ ಲ್ಲಿಯೂ ಅಂದರೆ *ಪಂಚಾಯತಿ ಅಭಿವೃದ್ಧಿ ಅಧಿಕಾರಿ * ಗ್ರಾಮಪಂಚಾಯತಿ ಅಧ್ಯಕ್ಷರು *ಕಾರ್ಯ ನಿರ್ವಾಹಕ ಅಧಿಕಾರಿ *ಎನ್‌ಐಸಿ *ಬ್ಯಾಂಕ್ ಫಲಾನುಭವ ಹಂತಗಳು.

(g) end2end ತಂತ್ರಾಂಶದ ಮೂಲಕ ಹೊರಗುತ್ತಿಗೆ ಸಿಬ್ಬಂದಿಯ ಕಾರ್ಯನಿರ್ವಾಹಣೆ ವರದಿಯ ಪ್ರಿಂಟ್ ಔಟ್ ಪಡೆಯುವುದು.

(h) ಹೊರಗುತ್ತಿಗೆ ಸಿಬ್ಬಂದಿ / ಡಿಇಒ ರವರುಗಳ ವೇತನ ಸಂದಾಯಗಳ ಪರಿಶೀಲನೆ–ಪಾವತಿಯಾಗದಿರುವ ವರದಿಗಳನ್ನು ತಯಾರಿಸುವುದು.

(i) ವಿವಿಧ ನಿಯತಾಂಕಗಳಿಗಾಗಿ (parameters) ಪೂರ್ವ–ರಚಿತ ನೋಟೀಸ್ ಪ್ರತಿಗಳನ್ನು ಒದಗಿಸಿರು ವುದು– (TMIS) ತಾಲ್ಲೂಕು ಎಂಐಎಸ್ ಕೋ–ಆರ್ಡಿನೇಟರ್‌ಗಳು ಅವುಗಳನ್ನು ಪಡೆದು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣ ಅಧಿಕಾರಿ/ಸಹಾಯಕ ನಿರ್ದೇಶಕರುಗಳ ಸಹಿ ಪಡೆಯುವುದು. ಮತ್ತು ಮೇಲೆ ಸೂಚಿಸಿರುವ ಅಂಶಗಳ ಅನುಪಾಲನೆ ಮಾಡದಿರುವವರಿಗೆ ಜಾರಿ ಮಾಡುವುದು.

(j) ಪ್ರತಿದಿನದ ಪ್ರಗತಿ ವರದಿಯನ್ನು ಸ್ವತಂತ್ರವಾಗಿ Mobile App- "MGNREGA Daily" ನಲ್ಲಿ ನಮೂದಿಸುವುದು.

## (vii) ತಾಲ್ಲೂಕು ತಾಂತ್ರಿಕ ಸಮನ್ವಯಕರು (TC)

(a) ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯ ರೂ.3 ಲಕ್ಷಗಳವರೆಗಿನ ಅಂದಾಜುಗಳುಳ್ಳ ಕಾಮಗಾರಿಗಳ ಅಳತೆಗಳ ತನಿಖೆಯನ್ನು ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರೊಂದಿಗೆ ಕೈಗೊಳ್ಳುವುದು (ಈ ಸಂಬಂಧದಲ್ಲಿ ಮಾರ್ಪಡಿಸಿದ ಸುತ್ತೋಲೆಗಳನ್ನು ಹೊರಡಿಸುವುದು)– ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

(b) ರೂ. 3 ಲಕ್ಷಗಳ ಅಂದಾಜುಗಳವರೆಗಿನ ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆ ನೀಡುವುದು. (ರಾಜ್ಯಸರ್ಕಾರದ ವತಿಯಿಂದ ಈ ಬಗ್ಗೆ ಮಾರ್ಪಡಿಸಿದ ಸುತ್ತೋಲೆ ಹೊರಡಿಸುವುದು). ಪ್ರತಿ ಗ್ರಾಮಪಂಚಾಯಿಯು 5ರಿಂದ 10 ಪ್ರತಿಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು.

(c) ಪ್ರತಿಯೊಬ್ಬ ಇಂಜಿನಿಯರ್‌ರವರ ಕಾರ್ಯದಕ್ಷತೆ ಪರಿಶೀಲಿಸುವುದು.

- ❖ ಎಲ್ಲಾ ಕಾಮಗಾರಿಗಳ (ಸಮುದಾಯ ಕಾಮಗಾರಿಗಳ) ಅಳತೆ ಕೈಗೊಂಡ ನಂತರ ಬಿಲ್ಲು ತಯಾರಿಸುವುದು.
- ❖ ವಾರದ ಎಲ್ಲಾ ಕಾಮಗಾರಿಗಳ ಮಸ್ಟರ್ ರೋಲ್ ಬಾಕಿ ಇರುವ ಅಳತೆ ಮಾಡುವುದು. ಅಂದರೆ ವಿಶೇಷವಾಗಿ ಎಲ್ಲೆಲ್ಲಿ ಮಸ್ಟರ್ ರೋಲ್ಸ್‌ಗಳು ಸಂದಾಯಕ್ಕೆ ಬಾಕಿ ಇರುವವುಗಳು.
- ❖ ಪ್ರತಿ ಇಂಜಿನಿಯರ್‌ರವರಿಂದ ಸ್ವಯಂ ಮೌಲ್ಯಮಾಪನ ಭರ್ತಿಮಾಡಿಸುವುದು.
- ❖ ಪ್ರತಿ ಇಂಜಿನಿಯರ್‌ರವರಿಂದ ಕಾಮಗಾರಿ ಸ್ಥಳದ ಭೇಟಿ ಮಾಡಿದ ವಿವರ.

(d) ಪ್ರವಾಸ ಕೈಗೊಂಡು ಪ್ರತಿ ತಿಂಗಳು ಕನಿಷ್ಠ 40 ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡುವುದು. (ವಾರಕ್ಕೆ 10ರಂತೆ) Mobile App ಬಳಸಿಕೊಂಡು ಜಿಯೋ ಸ್ಟಾಂಪ್ ಫೋಟೋವನ್ನು ತೆಗೆದುಕೊಳ್ಳುವುದು.

(e) end2end ನಲ್ಲಿ ಸ್ವಯಂ–ಮೌಲ್ಯಮಾಪನದ ನಮೂನೆ ಭರ್ತಿ ಮಾಡುವುದು.

## (viii) ಜಿಲ್ಲಾ ಎಂಐಎಸ್ ಕೋ–ಆರ್ಡಿನೇಟರ್ಸ್ (DMIS)

(a) ಜಿಲ್ಲೆಯಲ್ಲಿ ವಿತರಿಸಿರುವ ಎಲ್ಲಾ ಡಿಎಸ್‌ಸಿ ಡಾಂಗಾಲ್ಸ್‌ಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ತಯಾರಿಸುವುದು. ಅವುಗಳ ಅವಧಿ ಮೀರುವ ದಿನಾಂಕಗಳ ಬಗ್ಗೆ ನಿಗಾ ಇಡುವುದು. ಅವಧಿ ಮೀರುವ ಎರಡು ತಿಂಗಳ ಮುಂಚೆಯೇ ಡಿಎಸ್‌ಸಿ ನವೀಕರಿಸಲು ಅರ್ಜಿಗಳನ್ನು ರಾಜ್ಯದ ಎಂಐಎಸ್ ತಂಡಕ್ಕೆ ಸಲ್ಲಿಸುವುದು.

(b) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗಾಗಿ ತಾಲ್ಲೂಕುವಾರು, ಗ್ರಾಮಪಂಚಾಯತಿವಾರು, ತಾಂತ್ರಿಕ ಸಹಾಯಕ ಇಂಜಿನಿಯರ್/ತಾಂತ್ರಿಕ ಸಹಾಯಕರು (TAE/TAA) ವಾರು ದಿನವಹಿ ವರದಿಯನ್ನು ತಯಾರಿಸುವುದು.

- ❖ ಕೂಲಿ ಪಾವತಿ ಬಾಕಿ ಇರುವವುಗಳು–> ತಪ್ಪು ಎಸಗಿರುವವರ ಹೆಸರನ್ನು ನಮೂದಿಸುವುದು ಮತ್ತು ತಪ್ಪಿತಸ್ಥರಿಗೆ ನೋಟೀಸ್ ನೀಡುವ ಪ್ರಸ್ತಾವನೆಯನ್ನು ತಯಾರಿಸಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯವರ ಸಹಿಗೆ ಸಲ್ಲಿಸುವುದು.
- ❖ ನಿಗಧಿತ ದಿನಾಂಕಕ್ಕಿಂತ ಹೆಚ್ಚಿನ ಅವಧಿಗೆ ಬಾಕಿ ಇರುವ ಮಸ್ಟರ್ ರೋಲ್‌ಗಳು / ಮುಕ್ತಾಯವಾಗಿದ್ದರೂ NREGA soft ನಲ್ಲಿ ದಾಖಲಿಸಿಲ್ಲದಿರುವವು (ಮಾನವದಿನ/ಹಾಜರಾತಿ (PD/Attendance) ಆರೋಹಿಸಿಲ್ಲದಿರುವವು)

- ❖ ನಿಗಧಿತ ವಾರದಲ್ಲಿ ಶೂನ್ಯ ಮಾನವದಿನ ಸೃಜಿಸಿರುವ ಗ್ರಾಮ ಪಂಚಾಯತಿ– ಏಕೆ ಇತ್ಯಾದಿ?.
- ❖ ಕಳೆದ ಒಂದು ವಾರದಲ್ಲಿ ಯಾವ (TAE/TAA) ಗಳು ಶೂನ್ಯ ಮಾನವದಿನಗಳ ಸೃಜನೆಗೆ ಕಾರಣರಾಗಿರುವರೋ– ಅವರ ಒಂದು ವಾರದ ವೇತನವನ್ನು ಕಡಿತಗೊಳಿಸುವುದು.
- ❖ ಯಾವ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಪ್ರತಿದಿನದ Mobile App report ನ್ನು ಸ್ವೀಕೃತವಾಗಿಲ್ಲವೋ ಅವರು.
- ❖ ಹಣ ವರ್ಗಾವಣೆ ಆದೇಶಗಳು (FTOs) ಬಾಕಿ ಇರುವ ಎಲ್ಲ ಹಂತಗಳು ಅಂದರೆ (i) ಪಂಚಾಯತ್ ಅಭಿವೃದ್ಧಿ ಅಧಿಕಾರಿ (ii) ಅಧ್ಯಕ್ಷರು (iii) ಕಾರ್ಯನಿರ್ವಾಹಕ ಅಧಿಕಾರಿ (iv) ಎನ್‌ಐಸಿ (v) ಬ್ಯಾಂಕ್ (vi) ಫಲಾನುಭವಿಗಳು.

(c) ಟಿಎಂಐಎಸ್ (TMIS)ರವರ ಸ್ವಯಂ–ಮೌಲ್ಯಮಾಪನ ಮುದ್ರಿಸುವುದು ಹಾಗೂ ಅವುಗಳ ಸ್ಥಿತಿಗತಿ– ತಪಿತಸ್ಥ (TMIS) ರುಗಳ ಪಟ್ಟಿಯನ್ನು ಸೂಕ್ತ ಕ್ರಮಕ್ಕಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಸಲ್ಲಿಸುವುದು.

(d) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಧಿಯಡಿ ವೇತನ ಪಡೆಯುವ ಎಲ್ಲಾ ಹೊರಗುತ್ತಿಗೆ ಮತ್ತು ಇತರ ನೌಕರರ ವೇತನ ಸಂದಾಯದ ನಿಗಾ ವಹಿಸುವುದು.

(e) ಎಲ್ಲಾ ತಾಂತ್ರಿಕ ಸಮಸ್ಯೆಗಳ ಬಗ್ಗೆ ರಾಜ್ಯದ MIS ತಂಡದೊಂದಿಗೆ ಸಮನ್ವಯ ಸಾಧಿಸುವುದು.

(f) ಎಲ್ಲಾ ಮತ್ತು ಗ್ರಾಮ ಪಂಚಾಯತಿಯ ಡಿಇಓಗಳ ಕಾರ್ಯಕ್ಷಮತೆ ಮೌಲ್ಯಮಾಪನ ಮಾಡುವುದು- TMIS ಮತ್ತು ಗ್ರಾಮ ಪಂಚಾಯತಿಯ ಡಿಇಓಗಳು End2End ನಲ್ಲಿ ಸೂಕ್ತವಾಗಿ ದಾಖಲಿಕರಿಸುವುದನ್ನು ಖಚಿತಪಡಿಸಿಕೊಳ್ಳುವುದು.

(g) ಪ್ರತಿ ತಿಂಗಳು ಕನಿಷ್ಠ 10 ಗ್ರಾಮಪಂಚಾಯತಿಗೆ ಭೇಟಿಮಾಡುವುದು ಮತ್ತು NREG-soft ಮತ್ತು ಎಲ್ಲಾ ಗ್ರಾಮ ಪಂಚಾಯತಿಗಳ ತಾಂತ್ರಿಕ ಸಮಸ್ಯೆಗಳ ಬಗ್ಗೆ ಪರಿಶೀಲನೆ ಮಾಡುವುದು. ಭೇಟಿ ಸಮಯದಲ್ಲಿ Mobile-App ಬಳಸಿ ಜಿಯೋಸ್ಟಾಂಪ್ಡ್ ಫೋಟೋ ತೆಗೆದುಕೊಂಡು ಅಳವಡಿಸುವುದು

### ix. ಸಹಾಯಕ ಜಿಲ್ಲಾ ಕಾರ್ಯಕ್ರಮ ಸಮನ್ವಯಕರು (ಎಡಿಪಿಸಿ)

(a) ಈ ಕೆಳಕಂಡ ಅಂಶಗಳ ಕುರಿತು DMIS ಮತ್ತು TMIS ಗಳಿಂದ ಎಲ್ಲಾ ತಾಲ್ಲೂಕು, ಗ್ರಾಮಪಂಚಾಯತಿಗಳು ಮತ್ತು ಸಿಬ್ಬಂದಿಯಿಂದ ದೈನಂದಿನ ವರದಿ ಪಡೆಯುವುದು.

- ❖ ಬಾಕಿ ಇರುವ ಕೂಲಿ ಪಾವತಿ
- ❖ ಅವಧಿ ಮೀರಿದ ದಿನಾಂಕದ ನಂತರವೂ ಹಿಂತಿರುಗಿಸದಿರುವ ಮಸ್ಟರ್ ರೋಲ್‌ಗಳು
- ❖ ಎಲ್ಲಾ ಹಂತದಲ್ಲಿ ಬಾಕಿ ಇರುವ ಹಣ ವರ್ಗಾವಣೆ ಆದೇಶಗಳು (FTOs)
- ❖ ಹೊರಗುತ್ತಿಗೆ ಇಂಜನಿಯರ್‌ರವರಿಂದ ಸೃಜಿಸಲ್ಪಟ್ಟ ಮಾನವ ದಿನಗಳು (ಅವರ ಬಿಲ್ಲಿಂಗ್ ಸಾಮಾರ್ಥ್ಯದ ಮೌಲ್ಯಕ್ಕೆ ಅನುಗುಣವಾಗಿ)

(b) ಗ್ರಾಮ ಪಂಚಾಯತಿಗಳ ಡಾಟ ಎಂಟ್ರಿ ಆಪರೇಟರ್‌ಗಳ ಸಂಬಳ ಬಾಕಿಯು ಸೇರಿದಂತೆ ಎಲ್ಲಾ ಹೊರಗುತ್ತಿಗೆಯ ಸಿಬ್ಬಂದಿಗಳ ಪಾವತಿಗಳನ್ನು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಪಾವತಿಮಾಡುವುದು.

(c) ಬಾಕಿ ಉಳಿಸಿದವರ ವಿರುದ್ಧ ನೋಟೀಸ್‌ನ ಕರಡು ತಯಾರಿಸುವ ಬಗ್ಗೆ ಪ್ರತಿದಿನ ವರದಿ ಸಹಿ ಮಾಡಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ಹೊರಡಿಸುವುದು.

(d) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿ ಕಾರ್ಯನಿರ್ವಹಣೆ ಸಂಪೂರ್ಣ ವಿವರ ನೀಡುವುದು.

(e) ಇವತ್ತಿನವರೆಗಿನ ಡಿಎಸ್.ಸಿ ಡಾಂಗ್ಲ್ ಹೊರಡಿಸುವುದು ಮತ್ತು ಮ್ಯಾಪಿಂಗ್/ಸ್ಥಿತಿ ಉಪಯೋಗ ಹೊರಡಿಸುವುದು. ಮುಂದಿನ 2 ತಿಂಗಳಲ್ಲಿ ಪರಿಶೀಲನೆಗೆ ಬರುವ ಡಿಎಸ್.ಸಿ ಗಳನ್ನು ಗುರ್ತಿಸುವುದು.

(f) ಪ್ರತಿ ತಿಂಗಳು ಕನಿಷ್ಠ 10 ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಜಿಯೋ ಸ್ಟಾಂಪ್‌ನ ಫೋಟೋ ವನ್ನು Mobile-Appನಲ್ಲಿ ತೆಗೆಯುವುದು.

## X. ಉಪ ಕಾರ್ಯದರ್ಶಿ/ಪಿಡಿ (ಮಹಾತ್ಮಗಾಂಧಿ ನರೇಗಾ ಪ್ರಭಾರ)

(a) ಹಿಂದಿನ ಕಂಡಿಕೆಗಳಲ್ಲಿ ವಿವರಿಸಿದಂತೆ ತಾಲ್ಲೂಕು, ಗ್ರಾಮಪಂಚಾಯತಿ ಸಿಬ್ಬಂದಿಯ ಕಾರ್ಯನಿರ್ವಹಣೆಯ ಪ್ರತಿ ದಿನ ಪರಿಶೀಲಿಸಬೇಕು.

(b) ಪ್ರತಿವಾರವು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಈ ಕೆಳಕಂಡ ಅಂಶಗಳ ಮೇಲೆ ತೆಗೆದುಕೊಳ್ಳುವದು.

* ಬಾಕಿ ಇರುವ ಕೂಲಿ ಪಾವತಿಗಳು.
* ಮಸ್ಟರ್ ರೋಲ್‌ಗಳನ್ನು (e-NMR) ಹಿಂತಿರುಗಿಸದಿರುವುದು.
* ಬರ ನಿವಾರಿಸುವ ಕಾರ್ಯಕ್ರಮಗಳು.
* ಕಾರ್ಮಿಕರನ್ನು ಹೊರಗಿಡುವ ಯಾವುದಾದರೂ ಯಂತ್ರಗಳ ಬಳಕೆ.

(c) ಬ್ಯಾಂಕ್ ಮತ್ತು ರಾಜ್ಯ ಸರ್ಕಾರಗಳ ಜೊತೆ ಯಾವುದಾದರೂ ಪಾವತಿ ಮಾಡುವ ಬಗ್ಗೆ ಸಮನ್ವಯ ಸಾಧಿಸುವುದು.

(d) ಮಹಾತ್ಮ ಗಾಂಧಿ ನರೇಗಾ ಯೋಜನೆಗೆ ಸಂಬಂಧಿಸಿದ ಯಾವುದಾದರೂ ಮುಖ್ಯ ವಿಷಯಗಳಿದ್ದಲ್ಲಿ ಅದನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಮತ್ತು ರಾಜ್ಯ ಸರ್ಕಾರದ ಗಮನ ಸೆಳೆದು ಮಾತನಾಡುವುದು.

(e) ತಾಲ್ಲೂಕನ್ನು ಭೇಟಿ ಮಾಡಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣ ಅಧಿಕಾರಿ, ಜಿಲ್ಲ ಸಹಾಯಕ ಕಾರ್ಯಕ್ರಮ ಅಧಿಕಾರಿ DMIS ಮತ್ತು TMIS ಹೊರಗುತ್ತಿಗೆಯ ಇಂಜನಿಯರ್ ವಾರಕ್ಕೆ ಒಮ್ಮೆ ಪರಿಶೀಲಿಸುವುದು. ಪರಿಶೀಲನೆಯ ಎಲ್ಲಾ ಅಂಶಗಳನ್ನು ತಾಲ್ಲೂಕಿನ ವಾರದ ಪರಿಶೀಲನೆ ಕಾಲದಲ್ಲಿ ಪರಿಶೀಲಿಸುವುದು.

(f) ಜಾಬ್ ಚಾರ್ಟ್‌ನಲ್ಲಿ ನಿಗದಿಪಡಿಸಿದ ಕಾರ್ಯ ನಿರ್ವಹಿಸದ ಹೊರಗುತ್ತಿಗೆ ನೌರರನ್ನು ವಜಾಗೊಳಿಸುವ ಕ್ರಮ ಕೈಗೊಳ್ಳಬೇಕು.

(g) ಮಹಾತ್ಮಗಾಂಧಿ ನರೇಗಾ ಯೋಜನೆ ಅಡಿ ಹೊರಗುತ್ತಿಗೆ ನೌಕರರ ಪ್ರತಿ ತಿಂಗಳ ಗೌರವಧನದ ಬಾಕಿಯನ್ನು ಪರಿಶೀಲಿಸಿ ಅದನ್ನು ಶೂನ್ಯಕ್ಕೆ ತಂದು, ಮಾನವ ಶಕ್ತಿ ಏಜನ್ಸಿ ಕಾರ್ಯಕ್ರಮವನ್ನು ಪರಿಶೀಲಿಸುವುದು.

(h) ಪ್ರತಿ ತಿಂಗಳು ಕನಿಷ್ಠ 10 ಗ್ರಾಮ ಪಂಚಾಯತಿ ಕಛೇರಿಗಳಿಗೆ ಭೇಟಿ ನೀಡಬೇಕು. ಹೀಗೆ ಮಾಡುವುದರಿಂದ ಹಿಂದಿನ ತಿಂಗಳಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿ ಹಿಂದಿನ ತಿಂಗಳು ನಡೆಸಿದ ಪರಿಶೀಲನೆ ಮಾಡಿದ್ದನ್ನು ತಿಳಿಯಬಹುದು. ಪರಿಶೀಲನೆ ಅಂಶಗಳು ಈ ಕೆಳಕಂಡಂತಿರಬೇಕು.

* ಬಾಕಿ ಇರುವ ಕೂಲಿ ಪಾವತಿಗಳು.
* ಮಸ್ಟರ್ ರೋಲ್ಸ್ ಹಿಂತಿರುಗಿಸದೆ ಬಾಕಿ ಉಳಿಸಿಕೊಂಡಿರುವ ಬಗ್ಗೆ.

* ಅಳತೆ ಮಾಡದಿರುವ ಅಥವಾ ಬಿಲ್ಲು ಮಾಡದಿರುವ ಕಾಮಗಾರಿಗಳನ್ನು ಇಂಜನಿಯರುಗಳು ಪರಿಶೀಲಿಸುವುದು.

* ಕಾರ್ಯನಿರ್ವಹಣಾ ಅಧಿಕಾರಿಯವರು ಮಹಾತ್ಮಗಾಂಧಿ ನರೇಗಾ ಯೋಜನೆಯ ಅನುಮೋದನೆ ಪಡೆದು, ಆ ಬಗ್ಗೆ ತಾಲ್ಲೂಕು ಪಂಚಾಯತಿಯು ಕೈಗೊಂಡ ಗ್ರಾಮ ಪಂಚಾಯತಿಯ ಕಾಮಗಾರಿ ಯೋಜನೆ.

* ಕಾರ್ಮಿಕರ ಬೇಡಿಕೆ ಪೂರೈಸಲು ಹೊಸ ಕಾಮಗಾರಿ ಪ್ರಾರಂಭಿಸುವುದು.

(i) ಮಹಾತ್ಮಗಾಂಧಿ ನರೇಗಾ ಯೋಜನೆಯ ಎಲ್ಲಾ ಪ್ರಕಾರಗಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮನ್ವಯ ನಡೆಸುವುದು.

(j) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಇತರ ಜಿಲ್ಲಾ ಸಿಬ್ಬಂದಿ ಬಗ್ಗೆ ವಾರದ ವರದಿಯನ್ನು ರಾಜ್ಯ ಆಯುಕ್ತಾಲಯಕ್ಕೆ ಸಲ್ಲಿಸುವುದು.

### (xi) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣ ಅಧಿಕಾರಿ

(a) ಮಹಾತ್ಮಗಾಂಧಿ ನರೇಗಾ ಯೋಜನೆಯ ಅನುಷ್ಠಾನದ ಬಗ್ಗೆ ಎಲ್ಲಾ ಮುಖ್ಯ ಅಂಶಗಳನ್ನು ಪ್ರತಿ ದಿನ ಪರಿಶೀಲಿಸುವುದು.

– ಕಾಮಗಾರಿಯ ಬಾಕಿ ಇರುವ ಕೂಲಿ ಪಾವತಿ.

– ಮಸ್ಟರ್ ರೋಲ್ ಹೊರಡಿಸುವುದು, ಹಾಜರಾತಿ ಮತ್ತು ಅದನ್ನು ಹಿಂತಿರುಗಿಸುವುದು.

– ಬಿಲ್ಲಿಂಗ್ ಮತ್ತು ಅಳತೆ ಕಾರ್ಯನಿರ್ವಹಿಸುವುದು.

– ಕಡೇಪಕ್ಷ ಈ ಟಿಪ್ಪಣಿಯಲ್ಲಿ ಸೂಚಿಸಿದಂತೆ. ಸಂಬಂಧಪಟ್ಟವರ ಕಾಮಗಾರಿಯ ಸಮನ್ವಯ ಸಾಧಿಸುವುದು ಮತ್ತು ಕರ್ತವ್ಯ ನಿರ್ವಹಣೆ ಮಾಡುವುದು.

– ತಾಲ್ಲೂಕುವಾರು/ ಗ್ರಾಮ ಪಂಚಾಯತಿವಾರು/ ಇಂಜನಿಯರ್‌ಗಳ ಕಾಮಗಾರಿಯ ಮಾನವ ದಿನಗಳನ್ನು ಪರಿಶೀಲಿಸುವುದು.


– ಕಾಮಗಾರಿಯ ವಿವರವನ್ನು Mobile-App ನಲ್ಲಿ ಪ್ರತಿದಿನ ಮಂಡಿಸುವುದು.

(b) ಸಾಮಗ್ರಿಗಳ ಪಾವತಿ ಮತ್ತು ಮಾರಾಟಗಾರರ ನಿರ್ವಹಣೆ ವ್ಯವಹಾರ.

(c) ಮಹಾತ್ಮಗಾಂಧಿ ನರೇಗಾ ಯೋಜನೆಗೆ ಕಾಯ್ದೆ, ನಿಯಮ ಮತ್ತು ಮಾರ್ಗಸೂಚಿಗಳನ್ವಯ ಮಹಾತ್ಮಗಾಂಧಿ ನರೇಗಾ ಕಾಯ್ದೆಯ ಸೆಕ್ಷನ್–14ರ ಪ್ರಕಾರ ಎಲ್ಲಾ ಶಾಸನಬದ್ಧ ಜವಾಬ್ದಾರಿಗಳು ನಿರ್ವಹಿಸುವುದು.

(d) ಪ್ರತಿ ಗ್ರಾಮಪಂಚಾಯತಿಗಳು ಮತ್ತು ಆಡಳಿತಾತ್ಮಕ ಇಲಾಖೆ ಕಾಮಗಾರಿಗಳ ಸಕಾಲಿಕ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಬೇಕು.

(e) ಸಿಬ್ಬಂದಿಯ ಕಾರ್ಯ ಕ್ಷಮತೆಯ ಮೌಲ್ಯಮಾಪನ ಪರಿಶೀಲನೆ ಮಾಡುವುದು.



**ಮುನೀಷ್ ಮೌದ್ಗಿಲ್**

ಆಯುಕ್ತರು, ಗ್ರಾಮೀಣಾಭಿವೃದ್ಧಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ದಿನಾಂಕ: 19.10.2015 ರಂದು ನಡೆದ ನೂತನವಾಗಿ ಆಯ್ಕೆಯಾದ ಕಿರಿಯ ಇಂಜಿನಿಯರ್‌ಗಳ ಸಂಕಲ್ಪ ದಿನ ಕಾರ್ಯಕ್ರಮ



ದಿನಾಂಕ: 19.10.2015 ರಂದು ನಡೆದ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಗ್ರಾಮವಾರು ಮಾನವ ಅಭಿವೃದ್ಧಿ ಸೂಚ್ಯಂಕ ಪುಸ್ತಕ ಬಿಡುಗಡೆ ಸಮಾರಂಭ




ದಿನಾಂಕ 19.10.2015 ರಂದು ನಡೆದ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ ಮತ್ತು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಧಾರವಾಡ ಇವರುಗಳೊಂದಿಗೆ ಒಡಂಬಡಿಕೆ ಸಮಾವೇಶ.



ದಿನಾಂಕ 20.10.2015ರಂದು ಕೇಂದ್ರ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರಾದ ಶ್ರೀ ಬೀರೇಂದ್ರ ಸಿಂಗ್‌ರವರು ರಾಜ್ಯದ ಗ್ರಾ. ಅ. ಮತ್ತು ಪಂ.ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲರವರೊಂದಿಗೆ ಇಲಾಖೆ ಬಗ್ಗೆ ಚರ್ಚಿಸುತ್ತಿರುವುದು.

# KARNATAKA VIKAS : NOVEMBER 2015

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road,
Bengaluru on 9th, 10th, 11th of Every Month




**ದಿನಾಂಕ: 2.10.2015 ರಂದು ನಡೆದ ಗಾಂಧಿ ಗ್ರಾಮ ಪುರಸ್ಕಾರ ವಿತರಣಾ ಸಮಾರಂಭದ ವಸ್ತು ಪ್ರದರ್ಶನ**


Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00